ಶುಕ್ರವಾರ, ಸೆಪ್ಟೆಂಬರ್ 27, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದುರ್ಗಾ ಪೂಜೆ
ಪಶ್ಚಿಮ ಬಂಗಾಳದ ಪ್ರಸಿದ್ಧ ದುರ್ಗಾ ಪೂಜೆಗಾಗಿ ನದಿಯಾ ಜಿಲ್ಲೆಯಲ್ಲಿ ಕಲಾವಿದರೊಬ್ಬರು ದುರ್ಗಾ ಮಾತೆಯ ಮೂರ್ತಿಗೆ ಅಂತಿಮ ಸ್ಪರ್ಶ ನೀಡಿದರು



ನ್ಯಾಯಿಕ ಗ್ರಹಿಕೆ ಇಲ್ಲ ಎಂದು ಮೇಲ್ಮನವಿ ಸಲ್ಲಿಸಲು ಚರ್ಚೆ: ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಪೊನ್ನಣ್ಣ

‘ಹೈಕೋರ್ಟ್ ಆದೇಶದಲ್ಲಿ ಹಲವು ಲೋಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮವನ್ನು ಎತ್ತಿಹಿಡಿದ ಹೈಕೋರ್ಟ್ ಆದೇಶದಲ್ಲಿ ಹಲವು ಲೋಪಗಳಿವೆ. ಆ ತೀರ್ಪಿನಲ್ಲಿ ನ್ಯಾಯಿಕ ಗ್ರಹಿಕೆ ಸಮಂಜಸವಾಗಿಲ್ಲ ಎಂದು ಮೇಲ್ಮನವಿ ಸಲ್ಲಿಸುವ ಬಗ್ಗೆ ಚರ್ಚಿಸಲಾಗುತ್ತಿದೆ’ ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಹೇಳಿದರು.

ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಜತೆ ಚರ್ಚಿಸಲು ದೆಹಲಿಗೆ ತೆರಳಿರುವ ಅವರು, ‘ರಾಜ್ಯಪಾಲರು ತನಿಖೆಗೆ ಅನುಮತಿ ನೀಡುವಲ್ಲಿ ನ್ಯಾಯಿಕ ಗ್ರಹಿಕೆ ಸರಿಯಾಗಿಲ್ಲ ಎಂದೇ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ವಾಸ್ತವಾಂಶ, ಕಾರಣ ಮತ್ತು ಅಂತಿಮ ನಿರ್ಧಾರವು ಪರಸ್ಪರ ಹೊಂದಿಕೆಯಾಗಬೇಕು. ಇವುಗಳಲ್ಲಿ ಯಾವೊಂದು ಕೊಂಡಿ ಇಲ್ಲವಾದರೂ, ನ್ಯಾಯಿಕ ಗ್ರಹಿಕೆ ಇಲ್ಲವಾಗುತ್ತದೆ. ನ್ಯಾಯಾಂಗಕ್ಕೂ ಇದು ಅನ್ವಯವಾಗುತ್ತದೆ. ಇದೇ ಆಧಾರದಲ್ಲಿ ಮೇಲ್ಮನವಿ ಸಲ್ಲಿಸಬೇಕಾಗುತ್ತದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ಹೈಕೋರ್ಟ್‌ನ ತೀರ್ಪಿನಲ್ಲಿ ಇಂತಹ ಹಲವು ಲೋಪಗಳಿವೆ. ಅವುಗಳನ್ನು ಪರಿಶೀಲಿಸಿ, ಸೂಕ್ತ ರೀತಿಯಲ್ಲಿ ಮೇಲ್ಮನವಿ ಸಲ್ಲಿಸಲಾಗುತ್ತದೆ. ಈ ಸಂಬಂಧ ಅಭಿಷೇಕ್ ಮನು ಸಿಂಘ್ವಿ ಅವರ ಜತೆ ಈಗಾಗಲೇ ಚರ್ಚಿಸಲಾಗಿದೆ. ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ, ಮುಂದಿನ ನಡೆ ನಿರ್ಧರಿಸೋಣ ಎಂದು ಅವರು ಹೇಳಿದ್ದಾರೆ. ಅವರ ಸಲಹೆಗಾಗಿ ಕಾಯುತ್ತಿದ್ದೇವೆ’ ಎಂದು ಮಾಹಿತಿ ನೀಡಿದರು.

ಊಹೆಯ ಮೇಲೆ ತನಿಖೆಗೆ ಆದೇಶಿಸುವ ಅಧಿಕಾರವಿಲ್ಲ: ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಗುರುವಾರ ಮಾತನಾಡಿದ್ದ ಅವರು, ‘ಕೇವಲ ಊಹೆಗಳ ಆಧಾರದ ಮೇಲೆ ತನಿಖೆಗೆ ಆದೇಶಿಸುವ ಅಧಿಕಾರ ಹೈಕೋರ್ಟ್‌ಗೆ ಇಲ್ಲ ಎಂದು ಸಂವಿಧಾನದ 226ನೇ ವಿಧಿ ಹೇಳುತ್ತದೆ. ಸಿದ್ದರಾಮಯ್ಯ ವಿವಿಧ ಹುದ್ದೆಗಳಲ್ಲಿ ಇದ್ದಾಗ ಮತ್ತು ಮುಖ್ಯಮಂತ್ರಿ ಎಂಬ ಕಾರಣಕ್ಕೆ ಅಧಿಕಾರದ ಪ್ರಭಾವ ಬಳಕೆಯಾಗಿದೆ ಹಾಗೂ ಅಧಿಕಾರ ದುರ್ಬಳಕೆಯಾಗಿದೆ ಎಂದು ಹೈಕೋರ್ಟ್ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಸಿದ್ದರಾಮಯ್ಯ ಅವರ ಪಾತ್ರವೇನು ಎಂಬುದನ್ನು ಯಾರೂ ಹೇಳಿಲ್ಲ, ಹೈಕೋರ್ಟ್‌ನ ಆದೇಶದಲ್ಲೂ ಅದಿಲ್ಲ’ ಎಂದರು.

‘ಪಾರ್ವತಿ ಅವರಿಗೆ ಹಂಚಿಕೆ ಮಾಡಲಾದ 14 ನಿವೇಶನಗಳ ಮೌಲ್ಯ ₹56 ಕೋಟಿಯಷ್ಟಾಗುತ್ತದೆ ಎಂದು ಹೈಕೋರ್ಟ್ ತೀರ್ಪಿನಲ್ಲಿದೆ. ಜಮೀನಿನ ಮೌಲ್ಯವನ್ನು ನ್ಯಾಯಾಲಯ ನಿರ್ಧರಿಸಲು ಬರುತ್ತದೆಯೇ? ವಿಧಾನಸೌಧದ ಮೌಲ್ಯ ₹10 ಎಂದು ನಾನು ಹೇಳಿದರೆ, ಒಪ್ಪುತ್ತೀರಾ? ಈ ಆದೇಶದಲ್ಲಿ ನ್ಯಾಯಮೂರ್ತಿ ಹೇಳಿದ್ದನ್ನು ಒಪ್ಪಲು ಸಾಧ್ಯವಿಲ್ಲ’ ಎಂದರು.



ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಅರ್ಜಿ ಸಲ್ಲಿಸಬೇಕೇ ಅಥವಾ ಸುಪ್ರೀಂ ಕೋರ್ಟ್‌ಗೆ ನೇರವಾಗಿ ಅರ್ಜಿ ಸಲ್ಲಿಸಬೇಕೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ

ಎ.ಎಸ್.ಪೊನ್ನಣ್ಣ, ಮುಖ್ಯಮಂತ್ರಿಯ ಕಾನೂನು ಸಲಹೆಗಾರ

ಪಕ್ಷದ ಹಿರಿಯ ನಾಯಕ ಕೋಳಿವಾಡ ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಹಾಗೆಂದು, ನಾನು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ


ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಸಿ.ಎಂ ರಾಜೀನಾಮೆ ನೀಡುವುದು ಸೂಕ್ತ’

ಬೆಂಗಳೂರು: ‘ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಹೈಕೋರ್ಟ್ ಮತ್ತು ಜನಪ್ರತಿನಿಧಿಗಳ ನ್ಯಾಯಾಲಯ ಅನುಮತಿ ನೀಡಿದ್ದು, ಪಕ್ಷದ ಹಿತದೃಷ್ಟಿಯಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ಉತ್ತಮ’ ಎಂದು ಮಾಜಿ ವಿಧಾನಸಭಾಧ್ಯಕ್ಷ, ಕಾಂಗ್ರೆಸ್‌ನ ಕೆ.ಬಿ. ಕೋಳಿವಾಡ ಹೇಳಿದರು. ಅವರ ಈ ಹೇಳಿಕೆಗೆ ಕಾಂಗ್ರೆಸ್ ನಾಯಕರಿಂದ ವಿರೋಧ ವ್ಯಕ್ತವಾಗಿದೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಕೋಳಿವಾಡ, ‘ಪಕ್ಷಕ್ಕಾಗುವ ಮುಜುಗರ ತಪ್ಪಿಸಲು ಸಿದ್ದರಾಮಯ್ಯ ಸದ್ಯ ರಾಜೀನಾಮೆ ನೀಡುವುದು ಸೂಕ್ತ. ತನಿಖೆಯಲ್ಲಿ ಆರೋಪಮುಕ್ತರಾದರೆ ಮತ್ತೆ ಅವರೇ ಮುಖ್ಯಮಂತ್ರಿಯಾಗಲಿ’ ಎಂದರು.

‘40 ವರ್ಷಗಳ ರಾಜಕೀಯ ಜೀವನದಲ್ಲಿ ಸಿದ್ದರಾಮಯ್ಯ ಕಪ್ಪುಚುಕ್ಕೆ ಇಲ್ಲದೆ, ಕಳಂಕರಹಿತರಾಗಿದ್ದಾರೆ. ಹೈಕಮಾಂಡ್ ಸೇರಿದಂತೆ 136 ಶಾಸಕರ ಸಂಪೂರ್ಣ ಬೆಂಬಲ ಅವರಿಗಿದೆ. ಅವರು ನಿರ್ದೋಷಿ ಎಂಬುದರಲ್ಲಿ ಎರಡು ಮಾತಿಲ್ಲ. ಬಿಜೆಪಿ– ಜೆಡಿಎಸ್‌ನವರ ರಾಜಕೀಯ ಪಿತೂರಿಯಿಂದಾಗಿ ಸಿದ್ದರಾಮಯ್ಯ ಅವರ ವಿರುದ್ಧ ಖಾಸಗಿ ವ್ಯಕ್ತಿಗಳು ದೂರು ನೀಡಿದ್ದಾರೆ. ತನಿಖೆಯ ಬಳಿಕ ಅವರು ನಿರ್ದೋಷಿಯಾಗಿ ಹೊರ ಬರುತ್ತಾರೆಂಬ ವಿಶ್ವಾಸ ನನಗಿದೆ’ ಎಂದರು.



ಕೆ.ಬಿ. ಕೋಳಿವಾಡ

‘ಸಿದ್ದರಾಮಯ್ಯ ರಾಜೀನಾಮೆ ಕೊಡದಿದ್ದರೆ, ರಾಜೀನಾಮೆ ಕೇಳುವುದು ಹೈಕಮಾಂಡ್‌ಗೆ ಬಿಟ್ಟಿದ್ದು’ ಎಂದೂ ಹೇಳಿದರು.

ತಮ್ಮ ಹೇಳಿಕೆಗೆ ಪಕ್ಷದ ಕೆಲವು ನಾಯಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಪ್ರತಿಕ್ರಿಯಿಸಿದ ಕೋಳಿವಾಡ, ‘ಹೈಕಮಾಂಡ್ ನೋಟಿಸ್ ನೀಡಿದರೂ ಉತ್ತರ ನೀಡುತ್ತೇನೆ. ನಾನೇನೂ ಪಕ್ಷದ ವಿರುದ್ಧ ಮಾತನಾಡಿಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಷ್ಟೆ’ ಎಂದರು.

‘ಕೋಳಿವಾಡ ಯಾರು?’: ‘ಕೋಳಿವಾಡ ಯಾರು?’ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಪ್ರಶ್ನಿಸಿದರು.

‘ಮುಖ್ಯಮಂತ್ರಿಯಿಂದ ರಾಜೀನಾಮೆ ಕೇಳಲು ಕೋಳಿವಾಡ ಯಾರು? ನಮ್ಮ ಪಕ್ಷ ಹೈಕಮಾಂಡ್ ಪಕ್ಷ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ನಮ್ಮ ನಾಯಕರು. ಅವರು ಹೇಳಬೇಕು’ ಎಂದರು.

‘ಕೋಳಿವಾಡ ಹೇಳಿಕೆ ಅವರ ವೈಯಕ್ತಿಕ ಅಭಿಪ್ರಾಯ. ಅದು ಪಕ್ಷದ ಅಭಿಪ್ರಾಯ ಅಲ್ಲ’ ಎಂದು ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ರಾಜೀನಾಮೆ ಪ್ರಸ್ತಾವವೇ ಇಲ್ಲ: ಡಿಕೆಶಿ

‘ರಾಜ್ಯದ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ನಾನು ಹೇಳುತ್ತೇನೆ, ಮುಖ್ಯಮಂತ್ರಿ ರಾಜೀನಾಮೆ ನೀಡುವ ಪ್ರಸ್ತಾವವೇ ಇಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೋಳಿವಾಡ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಮುಡಾ ಪ್ರಕರಣ ಬಿಜೆಪಿ– ಜೆಡಿಎಸ್ ಷಡ್ಯಂತ್ರ ಅಷ್ಟೆ’ ಎಂದರು.

‘ಕಾಂಗ್ರೆಸ್‌ನ ಬೆಳವಣಿಗೆ ಮತ್ತು ಐದು ಗ್ಯಾರಂಟಿ ಯೋಜನೆಗಳನ್ನು ವಿರೋಧ ಪಕ್ಷಗಳಿಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪ್ರಧಾನಿ ಮೋದಿಯವರೂ ರಾಜಕಾರಣ ಮಾಡುತ್ತಿದ್ದಾರೆ. ಅವರು ಕಳಂಕಿತ ಸಚಿವರನ್ನು ತಮ್ಮ ಸಂಪುಟದಲ್ಲಿ ಯಾಕೆ ಇಟ್ಟುಕೊಂಡಿದ್ದಾರೆ’ ಎಂದೂ ಪ್ರಶ್ನಿಸಿದರು.

ಸಿಬಿಐ ತನಿಖೆ ಬಗ್ಗೆ ಭಯವೇ?

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಿಬಿಐ ತನಿಖೆಯ ಭಯ ಕಾಡಿದ್ದರಿಂದಲೇ ಸಿಬಿಐಗೆ ನೀಡಿದ್ದ ಮುಕ್ತ ತನಿಖೆಯ ಅನುಮತಿಯನ್ನು ಹಿಂದಕ್ಕೆ ಪಡೆಯಲಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.



ಆರ್. ಅಶೋಕ್

ಸಚಿವ ಸಂಪುಟದ ನಿರ್ಣಯದ ಬಗ್ಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಈ ಮೂಲಕ ತಾವು ತಪ್ಪಿತಸ್ಥರು ಎನ್ನುವುದನ್ನು ಸಿದ್ದರಾಮಯ್ಯ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ’ ಎಂದು ಹೇಳಿದರು.

‘ತಮ್ಮದೇನೂ ತಪ್ಪಿಲ್ಲ ಎನ್ನುತ್ತಿರುವ ಅವರಿಗೆ ಸಿಬಿಐ ಬಗ್ಗೆ ಭಯವೇಕೆ? ಈ ರೀತಿ ಅಡ್ಡದಾರಿ ಹುಡುಕಿ ಅನಿವಾರ್ಯವಾದದ್ದನ್ನು ಮುಂದೂಡಿ ರಾಜ್ಯದ ಜನರ ಮುಂದೆ ಇನ್ನಷ್ಟು ಸಣ್ಣವರಾಗುವ ಬದಲು, ಆದಷ್ಟು ಬೇಗ ರಾಜೀನಾಮೆ ಕೊಟ್ಟು ಗೌರವ ಉಳಿಸಿಕೊಳ್ಳಲಿ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ಐಟಿ ಅಧಿಕಾರಿಗಳಿಂದ ಜೈಲಿನಲ್ಲೇ ನಟ ದರ್ಶನ್ ವಿಚಾರಣೆ

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಬಳಿಕ ಮೃತದೇಹದ ವಿಲೇವಾರಿಗೆ ಆರೋಪಿ, ನಟ ದರ್ಶನ್ ಭಾರಿ ಪ್ರಮಾಣದ ಹಣ ಖರ್ಚು ಮಾಡಿರುವುದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆ (ಐಟಿ) ಐವರು ಅಧಿಕಾರಿಗಳು ಗುರುವಾರ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಅವರನ್ನು ವಿಚಾರಣೆಗೆ ಒಳಪಡಿಸಿದರು.

ಮಧ್ಯಾಹ್ನ 12ರಿಂದ ಸಂಜೆ 7.30ರವರೆಗೆ ವಿಚಾರಣೆ ನಡೆಯಿತು. ಶುಕ್ರವಾರವೂ ವಿಚಾರಣೆ ಮುಂದುವರೆಯಲಿದೆ.

‘ದರ್ಶನ್ ಪರ ಇಬ್ಬರು ಲೆಕ್ಕ ಪರಿಶೋಧಕರು ಹಾಜರಿದ್ದರೂ, ಅವರನ್ನು ಕೊಠಡಿಯಿಂದ ಹೊರಗೆ ಇರಿಸಲಾಗಿತ್ತು. ದರ್ಶನ್‌ಗೆ ಅಗತ್ಯವೆನಿಸಿದಾಗ ಮಾತ್ರ ಇಬ್ಬರೂ ಲೆಕ್ಕ ಪರಿಶೋಧಕರು ಐಟಿ ಅಧಿಕಾರಿಗಳಿಗೆ ದಾಖಲೆ ಒದಗಿಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

ದರ್ಶನ್ ನಟಿಸುತ್ತಿರುವ ‘ಡೆವಿಲ್’ ಚಿತ್ರದ ನಿರ್ಮಾಪಕ ಜೆ.ಬಿ.ಪ್ರಕಾಶ್ ಮತ್ತು ಸುನೀಲ್ ಕುಮಾರ್, ಶ್ರೀನಿವಾಸ ಎಂಬುವರು ವಿಚಾರಣೆ ಮಧ್ಯೆಯೇ ಬಳ್ಳಾರಿ ಜೈಲಿಗೆ ಭೇಟಿ ನೀಡಿದ್ದರು. ಅವರನ್ನು ಭೇಟಿಯಾಗಲು ಐಟಿ ಅಧಿಕಾರಿಗಳು ದರ್ಶನ್‌ಗೆ ಅವಕಾಶ ಕಲ್ಪಿಸಿಕೊಟ್ಟರು.



ದರ್ಶನ್ ಜೊತೆ ಧೂಮಪಾನ ಸೀನ ವಿರುದ್ಧದ ಪ್ರಕರಣಕ್ಕೆ ತಡೆ

ಬೆಂಗಳೂರು: ಇತ್ತೀಚೆಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಒಳಾವರಣದಲ್ಲಿ; ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಧೂಮಪಾನ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಜೊತೆ ಕುಳಿತಿದ್ದವರ ವಿರುದ್ಧ ನಿಷೇಧಿತ ತಂಬಾಕು ಸೇವನೆ ಹಾಗೂ ಕಾರಾಗೃಹ ನಿಯಮ ಉಲ್ಲಂಘಿಸಿದ ಆರೋಪದಡಿ ಕೈದಿ ಶ್ರೀನಿವಾಸ್ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಶ್ರೀನಿವಾಸ್ ಅಲಿಯಾಸ್ ಕುಳ್ಳ ಸೀನ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಶ್ರೀನಿವಾಸ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಜೆ.ಚೌಟ, ‘ಆರೋಪಗಳಿಗೂ ಮತ್ತು ದೂರಿನಲ್ಲಿ ದಾಖಲಿಸಿರುವ ಕಲಂಗಳಿಗೂ ತಾಳೆಯಾಗುವುದಿಲ್ಲ. ಅಂತೆಯೇ, ಜೈಲುಗಳಲ್ಲಿ ಧೂಮಪಾನ ನಿಷೇಧಿಸಲಾಗಿದೆ ಎಂದು ಒಂದು ಕಡೆ ಹೇಳಿದರೆ, ಮತ್ತೊಂದೆಡೆ ಧೂಮಪಾನಕ್ಕೆ ಪ್ರತ್ಯೇಕ ಜಾಗದ ಅವಕಾಶ ಕಲ್ಪಿಸಲಾಗಿದೆ ಎಂಬ ತದ್ವಿರುದ್ಧ ನಿಯಮಗಳು ಜಾರಿಯಲ್ಲಿವೆ. ಈ ಪ್ರಕರಣದಲ್ಲಿ ಅರ್ಜಿದಾರರು ಧೂಮಪಾನ ಮಾಡುತ್ತಿರಲಿಲ್ಲ. ಹೀಗಾಗಿ, ಇವರ ವಿರುದ್ಧದ ಎಫ್ಐಆರ್ ಮತ್ತು ವಿಚಾರಣಾ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರಕರಣಕ್ಕೆ ತಡೆ ನೀಡಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಲಕ್ಷ್ಮಿಕಾಂತ್ ವಕಾಲತ್ತು ವಹಿಸಿದ್ದರು. ಪ್ರಾಸಿಕ್ಯೂಷನ್ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ಹಾಜರಿದ್ದರು.

ಲಂಚದ ಆರೋಪ ಇನ್‌ಸ್ಪೆಕ್ಟರ್ ಅಮಾನತು

ಬೆಂಗಳೂರು: ರಾಜ್ಯ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದ್ದ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿದ್ದ ಸಿಐಡಿ ಪೊಲೀಸ್ ಇನ್‌ಸ್ಪೆಕ್ಟರ್ ಇ.ಡಿ.ನಾಗರಾಜ್ ಅವರನ್ನು ಇತ್ತೀಚೆಗೆ ಅಮಾನತು ಮಾಡಲಾಗಿದೆ.

ನಿಗಮದಲ್ಲಿ ನಡೆದಿದ್ದ ಅವ್ಯವಹಾರ ಪ್ರಕರಣದ ಸಂಬಂಧ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ಕಲಬುರಗಿ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದವು. ಬಳಿಕ, ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿತ್ತು. ಇ.ಡಿ.ನಾಗರಾಜ್ ಅವರು ತನಿಖಾಧಿಕಾರಿಯಾಗಿ ನೇಮಕಗೊಂಡಿದ್ದರು.

‘ಪ್ರಕರಣದ ಆರೋಪಿಗಳಿಂದಲೇ ತನಿಖಾಧಿಕಾರಿ ಲಂಚ ಪಡೆದ ಆರೋಪವಿತ್ತು. ಪ್ರಾಥಮಿಕ ತನಿಖೆ ವೇಳೆ ಹಣ ಪಡೆದಿರುವುದು ಸಾಬೀತಾಗಿದ್ದರಿಂದ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

₹4.50 ಲಕ್ಷ ಲಂಚ: ಎಆರ್‌ಒ, ಟಿಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಕಡಿಮೆ ಮಾಡಿಕೊಡುತ್ತೇವೆಂದು ಹೇಳಿ ₹4.50 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಬಿಬಿಎಂಪಿಯ ಯಶವಂತಪುರ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ರಾಜೇಂದ್ರ ಪ್ರಸಾದ್ ಮತ್ತು ತೆರಿಗೆ ಮೌಲ್ಯಮಾಪಕ ಪ್ರಕಾಶ್ (ಟಿಎ) ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದ ಬಿ.ಕೆ.ನಗರ ನಿವಾಸಿ ಚಂದ್ರಶೇಖರ್ ಸಿ. ಎಂಬವರಿಗೆ ಕರೆ ಮಾಡಿದ್ದ ಆರೋಪಿಗಳು, ‘ನಿಮ್ಮ ವಾಣಿಜ್ಯ ಸಂಕೀರ್ಣದ ತೆರಿಗೆ ಕಡಿಮೆ ಮಾಡಿಕೊಡುತ್ತೇವೆ. ಇದಕ್ಕಾಗಿ ₹4.50 ಲಕ್ಷ ನೀಡಿ’ ಎಂದು ಬೇಡಿಕೆ ಇಟ್ಟಿದ್ದರು. ಚಂದ್ರಶೇಖರ್ ಅವರು ಈ ಸಂಬಂಧ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

‘ಆರೋಪಿಗಳಿಗೆ ಲಂಚದ ಹಣ ನೀಡಿ ಎಂದು ಚಂದ್ರಶೇಖರ್ ಅವರಿಗೆ ಸೂಚಿಸಲಾಗಿತ್ತು. ಗುರುವಾರ ಬೆಳಿಗ್ಗೆ ಬಿಬಿಎಂಪಿ ಕಚೇರಿಗೆ ತೆರಳಿದ್ದ ಚಂದ್ರಶೇಖರ್, ಪ್ರಕಾಶ್ ಅವರಿಗೆ ಲಂಚ ನೀಡಿದ್ದರು. ಕಚೇರಿಯ ಒಳಗೇ ಲಂಚ ಪಡೆದುಕೊಂಡಿದ್ದ ಪ್ರಕಾಶ್, ರಾಜೇಂದ್ರ ಅವರಿಗೂ ಹಣ ನೀಡಿದ್ದರು’ ಎಂದು ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಅಂಜನ್ ಕುಮಾರ್ ಮಾಹಿತಿ ನೀಡಿದರು.

‘ಇದೇ ವೇಳೆ ದಾಳಿ ನಡೆಸಿ, ಇಬ್ಬರನ್ನೂ ಬಂಧಿಸಲಾಯಿತು. ಅವರ ಬಳಿ ಇದ್ದ ₹4.50 ಲಕ್ಷ ಲಂಚದ ಹಣವನ್ನು ವಶಕ್ಕೆ ಪಡೆಯಲಾಯಿತು. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಅವರು ತಿಳಿಸಿದರು.



ರಾಜೇಂದ್ರ ಪ್ರಸಾದ್



ಪ್ರಕಾಶ್

ಮುಖ್ಯಾಂಶಗಳು

- **ಯಶವಂತಪುರ ವಾರ್ಡ್ 37ರ ಬಿಬಿಎಂಪಿ ಕಚೇರಿ**
- **ಲೋಕಾಯುಕ್ತ ಪೊಲೀಸರಿಂದ ಕಾರ್ಯಾಚರಣೆ**

‘ಇಲ್ಲದ ತೆರಿಗೆ ಹೆಸರಿನಲ್ಲಿ ಲಂಚ’

‘ಆಸ್ತಿ ತೆರಿಗೆ ವಿಪರೀತ ಬಾಕಿ ಇದೆಯೆಂದು ಮಾಲೀಕರಿಗೆ ಹೇಳಿ, ಲಂಚ ಪಡೆದುಕೊಂಡಿದ್ದಾರೆ’ ಎಂದು ಲೋಕಾಯುಕ್ತ ಎಸ್‌ಪಿ ಕೋನ ವಂಶಿಕೃಷ್ಣ ಮಾಹಿತಿ ನೀಡಿದರು.

‘ತೆರಿಗೆ ಪಾವತಿ ಮಾಡಿದ್ದರೂ ಮಾಲೀಕರಿಗೆ ಆರೋಪಿಗಳು ಕರೆ ಮಾಡಿದ್ದಾರೆ. ಆಸ್ತಿ ತೆರಿಗೆ ಲೆಕ್ಕಾಚಾರದಲ್ಲಿ ವ್ಯತ್ಯಾಸವಾಗಿದೆ. ಸರಿಯಾದ ಲೆಕ್ಕಾಚಾರದಲ್ಲಿ ನಿಮ್ಮ ಆಸ್ತಿ ತೆರಿಗೆ ಹಲವು ಪಟ್ಟು ಹೆಚ್ಚಾಗುತ್ತದೆ. ತೆರಿಗೆ ಕಡಿಮೆ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಲಂಚ ನೀಡಿ ಎಂದು ಬೇಡಿಕೆ ಇಟ್ಟಿದ್ದಾರೆ’ ಎಂದು ಅವರು ವಿವರಿಸಿದರು.

‘ದೂರುದಾರರು ತಮ್ಮ ವಾಣಿಜ್ಯ ಸಂಕೀರ್ಣದ ಆಸ್ತಿ ತೆರಿಗೆಯನ್ನು ಕಟ್ಟಿದ್ದಾರೆ. ಅವರಿಗೆ ಕರೆ ಮಾಡಿದ್ದ ಆರೋಪಿಗಳು, ₹70 ಲಕ್ಷ ತೆರಿಗೆ ಬಾಕಿ ಇದೆ ಎಂದು ಹೇಳಿದ್ದರು. ಅದನ್ನು ₹8 ಲಕ್ಷಕ್ಕೆ ಇಳಿಸಿಕೊಡುತ್ತೇವೆ, ಅದನ್ನು ಚೆಕ್ ಮೂಲಕ ಪಾವತಿಸಿ. ನಮಗೆ ₹4.50 ಲಕ್ಷ ನೀಡಿ ಎಂದು ಲಂಚಕ್ಕೆ ಬೇಡಿಕೆ ಇಟ್ಟಿದ್ದರು’ ಎಂದು ವಿವರಿಸಿದರು.

‘ಆರೋಪಿಗಳು ಇದೇ ರೀತಿ ಹಲವರಿಗೆ ಕರೆ ಮಾಡಿ ಲಂಚ ಪಡೆದುಕೊಂಡಿರುವ ಸಾಧ್ಯತೆಗಳು ಇವೆ. ಇಂತಹ ಕರೆ ಬಂದರೆ, ಸಾರ್ವಜನಿಕರು ಆ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಬೇಕು. ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟರೆ, ದೂರು ನೀಡಿ’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಅಸ್ಸಾಂ ಶಂಕಿತ ಉಗ್ರ ಜಿಗಣಿಯಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಜಿಗಣಿಯಲ್ಲಿ ತಲೆಮರೆಸಿಕೊಂಡಿದ್ದ ಅಸ್ಸಾಂನ ಶಂಕಿತ ಉಗ್ರನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ.



ಗಿರೀಶ್ ಬೋರಾ

ಶಂಕಿತ ಉಗ್ರ ಗಿರೀಶ್ ಬೋರಾ ಅಲಿಯಾಸ್ ಗೌತಮ್ ಬೋರಾ ಒಂದೂವರೆ ತಿಂಗಳಿಂದ ಜಿಗಣಿಯ ಕೈಗಾರಿಕಾ ಪ್ರದೇಶದ ಕಾರ್ಖಾನೆಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿಕೊಂಡಿದ್ದ.

ಇದೇ ಆಗಸ್ಟ್‌ನಲ್ಲಿ ಅಸ್ಸಾಂ ರಾಜಧಾನಿ ಗುವಾಹಟಿಯ ಸಾರ್ವಜನಿಕ ಸ್ಥಳಗಳಲ್ಲಿ ಬಾಂಬ್ ಇಟ್ಟ ಆರೋಪದ ಮೇಲೆ ಈತನನ್ನು ಬಂಧಿಸಲಾಗಿದೆ.

ಅಸ್ಸಾಂ ಉಗ್ರ ಅಭಿಷೇಕ್ ಗುಹಾ ಸಹಚರನಾದ ಈತ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ. ₹5ಲಕ್ಷ ಪಡೆದು ರೈಲು ಹಳಿ, ಉದ್ಯಾನ ಸೇರಿದಂತೆ ಗುವಾಹಟಿಯ ಐದು ಕಡೆ ಬಾಂಬ್ ಇಟ್ಟು ತಲೆಮರೆಸಿಕೊಂಡಿದ್ದ ಎಂದು ಎನ್‌ಐಎ ಮೂಲಗಳು ಹೇಳಿವೆ.

ಆಗಸ್ಟ್ 10ರಂದು ಬೆಂಗಳೂರಿಗೆ ಬಂದ ಈತ ಪತ್ನಿಯ ಸ್ನೇಹಿತೆಯ ನೆರವು ಪಡೆದು ಜಿಗಣಿ ಸಮೀಪದ ವಡ್ಡರ ಪಾಳ್ಯದಲ್ಲಿ ಬಾಡಿಗೆ ಮನೆ ಪಡೆದಿದ್ದ. ನಂತರ ಇಂದಿರಾನಗರದ ಎಫ್ 360 ಫೆಸಿಲಿಟಿ ಸರ್ವೀಸ್ ಏಜೆನ್ಸಿ ಮೂಲಕ ಜಿಗಣಿ ಕೈಗಾರಿಕ ಪ್ರದೇಶದ ಎಲಿಮೆಂಟಲ್ಸ್ ಫಿಕ್ಸರ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸಕ್ಕೆ ಸೇರಿದ್ದ ಎಂದು ತಿಳಿದುಬಂದಿದೆ.

ಗಿರೀಶ್ ಬೋರಾ ಬೆಂಗಳೂರಿನಲ್ಲಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಎನ್‌ಐಎ ಅಧಿಕಾರಿಗಳು ಉಗ್ರರ ಬಂಧನಕ್ಕೆ ಬಲೆ ಬೀಸಿದ್ದರು. ಸ್ಥಳೀಯ ಪೊಲೀಸರ ನೆರವಿನೊಂದಿಗೆ ಜಿಗಣಿಯಲ್ಲಿ ಈತನನ್ನು ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದರು. ಸ್ಥಳೀಯ ನ್ಯಾಯಾಲಯದಲ್ಲಿ ಟ್ರಾನ್ಸಿಟ್ ವಾರೆಂಟ್ ಪಡೆದು ಅಸ್ಸಾಂಗೆ ಕರೆದೊಯ್ದರು.



ಬಾಲ್ ಬೈಕ್..

ಮಕ್ಕಳ ಆಟದ ಚೆಂಡುಗಳನ್ನು ಅಂಗಡಿಗಳಿಗೆ ಪೂರೈಸಲು ಕುಮಾರಸ್ವಾಮಿ ಎಂಬುವವರು ತಮ್ಮ ಬೈಕಿನಲ್ಲಿ ಕಟ್ಟಿಕೊಂಡು ಸಂಪಂಗಿರಾಮ ನಗರದಲ್ಲಿ ಸಾಗಿದರು

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರಾಜಭವನದ ಅಧಿಕಾರಿಗಳ ವಿಚಾರಣೆ ಅನುಮತಿ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿದ್ದ ಕಡತಕ್ಕೆ ಸಂಬಂಧಿಸಿದ ಮಾಹಿತಿ ಸೋರಿಕೆ ಕುರಿತು ರಾಜಭವನ ಸಚಿವಾಲಯದ ಪಾತ್ರದ ಕುರಿತು ತನಿಖೆ ನಡೆಸಲು ಅನುಮತಿ ನೀಡುವಂತೆ ಲೋಕಾಯುಕ್ತ ವಿಶೇಷ ತನಿಖಾ ತಂಡದ ಐಜಿಪಿ ಎಂ. ಚಂದ್ರಶೇಖರ್ ಅವರು ತನಿಖಾ ಸಂಸ್ಥೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಮಾಹಿತಿ ಸೋರಿಕೆ ಕುರಿತು ವಿವರಣೆ ನೀಡುವಂತೆ ರಾಜ್ಯಪಾಲರು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಆಗಸ್ಟ್ 20ರಂದು ಪತ್ರ ಬರೆದಿದ್ದರು. ಈ ಬಗ್ಗೆ ಆಂತರಿಕ ತನಿಖೆ ನಡೆಸಿದ ಬಳಿಕ ಸೆಪ್ಟೆಂಬರ್ 4ರಂದು ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್ ಅವರಿಗೆ ಪತ್ರ ಬರೆದಿರುವ ಚಂದ್ರಶೇಖರ್, ರಾಜಭವನದ ಸಚಿವಾಲಯದಲ್ಲಿ ತನಿಖೆ ನಡೆಸಲು ಅನುಮತಿ ನೀಡುವಂತೆ ಕೋರಿದ್ದಾರೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆ ನಡೆಸುತ್ತಿರುವ ಲೋಕಾಯುಕ್ತದ ವಿಶೇಷ ತನಿಖಾ ತಂಡವು, ಕುಮಾರಸ್ವಾಮಿ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ 2023 ಸೆಪ್ಟೆಂಬರ್ 24ರಂದು ಮುಚ್ಚಿದ ಲಕೋಟೆಯಲ್ಲಿ ರಾಜ್ಯಪಾಲರಿಗೆ ಪ್ರಸ್ತಾವ ಸಲ್ಲಿಸಿತ್ತು. ಎಂಟು ತಿಂಗಳಿನಿಂದ ಕಡತ ರಾಜ್ಯಪಾಲರ ಸಚಿವಾಲಯದಲ್ಲೇ ಬಾಕಿ ಇತ್ತು. ಈ ಕುರಿತ ಮಾಹಿತಿ ಆ.7ರಂದು ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಮಾಹಿತಿ ಸೋರಿಕೆಯಲ್ಲಿ ಎಸ್‌ಐಟಿ ಪಾತ್ರ ಇಲ್ಲ ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು ಎಸ್‌ಐಟಿ ಮುಖ್ಯಸ್ಥರೂ ಆಗಿರುವ ಐಜಿಪಿ ಪತ್ರದಲ್ಲಿ ತಿಳಿಸಿದ್ದಾರೆ.

‘ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಪ್ರಕಾರ, ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿದ ಪ್ರಸ್ತಾವಗಳನ್ನು ನಾಲ್ಕು ತಿಂಗಳೊಳಗೆ ವಿಲೇವಾರಿ ಮಾಡಬೇಕಿದೆ. ರಾಜ್ಯಪಾಲರ ಸಚಿವಾಲಯವು ಕಡತವನ್ನು ಎಂಟು ತಿಂಗಳಿಗೂ ಹೆಚ್ಚು ಬಾಕಿ ಇರಿಸಿಕೊಂಡಿದ್ದು ಕಾಯ್ದೆಯ ಉಲ್ಲಂಘನೆ. ಅಲ್ಲಿ ಇದ್ದ ಕಡತದ ಮಾಹಿತಿ ಹೇಗೆ ಸೋರಿಕೆ ಆಗಿದೆ ಎಂಬುದನ್ನು ತನಿಖೆ ನಡೆಸುವ ಅಗತ್ಯವಿದೆ’ ಎಂದು ಉಲ್ಲೇಖಿಸಿದ್ದಾರೆ.

ಪ್ರಜ್ವಲ್ ರೇವಣ್ಣ ನಿರೀಕ್ಷಣಾ ಜಾಮೀನು: ಕಾಯ್ದಿರಿಸಿದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಮನೆಯ ಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಆರೋಪ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯ ಮೇಲಿನ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.



ಪ್ರಜ್ವಲ್ ರೇವಣ್ಣ

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ಪ್ರಜ್ವಲ್ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಹಾಗೂ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್ ಮಂಡಿಸಿದ ಸುದೀರ್ಘ ವಾದ ಆಲಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸಿರುವುದಾಗಿ ತಿಳಿಸಿತು.

‘ಪ್ರೀತಂ ಗೌಡ ವಿರುದ್ಧ ತನಿಖೆ ಮುಂದುವರಿಯಲಿ’

ಬೆಂಗಳೂರು: ‘ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಹಗರಣದ ಆರೋಪಕ್ಕೆ ಸಂಬಂಧಿಸಿದ ಪೆನ್ ಡ್ರೈವ್‌ಗಳನ್ನು ಹಂಚಿಕೆ ಮಾಡಿದ ಆರೋಪದಡಿ ಮಾಜಿ ಶಾಸಕ ಬಿಜೆಪಿಯ ಪ್ರೀತಂ ಗೌಡ ಅವರ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆ ಮುಂದುವರಿಯಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

‘ನನ್ನ ವಿರುದ್ಧ ಬೆಂಗಳೂರಿನ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾಗಿರುವ ದೂರು ಮತ್ತು ನಂತರದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಪ್ರೀತಂ ಗೌಡ ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಈ ಕುರಿತಂತೆ ಆದೇಶಿಸಿದರು.

ವಿಚಾರಣೆ ವೇಳೆ ಪ್ರೀತಂ ಗೌಡ ಪರ ವಕೀಲ ಸಂದೀಪ್ ಎಸ್.ಪಾಟೀಲ್, ‘ಅರ್ಜಿಯನ್ನು ದಸರಾ ರಜೆಯ ಬಳಿಕ ವಿಚಾರಣೆಗೆ ತೆಗೆದುಕೊಳ್ಳಬೇಕು. ಬುಧವಾರ ಪ್ರೀತಂ ಗೌಡ ಎಸ್‌ಐಟಿಯ ಮುಂದೆ ಹೇಳಿಕೆ ದಾಖಲಿಸಿದ್ದಾರೆ’ ಎಂದು ಮನವಿ ಮಾಡಿದರು. ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ‘ಇದು ಡಿಜಿಟಲ್ ಅಪರಾಧ. ವಿಡಿಯೊಗಳಿಗೆ ಸಂಬಂಧಿಸಿದಂತೆ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಗೆ ಕಾಯಲಾಗುತ್ತಿದೆ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ತನಿಖೆ ಮುಂದುವರಿಯಬೇಕು ಮತ್ತು ಇದಕ್ಕೆ ಪ್ರೀತಂ ಗೌಡ ಸಹಕರಿಸಬೇಕು. ವಿಚಾರಣೆಯನ್ನು ಅಕ್ಟೋಬರ್ 24ಕ್ಕೆ ನಿಗದಿಗೊಳಿಸಲಾಗುವುದು. ಅಷ್ಟರಲ್ಲಿ ಎಫ್‌ಎಸ್‌ಎಲ್ ವರದಿ ಬರಬಹುದು. ಅಲ್ಲಿಯವರೆಗೂ ಅರ್ಜಿದಾರರಿಗೆ ಬಂಧನದಿಂದ ರಕ್ಷಣೆ ನೀಡಿರುವ ಮಧ್ಯಂತರ ಆದೇಶ ಮುಂದವರಿಯಲಿದೆ’ ಎಂದು ತಿಳಿಸಿತು. ‘ಮುಂದಿನ ವಿಚಾರಣೆ ವೇಳೆಗೆ ಪ್ರಕರಣದ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಿ’ ಎಂದು ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 24ಕ್ಕೆ ಮುಂದೂಡಿತು.

ವಿಜ್ಞಾನಿ, ಎಂಜಿನಿಯರ್ ಪ್ರಶಸ್ತಿ ಪ್ರದಾನ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

‘ಶ್ರಮ, ಅವಕಾಶದಿಂದ ಸಾಧನೆ ಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿಭೆ ಆನುವಂಶೀಯವಾಗಿ ಬರುವುದಿಲ್ಲ. ಸರಿಯಾದ ಅವಕಾಶ ಮತ್ತು ಸತತ ಪರಿಶ್ರಮದಿಂದ ಸಾಧನೆ ಮಾಡಲು ಸಾಧ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಗುರುವಾರ ನಡೆದ ಕಾರ್ಯಕ್ರಮದಲ್ಲಿ, 2022 ಮತ್ತು 2023ನೇ ಸಾಲಿನ ವಿಜ್ಞಾನಿ ಮತ್ತು ಎಂಜಿನಿಯರ್ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೆ ಎಲ್ಲರಿಗೂ ಅವಕಾಶ ಸಿಗುತ್ತಿರಲಿಲ್ಲ. ಸಮಾಜದ ತಾರತಮ್ಯ ಅಳಿಯಬೇಕಾದರೆ ಎಲ್ಲ ಜಾತಿ, ಧರ್ಮ, ವರ್ಗಗಳಿಗೆ ಸಮಾನ ಅವಕಾಶ ಸಿಗಬೇಕು. ಅವಕಾಶ ಸಿಕ್ಕಾಗ ಶ್ರಮ ವಹಿಸಿ ಕೆಲಸ ಮಾಡಿದರೆ ಯಾರೂ ಪ್ರಶಸ್ತಿ ಪಡೆಯಬಹುದು ಎಂಬುದಕ್ಕೆ ಇಂದು ಪ್ರಶಸ್ತಿ ಪಡೆದವರಲ್ಲಿ ಗ್ರಾಮೀಣ ಪ್ರದೇಶದವರೂ ಇರುವುದು ಸಾಕ್ಷಿ’ ಎಂದು ವಿವರಿಸಿದರು.

‘ಯಾವುದೇ ದೇಶ ಅಥವಾ ರಾಜ್ಯ ಸರ್ವತೋಮುಖ ಅಭಿವೃದ್ಧಿಯಾಗಬೇಕಿದ್ದರೆ ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆ ಅಗತ್ಯ. ಕರ್ನಾಟಕವು ಈ ವಿಚಾರದಲ್ಲಿ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಜನಸಂಖ್ಯೆಯಲ್ಲಿ ವಿಶ್ವದಲ್ಲಿಯೇ ಭಾರತ ಮೊದಲ ಸ್ಥಾನದಲ್ಲಿದ್ದರೂ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ವಿಜ್ಞಾನ ಕಾರಣ’ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಮಾತನಾಡಿ, ‘ಯುವಜನರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸಲು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ತೆರೆಯಲಾಗುವುದು. ನಗರದಲ್ಲಿ ₹300 ಕೋಟಿ ವೆಚ್ಚದಲ್ಲಿ ವಿಜ್ಞಾನ ನಗರ ಯೋಜನೆ ಆರಂಭಿಸಲಾಗುವುದು. ಅಂತರಿಕ್ಷ ಕ್ಷೇತ್ರದಲ್ಲಿ ಆಸಕ್ತಿ ಮೂಡಿಸಲು ರಾಜ್ಯದ 833 ವಸತಿಶಾಲೆಗಳಿಗೆ ದೂರದರ್ಶಕ ನೀಡುವ ಯೋಜನೆ ಚಾಲ್ತಿಯಲ್ಲಿದೆ. ಈ ಯೋಜನೆಯನ್ನು ಎಲ್ಲ ಪ್ರೌಢಶಾಲೆಗಳಿಗೆ ವಿಸ್ತರಿಸಲಾಗುವುದು’ ಎಂದು ತಿಳಿಸಿದರು.

ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಸೌಕರ್ಯಗಳ ಅಭಿವೃದ್ಧಿಗೆ 2023ನೇ ಸಾಲಿನಲ್ಲಿ ₹16.45 ಕೋಟಿ ಅನುದಾನ ನೀಡಲಾಗಿದೆ ಎಂದರು.

ಸರ್ ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ರಾಜ್ಯ ಪ್ರಶಸ್ತಿ, ಡಾ. ರಾಜಾರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ, ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ, ಸತೀಶ್‌ಧವನ್ ಯುವ ಎಂಜಿನಿಯರ್ ರಾಜ್ಯ ಪ್ರಶಸ್ತಿ, ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಲಿನಸ್ ಪೌಲಿಂಗ್ ಸಂಶೋಧನಾ ಪ್ರಾಧ್ಯಾಪಕ ಸಿ.ಎನ್.ಆರ್. ರಾವ್, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಐಐಎಸ್‌ಸಿ ನಿರ್ದೇಶಕ ಗೋವಿಂದನ್ ರಂಗರಾಜನ್, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಕಾರ್ಯದರ್ಶಿ ಅಶೋಕ್ ಎಂ. ರಾಯಚೂರ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕ್‌ರೂಪ್ ಕೌರ್ ಭಾಗವಹಿಸಿದ್ದರು.

ಮುಖ್ಯಾಂಶಗಳು

- **ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮೂಲಸೌಕರ್ಯಕ್ಕೆ ₹16.45 ಕೋಟಿ**
- **833 ವಸತಿಶಾಲೆಗಳಿಗೆ ದೂರದರ್ಶಕ**
- **₹300 ಕೋಟಿ ವೆಚ್ಚದಲ್ಲಿ ವಿಜ್ಞಾನ ನಗರ ಯೋಜನೆ**



ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಗುರುವಾರ ನಡೆದ 2022 ಮತ್ತು 2023ನೇ ಸಾಲಿನ ವಿಜ್ಞಾನಿ ಮತ್ತು ಎಂಜಿನಿಯರ್ ರಾಜ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಿನಸ್ ಪೌಲಿಂಗ್ ಸಂಶೋಧನಾ ಪ್ರಾಧ್ಯಾಪಕ ಸಿ.ಎನ್.ಆರ್. ರಾವ್ ಮತ್ತು ಇಂದುಮತಿ ರಾವ್ ದಂಪತಿಯೊಂದಿಗೆ ಕುಶಲೋಪರಿಯಲ್ಲಿ ತೊಡಗಿದ್ದರು

ಪ್ರಜಾವಾಣಿ ಚಿತ್ರ

ಶುಕ್ರವಾರ, ಸೆಪ್ಟೆಂಬರ್ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 269 | ಪುಟ 16
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬಿಟ್ಟೆನೆಂದರೂ ಬಿಡದೀ ಮಾಯೆ!
ದೀರ್ಘ ವಿರಾಮದ ಬಳಿಕ ಚಿತ್ರರಂಗಕ್ಕೆ ಮರಳಿರುವ ನಟ ರಾಧಿಕಾ ಕುಮಾರಸ್ವಾಮಿ ಸಂದರ್ಶನ



ಅನುಭವ ಮಂಟಪ
ಮೀಸಲಾತಿ ಪರ ಇರುವವರು ಒಳಮೀಸಲಾತಿಯನ್ನೂ ಬೆಂಬಲಿಸಬೇಕು

ಸೆನ್ಸೆಕ್ಸ್	ನಿಫ್ಟಿ	₹/$
85,836	26,216	83.64

ರಾಜಭವನದಿಂದಲೇ ಮಾಹಿತಿ ಸೋರಿಕೆ: ಸಚಿವ ಪಾಟೀಲ | ಸಂಪುಟದ ಮುಂದೆ ಪತ್ರ ಮಂಡನೆ ಕಡ್ಡಾಯ | ನೇರ ಉತ್ತರ ನೀಡದಿರಲು ಅಧಿಕಾರಿಗಳಿಗೆ ತಾಕೀತು

ರಾಜ್ಯಪಾಲರಿಗೆ ಮತ್ತೆ ಸಡ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವರಣೆ, ಮಾಹಿತಿ ಕೇಳಿ ರಾಜ್ಯಪಾಲರಿಂದ ಬರುವ ಯಾವುದೇ ಪತ್ರಕ್ಕೂ ಮುಖ್ಯ ಕಾರ್ಯದರ್ಶಿ ಸೇರಿದಂತೆ ಯಾವುದೇ ಅಧಿಕಾರಿ ನೇರ ಉತ್ತರ ಕೊಡುವಂತಿಲ್ಲ' ಎಂದು ಸರ್ಕಾರ ಕಟ್ಟಪ್ಪಣೆ ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ಕೋರಿ ಖಾಸಗಿ ವ್ಯಕ್ತಿಗಳು ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರು. ಇದರ ಬೆನ್ನಲ್ಲೇ, ರಾಜ್ಯಪಾಲರು ಸಿದ್ದರಾಮಯ್ಯ ಅವರಿಗೆ ವಿವರಣೆ ಕೇಳುವ ನೋಟಿಸ್ ಜಾರಿ ಮಾಡಿದ್ದರು. ಆ ಬಳಿಕ, ರಾಜಭವನ ಮತ್ತು ಸರ್ಕಾರದ ಮಧ್ಯೆ ಸಂಘರ್ಷ ಶುರುವಾಗಿತ್ತು. 'ಲೋಕಾಯುಕ್ತವು ಪ್ರಕರಣ ದಾಖಲಿಸಲು ಅನುಮತಿ ಕೋರಿದ ಪ್ರಕರಣಗಳೆಷ್ಟು? ಲೋಕಾಯುಕ್ತದ ಮಾಹಿತಿ ಸೋರಿಕೆಯಾಗಿದ್ದು ಹೇಗೆ' ಎಂಬ ಬಗ್ಗೆ ವಿವರಣೆ ಕೇಳಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು, ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದರು. ಇದು ಎರಡೂ ಶಕ್ತಿಕೇಂದ್ರಗಳ ಮಧ್ಯದ ಸಂಘರ್ಷ ತೀವ್ರಗೊಳ್ಳುವ ಸೂಚನೆಗಳನ್ನು ನೀಡಿತ್ತು.

6ನೇ ಪುಟ ನೋಡಿ

ರಾಜಭವನ ಅಧಿಕಾರಿಗಳ ವಿಚಾರಣೆಗೆ ಅನುಮತಿ ಕೋರಿಕೆ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿದ್ದ ಕಡತಕ್ಕೆ ಸಂಬಂಧಿಸಿದ ಮಾಹಿತಿ ಸೋರಿಕೆ ಕುರಿತು ರಾಜಭವನದ ಪಾತ್ರದ ಕುರಿತು ತನಿಖೆ ನಡೆಸಲು ಅನುಮತಿ ನೀಡುವಂತೆ ಲೋಕಾಯುಕ್ತ ವಿಶೇಷ ತನಿಖಾ ತಂಡದ ಐಜಿಪಿ ಎಂ. ಚಂದ್ರಶೇಖರ್ ಅವರು ತನಿಖಾ ಸಂಸ್ಥೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಮಾಹಿತಿ ಸೋರಿಕೆ ಕುರಿತು ವಿವರಣೆ ನೀಡುವಂತೆ ರಾಜ್ಯಪಾಲರು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಆಗಸ್ಟ್ 20ರಂದು ಪತ್ರ ಬರೆದಿದ್ದರು. ಈ ಬಗ್ಗೆ ಆಂತರಿಕ ತನಿಖೆ ನಡೆಸಿದ ಬಳಿಕ ಸೆಪ್ಟೆಂಬರ್ 4ರಂದು ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್ ಅವರಿಗೆ ಪತ್ರ ಬರೆದಿರುವ ಚಂದ್ರಶೇಖರ್, ರಾಜಭವನದ ಸಚಿವಾಲಯದಲ್ಲಿ ತನಿಖೆ ನಡೆಸಲು ಅನುಮತಿ ನೀಡುವಂತೆ ಕೋರಿದ್ದಾರೆ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆ ನಡೆಸುತ್ತಿರುವ ಲೋಕಾಯುಕ್ತದ ವಿಶೇಷ ತನಿಖಾ ತಂಡವು, ಕುಮಾರಸ್ವಾಮಿ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ 2023 ಸೆಪ್ಟೆಂಬರ್ 24ರಂದು ಮುಚ್ಚಿದ ಲಕೋಟೆಯಲ್ಲಿ ರಾಜ್ಯಪಾಲರಿಗೆ ಪ್ರಸ್ತಾವ ಸಲ್ಲಿಸಿತ್ತು. ಎಂಟು ತಿಂಗಳಿನಿಂದ ಕಡತ ರಾಜ್ಯಪಾಲರ ಸಚಿವಾಲಯದಲ್ಲೇ ಬಾಕಿ ಇತ್ತು. ಈ ಕುರಿತ ಮಾಹಿತಿ ಆ.7ರಂದು ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಮಾಹಿತಿ ಸೋರಿಕೆಯಲ್ಲಿ ಎಸ್ಐಟಿ ಪಾತ್ರ ಇಲ್ಲ ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು ಎಸ್ಐಟಿ ಮುಖ್ಯಸ್ಥರೂ ಆಗಿರುವ ಐಜಿಪಿ ಪತ್ರದಲ್ಲಿ ತಿಳಿಸಿದ್ದಾರೆ.

6ನೇ ಪುಟ ನೋಡಿ

ಸಿಬಿಐ ತನಿಖೆಗೂ ನಿರ್ಬಂಧ

'ರಾಜ್ಯದಲ್ಲಿ ಸಿಬಿಐ ತನಿಖೆಗೆ ನೀಡಲಾಗಿದ್ದ ಮುಕ್ತ ಅನುಮತಿಯನ್ನು ಹಿಂದಕ್ಕೆ ಪಡೆಯಲಾಗಿದ್ದು, ಇನ್ನುಮುಂದೆ ಯಾವುದೇ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕಾದರೂ ಸಿಬಿಐ, ರಾಜ್ಯ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ' ಎಂದು ಸಚಿವ ಪಾಟೀಲ ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಿಬಿಐ ಪೂರ್ವಗ್ರಹದಿಂದ ಕಾರ್ಯನಿರ್ವಹಿಸುತ್ತಿರುವುದು ದೃಢಪಟ್ಟಿದೆ. ಆದ್ದರಿಂದ ಸಿಬಿಐಗೆ ಮುಕ್ತ ಅವಕಾಶ ನೀಡಬಾರದು ಎಂದು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದರು.

'ಮುಖ್ಯಮಂತ್ರಿ ವಿರುದ್ಧದ ಮುಡಾ ಪ್ರಕರಣಕ್ಕೂ ಈ ತೀರ್ಮಾನಕ್ಕೂ ಯಾವುದೇ ಸಂಬಂಧವಿಲ್ಲ. ಮುಡಾ ಪ್ರಕರಣದ ತನಿಖೆಯನ್ನು ಲೋಕಾಯುಕ್ತವೇ ನಡೆಸುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ರಾಜ್ಯದಲ್ಲಿನ ಪ್ರಕರಣಗಳನ್ನು ಪ್ರಕರಣವಾರು ಆಧಾರದ ಮೇಲೆ ತನಿಖೆ ನಡೆಸಲು ಸಿಬಿಐ ತನಿಖಾ ಸಂಸ್ಥೆಗೆ ಅನುಮತಿ ನೀಡಲು ಪರಿಶೀಲಿಸಲಾಗುವುದು. ಒಂದು ವೇಳೆ ನ್ಯಾಯಾಲಯವು ಸಿಬಿಐ ತನಿಖೆಗೆ ಸೂಚಿಸಿದರೆ, ಆಗ ನ್ಯಾಯಾಲಯದ ಆದೇಶವನ್ನು ಪಾಲಿಸಲಾಗುವುದು ಎಂದು ಪಾಟೀಲ ಹೇಳಿದರು.

ಕಸ್ತೂರಿ ರಂಗನ್ ವರದಿ ತಿರಸ್ಕಾರ

ಬೆಂಗಳೂರು: ಪಶ್ಚಿಮಘಟ್ಟದಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು ಘೋಷಿಸುವ ಬಗ್ಗೆ ಡಾ.ಕಸ್ತೂರಿ ರಂಗನ್ ವರದಿ ಆಧರಿಸಿದ ಕರಡು ಅಧಿಸೂಚನೆಯನ್ನು ತಿರಸ್ಕರಿಸಲು ಸರ್ಕಾರ ನಿರ್ಧರಿಸಿದೆ. ಬಿಜೆಪಿ ಸರ್ಕಾರ ವರದಿಯನ್ನು ತಿರಸ್ಕರಿಸಿ ಕೈಗೊಂಡಿದ್ದ ನಿರ್ಣಯವನ್ನೇ ಮುಂದುವರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

6



ಕಾದು ಸುಸ್ತಾದ ದೂರುದಾರ

ಕೋರ್ಟ್ ಆದೇಶದಂತೆ ಎಫ್ಐಆರ್ ದಾಖಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್ಐಆರ್ ದಾಖಲಿಸುವಂತೆ ಮನವಿ ಸಲ್ಲಿಸಲು ಗುರುವಾರ ಇಲ್ಲಿನ ಲೋಕಾಯುಕ್ತ ಕಚೇರಿಗೆ ಬಂದಿದ್ದ ದೂರುದಾರ ಸ್ನೇಹಮಯಿ ಕೃಷ್ಣ ಅಧಿಕಾರಿಗಳಿಗೆ ಕಾದು ಸುಸ್ತಾದರು.

ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಕೋರಿ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. ನ್ಯಾಯಾಲಯವು ಎಫ್ಐಆರ್ ದಾಖಲಿಸುವಂತೆ ಲೋಕಾಯುಕ್ತದ ಮೈಸೂರು ಎಸ್‌ಪಿಗೆ ಆದೇಶಿಸಿತ್ತು. ಆದೇಶದ ಆನ್‌ಲೈನ್ ಪ್ರತಿಯೊಂದಿಗೆ ಮಧ್ಯಾಹ್ನ 12.30ರ ಸುಮಾರಿಗೆ ಬಂದ ಅವರಿಗೆ 3 ಗಂಟೆಯಾದರೂ ಎಸ್‌ಪಿ ಟಿ.ಜೆ. ಉದೇಶ್ ಭೇಟಿ ಸಾಧ್ಯವಾಗಲಿಲ್ಲ. ಅಧಿಕಾರಿ ಕಚೇರಿಯಲ್ಲಿ ಲಭ್ಯರಿರಲಿಲ್ಲ.

ದೂರು: ಅಧಿಕಾರಿ ಭೇಟಿಗೆ ಸಿಗದ ಕಾರಣಕ್ಕೆ ಬೇಸರಗೊಂಡ ಅವರು, 'ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್ ಕಾಣೆಯಾಗಿದ್ದು, ಅವರನ್ನು ಅಪಹರಿಸಿರುವ ಶಂಕೆ ಇದೆ' ಎಂದು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಸಂಜೆ ದೂರು ನೀಡಿದರು.

'ಅಧಿಕಾರಿಗಳನ್ನು ಕೇಳಿದರೆ ಸೂಕ್ತ ಮಾಹಿತಿ ಕೊಡುತ್ತಿಲ್ಲ. ಎಸ್‌ಪಿಯವರು ಮೊಬೈಲ್ ಕರೆ, ಎಸ್‌ಎಂಎಸ್‌ಗಳಿಗೂ ಪ್ರತಿಕ್ರಿಯಿಸುತ್ತಿಲ್ಲ. ಜನಪ್ರತಿನಿಧಿಗಳ ನ್ಯಾಯಾಲಯವು ನೀಡಿರುವ ಆದೇಶಕ್ಕೆ ತಡೆಯಾಜ್ಞೆ ತರಲು ಸಿದ್ದರಾಮಯ್ಯ ಅವರಿಗೆ ಅವಕಾಶ ಸಿಗಲೆಂಬ ಕಾರಣಕ್ಕೆ ಎಸ್‌ಪಿ ಕಚೇರಿಗೆ ಬಂದಿಲ್ಲ' ಎಂದು ದೂರಿನಲ್ಲಿ ಹೇಳಿದ್ದಾರೆ. ಅವರ ದೂರನ್ನು ದೇವರಾಜ ಠಾಣೆ ಪೊಲೀಸರು ಸ್ವೀಕರಿಸದ ಕಾರಣಕ್ಕೆ, ನಗರ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿ ದೂರು ನೀಡಿದರು.

ಮುಂದಿನ ಕ್ರಮ: 'ಲೋಕಾ' ಚರ್ಚೆ

ಬೆಂಗಳೂರು: ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಎಫ್ಐಆರ್ ದಾಖಲಿಸಿ, ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿರುವ ಆದೇಶದ ಸಂಬಂಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಲೋಕಾಯುಕ್ತ ಪೊಲೀಸ್ ವಿಭಾಗದ ಉನ್ನತ ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ.

ಲೋಕಾಯುಕ್ತ ಕಚೇರಿಯಲ್ಲಿ ಎಡಿಜಿಪಿ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ಗುರುವಾರ ಮಧ್ಯಾಹ್ನ ನಡೆದ ಸಭೆಯಲ್ಲಿ ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಭಾಗಿಯಾಗಿದ್ದರು.

'ಹಿರಿಯ ಅಧಿಕಾರಿಗಳ ಜತೆಗೆ ಸಭೆ ನಡೆಸಿದ ನಂತರ, ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹೋಗಿ ಆದೇಶದ ಪ್ರತಿ ಪಡೆದುಕೊಂಡಿದ್ದೇನೆ' ಎಂದು ಉದೇಶ್ ಮಾಹಿತಿ ನೀಡಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಶಿವರಾಜುಗೆ ಗಾಂಧಿ ಸೇವಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಶಿವರಾಜು

ಬೆಂಗಳೂರು: ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಗೊಟ್ಟಿಕೆರೆಯ ಗಾಂಧಿವಾದಿ ಜಿ.ಬಿ. ಶಿವರಾಜು ಹಾಗೂ ಹಾವೇರಿ ಜಿಲ್ಲೆಯ ಹೊಸರಿತ್ತಿ ಗ್ರಾಮದ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿಷ್ಠಾನದ ಗಾಂಧಿ ಗ್ರಾಮೀಣ ಗುರುಕುಲ ವಸತಿಶಾಲೆಯನ್ನು 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ಗಾಂಧೀಜಿಯವರ ಸತ್ಯ, ಅಹಿಂಸೆ, ಸ್ವಾವಲಂಬನೆ, ಗ್ರಾಮಸ್ವರಾಜ್, ಅಸ್ಪೃಶ್ಯತೆ ನಿವಾರಣೆ, ಆರ್ಥಿಕ ಚಿಂತನೆಗಳು, ಖಾದಿ ಚಟುವಟಿಕೆ, ಜೀವನ ಶಿಕ್ಷಣ ಮತ್ತಿತರ ತತ್ವ, ಆದರ್ಶಗಳನ್ನು ಅಳವಡಿಸಿಕೊಂಡು ಸಾಧನೆ ಮಾಡಿದ ವ್ಯಕ್ತಿಗಳು ಹಾಗೂ ಸಂಘ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ₹5 ಲಕ್ಷ ನಗದು ಒಳಗೊಂಡ ಈ ಪ್ರಶಸ್ತಿಯನ್ನು ನೀಡುತ್ತಿದೆ.

ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ ಆಯ್ಕೆ ಮಾಡಿದ್ದು, ಅ.2ರ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡುವರು.

'ಜಾಮೀನು: ಇ.ಡಿ. ಕಠಿಣ ಷರತ್ತು ಹಾಕಬಾರದು'

ನವದೆಹಲಿ: ವಿಚಾರಣೆ ಇಲ್ಲದೆ ಆರೋಪಿಯೊಬ್ಬನನ್ನು ಸೆರೆವಾಸದಲ್ಲಿಯೇ ಇರಿಸುವುದಕ್ಕಾಗಿ ಜಾರಿ ನಿರ್ದೇಶನಾಲಯ(ಇ.ಡಿ) ಜಾಮೀನಿಗೆ ಸಂಬಂಧಿಸಿ ಕಠಿಣ ಷರತ್ತುಗಳನ್ನು ಒಂದು ತಂತ್ರವಾಗಿ ಬಳಸಿಕೊಳ್ಳುವುದಕ್ಕೆ ಸಾಂವಿಧಾನಿಕ ನ್ಯಾಯಾಲಯಗಳು ಅವಕಾಶ ನೀಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

7

ಕೌಟುಂಬಿಕ ಹಿಂಸೆಯಿಂದ ಮಹಿಳೆ ಸಂರಕ್ಷಣೆ: ವಿಚಾರಣೆ ವೇಳೆ 'ಸುಪ್ರೀಂ' ಅಭಿಮತ

'ಧರ್ಮಾತೀತವಾಗಿ ಕಾಯ್ದೆ ಅನ್ವಯ'

ನವದೆಹಲಿ (ಪಿಟಿಐ): ಮಹಿಳೆ ಯಾವುದೇ ಧರ್ಮಕ್ಕೆ ಸೇರಿರಲಿ ಅಥವಾ ಯಾವುದೇ ಸಾಮಾಜಿಕ ಹಿನ್ನೆಲೆ ಹೊಂದಿರಲಿ, 'ಕೌಟುಂಬಿಕ ಹಿಂಸೆಯಿಂದ ಮಹಿಳೆ ಸಂರಕ್ಷಣೆ ಕಾಯ್ದೆ' ಆಕೆಗೆ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಈ ಕಾಯ್ದೆ ಕೂಡ ನಾಗರಿಕ ಸಂಹಿತೆಯ ಭಾಗವಾಗಿದೆ. ಸಂವಿಧಾನ ದಡಿ ಮಹಿಳೆಯರಿಗೆ ನೀಡಲಾಗಿರುವ ಹಕ್ಕುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರಕ್ಷಿಸುವುದಕ್ಕಾಗಿ ದೇಶದ ಪ್ರತಿಯೊಬ್ಬ ಮಹಿಳೆಗೂ ಈ ಕಾಯ್ದೆ ಅನ್ವಯವಾಗುತ್ತದೆ' ಎಂದು ತಿಳಿಸಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರಿದ್ದ ನ್ಯಾಯಪೀಠ, ಕೌಟುಂಬಿಕ ಸಂಬಂಧಗಳಲ್ಲಿ ಕಂಡು ಬರುವ ಹಿಂಸೆಯಿಂದ ಸಂತ್ರಸ್ತರಾಗುವ ಮಹಿಳೆಯರನ್ನು ರಕ್ಷಿಸುವುದಕ್ಕೂ ಈ ಕಾಯ್ದೆ ಅನ್ವಯವಾಗಲಿದೆ' ಎಂದು ಹೇಳಿದೆ.

ಪರಿಹಾರ ಮತ್ತು ಜೀವನಾಂಶಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

7ನೇ ಪುಟ ನೋಡಿ

'ಪರಿಸ್ಥಿತಿ ಬದಲಾಗದೆ ಅಪೀಲಿಗೆ ಅವಕಾಶವಿಲ್ಲ'

ಕಾಯ್ದೆಯ ಸೆಕ್ಷನ್ 25ರ ಕುರಿತು ತನ್ನ ತೀರ್ಪಿನಲ್ಲಿ ಪ್ರಸ್ತಾಪಿಸಿರುವ ಸುಪ್ರೀಂ ಕೋರ್ಟ್, 'ನೊಂದ ವ್ಯಕ್ತಿ ಅಥವಾ ಪ್ರತಿವಾದಿ, ಆದೇಶದಲ್ಲಿ ಮಾರ್ಪಾಡು ಅಥವಾ ಬದಲಾವಣೆ ಇಲ್ಲವೇ ಆದೇಶ ರದ್ದತಿ ಕೋರಿ ಅಪೀಲು ಸಲ್ಲಿಸಲು ಈ ಸೆಕ್ಷನ್ ಅಡಿ ಅವಕಾಶಗಳಿವೆ. ಆದರೆ, ಈ ರೀತಿ ಅಪೀಲು ಸಲ್ಲಿಸಲು ಸಂದರ್ಭ/ಪರಿಸ್ಥಿತಿಗಳಲ್ಲಿ ಬದಲಾವಣೆ ಕಂಡುಬಂದಿರಬೇಕು. ಇಂತಹ ಬದಲಾವಣೆ ಕುರಿತು ಕಾಯ್ದೆಯ ಸೆಕ್ಷನ್ 25ರ ಉಪಸೆಕ್ಷನ್(2)ರಲ್ಲಿ ವಿವರಿಸಲಾಗಿದೆ' ಎಂದು ಪೀಠ ಹೇಳಿದೆ.

'ಸಂದರ್ಭಗಳಲ್ಲಿ ಬದಲಾವಣೆ ಅಂದರೆ ಏನು ಎಂಬುದನ್ನು ಕಾಯ್ದೆಯಲ್ಲಿ ವಿವರಿಸಲಾಗಿದೆ. ಪ್ರತಿವಾದಿ ಅಥವಾ ನೊಂದ ವ್ಯಕ್ತಿಯ ಆದಾಯದಲ್ಲಿ ಬದಲಾವಣೆ ಆಗಿರಬೇಕು. ಇಲ್ಲವೇ, ಮ್ಯಾಜಿಸ್ಟ್ರೇಟ್ ಆದೇಶದಂತೆ ನೀಡುತ್ತಿರುವ ಜೀವನಾಂಶದಲ್ಲಿ ಹೆಚ್ಚಳ ಇಲ್ಲವೇ ಕಡಿತ ಮಾಡುವುದನ್ನು ಸಮರ್ಥಿಸುವ ರೀತಿಯಲ್ಲಿ ಬದಲಾವಣೆ ಇರಬೇಕು' ಎಂದು ಹೇಳಿದೆ.

ಈ ಎಲ್ಲ ಅಂಶಗಳನ್ನು ಪರಿಗಣಿಸಿದಾಗ, ಜೀವನಾಂಶ/ಪರಿಹಾರ ಕುರಿತಂತೆ ಮ್ಯಾಜಿಸ್ಟ್ರೇಟ್ ಅವರು ಆದೇಶ ಹೊರಡಿದ ನಂತರ ಪರಿಸ್ಥಿತಿಗಳಲ್ಲಿ ಬದಲಾವಣೆಗಳು ಕಂಡುಬಂದಿದ್ದರೆ, ಕಾಯ್ದೆಯ ಸೆಕ್ಷನ್25(2) ಅನ್ನು ಅನ್ವಯ ಮಾಡಬಹುದಿತ್ತು ಎಂದಿರುವ ಸುಪ್ರೀಂ ಕೋರ್ಟ್, 'ಮಾರ್ಪಾಡು, ಬದಲಾವಣೆ ಇಲ್ಲವೇ ರದ್ದತಿಗೆ ಸಂಬಂಧಿಸಿದ ಆದೇಶವು ಮುಂದಿನ ದಿನಗಳಿಗೆ ಅನ್ವಯವಾಗುತ್ತದೆ ಹೊರತು ಪೂರ್ವಾನ್ವಯವಾಗುದಿಲ್ಲ' ಎಂದಿದೆ.

ಈ ಪ್ರಕರಣದಲ್ಲಿಯೂ ಆದೇಶವನ್ನು ಪೂರ್ವಾನ್ವಯಗೊಳಿಸುವಂತೆ ಪತಿಯು ಕೋರುವಂತಿಲ್ಲ. ಮೂಲ ಆದೇಶದಂತೆ ಪತ್ನಿಗೆ ಈಗಾಗಲೇ ನೀಡಿರುವ ಹಣವನ್ನು ವಾಪಸು ನೀಡುವಂತೆ ಕೇಳುವ ಹಾಗಿಲ್ಲ ಎಂದ ಪೀಠವು, ಹೈಕೋರ್ಟ್ ಆದೇಶ ಮತ್ತು ಪತಿಯ ಮೇಲ್ಮನವಿಯನ್ನು ವಜಾಗೊಳಿಸಿದೆ.

ಮೈಸೂರು ದಸರಾ: ರಾಜ್ಯಪಾಲರು, ಸಿ.ಎಂ, ಹಂಪನಾಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಮೈಸೂರು: ಈ ಬಾರಿಯ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾಗಿ ಆಯ್ಕೆಯಾಗಿರುವ ಸಾಹಿತಿ ಹಂ.ಪ. ನಾಗರಾಜಯ್ಯ ಅವರಿಗೆ ಜಿಲ್ಲಾಡಳಿತದಿಂದ ಗುರುವಾರ ಆಮಂತ್ರಣ ನೀಡಲಾಯಿತು.

ಬೆಂಗಳೂರಿನ ಕ್ರಸೆಂಟ್ ರಸ್ತೆಯ ಅಮೆರಿಕನ್ ಕಾಲೊನಿಯಲ್ಲಿರುವ ಅವರ ನಿವಾಸದಲ್ಲಿ ಅಧಿಕಾರಿಗಳು ಆಹ್ವಾನ ನೀಡಿದರು. ಮೈಸೂರು ಪೇಟ ತೊಡಿಸಿ, ಫಲಪುಷ್ಪ ನೀಡಿ ಸಾಂಪ್ರದಾಯಿಕವಾಗಿ ಸ್ವಾಗತಿಸಿದರು. ದಸರಾ ವಿಶೇಷಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ. ಗಾಯಿತ್ರಿ, ಎಸ್ಪಿ ಎನ್. ವಿಷ್ಣುವರ್ಧನ್, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಮತ್ತು ಸ್ವಾಗತ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು.

ಮರಗಳ ಮೂಲ ಬೇರಿಗೆ ಪೆಟ್ಟು

ಎನ್‌ಆರ್ ಕಾಲೊನಿ ವೃತ್ತ– ನೆಟ್ಟಕಲ್ಲಪ್ಪ ವೃತ್ತ ನಡುವೆ ವೈಟ್ ಟಾಪಿಂಗ್ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್.ಆರ್. ಕಾಲೊನಿ ವೃತ್ತದಿಂದ ನೆಟ್ಟಕಲ್ಲಪ್ಪ ವೃತ್ತದವರೆಗೆ ಹಲವು ವರ್ಷಗಳ ಬೃಹತ್ ಮರಗಳ ಮೂಲ ಬೇರುಗಳನ್ನು ಜಲಮಂಡಳಿ ಹಾಗೂ ಬಿಬಿಎಂಪಿ ಕತ್ತರಿಸುತ್ತಿವೆ. ಇದರಿಂದ ಬೃಹತ್ ಮರಗಳು ಬೀಳುವ ಆತಂಕ ಎದುರಾಗಿದೆ.

ಈ ರಸ್ತೆಯಲ್ಲಿ ಬಿಬಿಎಂಪಿ ವೈಟ್ ಟಾಪಿಂಗ್ ಕಾಮಗಾರಿ ನಡೆಸುತ್ತಿದ್ದು, ಜಲಮಂಡಳಿಯು ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸುತ್ತಿದೆ. ದೊಡ್ಡ ಪೈಪ್‌ಗಳನ್ನು ಅಳವಡಿಸಲು ಆಳವಾಗಿ ಗುಂಡಿ ತೋಡಲಾಗುತ್ತಿದ್ದು, ಇದಕ್ಕಾಗಿ ರಸ್ತೆ ಅಗೆಯಲಾಗುತ್ತಿದೆ. ಈ ಕಾಮಗಾರಿಯಿಂದಾಗಿ ರಸ್ತೆಯ ಬದಿಗಳಲ್ಲಿರುವ ಬೃಹತ್ ಮರಗಳ ಬೇರುಗಳನ್ನು ಕತ್ತರಿಸಲಾಗುತ್ತಿದೆ.

'ಮಳೆ ಮರ ಸೇರಿದಂತೆ ಹಲವು ಬೃಹತ್ ಮರಗಳು ಈ ರಸ್ತೆಯಲ್ಲಿದ್ದು, ಅವುಗಳ ಬೇರುಗಳಿಗೆ ಹಾನಿ ಮಾಡಲಾಗಿದೆ. ಕೆಲವು ಕಡೆ ದೊಡ್ಡ ಬೇರುಗಳನ್ನು ಕಡಿದು ಹಾಕಲಾಗಿದೆ. ಇದರಿಂದ ಬೇರು ಸಡಿಲಗೊಂಡು, ಮರಗಳು ಬೀಳುವ ಆತಂಕ ಎದುರಾಗಿದೆ' ಎಂದು ಸ್ಥಳೀಯ ವ್ಯಾಪಾರಿ ಸಂತೋಷ್ ದೂರಿದರು.

'ಇಲ್ಲಿರುವ ಮರಗಳು ಹಲವು ವರ್ಷಗಳಿಂದ ತಂಪನೆಯ ವಾತಾವರಣ ನೀಡುತ್ತಿವೆ. ಬೇಸಿಗೆಯಲ್ಲೂ ಈ ರಸ್ತೆ ತಂಪಾಗಿಯೇ ಇರುತ್ತದೆ. ಆದರೆ, ವೈಟ್ ಟಾಪಿಂಗ್ ಕಾಮಗಾರಿಯಿಂದಾಗಿ ಕಾಂಕ್ರೀಟೀಕರಣ ಮಾಡಲಾಗುತ್ತಿದೆ. ಪೈಪುಗಳನ್ನು ಅಳವಡಿಸಲು ಬೇರುಗಳನ್ನು ಕತ್ತರಿಸಲಾಗುತ್ತಿದೆ. ಇದರಿಂದ ಮರಗಳು ಬೀಳುವ ಸಾಧ್ಯತೆಯೂ ಇದೆ. ಇದನ್ನೆಲ್ಲ ಮೊದಲೇ ಗಮನಿಸಿಕೊಂಡು ಬಿಬಿಎಂಪಿ ಅಥವಾ ಜಲಮಂಡಳಿಯವರು ಕಾಮಗಾರಿ ನಡೆಸಬೇಕಿತ್ತು. ಆದರೆ, ಇವರಿಗೆಲ್ಲ ಮರಗಳು, ಪರಿಸರ ಎಂದರೆ ನಿರ್ಲಕ್ಷ್ಯ' ಎಂದು ಸ್ಥಳೀಯರಾದ ಸತ್ಯನಾರಾಯಣ ಆರೋಪಿಸಿದರು.

'ಎನ್.ಆರ್. ಕಾಲೊನಿಯಿಂದ ನೆಟ್ಟಕಲ್ಲಪ್ಪ ವೃತ್ತದವರೆಗೆ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾದ ಸಂದರ್ಭದಲ್ಲೇ ಇಲ್ಲಿನ ಬೃಹತ್ ಮರಗಳ ಬಗ್ಗೆ ಕಾಳಜಿ ವಹಿಸುವಂತೆ ಎಂಜಿನಿಯರ್‌ಗಳಿಗೆ ಮನವಿ ಮಾಡಲಾಗಿತ್ತು. ಆದರೂ, ಕಾಮಗಾರಿ ನಡೆಯುವ ಸಂದರ್ಭದಲ್ಲಿ ನಿರ್ಲಕ್ಷ್ಯದಿಂದ ಮರಗಳ ಬೇರುಗಳಿಗೆ ಹಾನಿ ಮಾಡಲಾಗಿದೆ. ಇನ್ನುಳಿದ ಮರಗಳ ಬೇರುಗಳಿಗೆ ಹಾನಿಯಾಗದಂತೆ ಕಾಮಗಾರಿ ನಡೆಸಬೇಕು' ಎಂದು ತ್ಯಾಗರಾಜ ನಗರದ ಅಶೋಕ ಆಗ್ರಹಿಸಿದರು.



ಎನ್‌ಆರ್ ಕಾಲೊನಿ ವೃತ್ತದಿಂದ ನೆಟ್ಟಕಲ್ಲಪ್ಪ ವೃತ್ತದವರೆಗೆ ರಸ್ತೆ ಬದಿಯಲ್ಲಿರುವ ಬೃಹತ್ ಮರಗಳ ದೊಡ್ಡ ಬೇರುಗಳಿಗೆ ಹಾನಿಯಾಗಿದೆ

'ಮರಗಳಿಗೆ ಹಾನಿಯಾಗದಂತೆ ಕ್ರಮ'

'ಒಳಚರಂಡಿ ವ್ಯವಸ್ಥೆಗಾಗಿ ದೊಡ್ಡ ಪೈಪ್‌ಗಳನ್ನು ಅಳವಡಿಸಲಾಗುತ್ತಿದೆ. ಇದಕ್ಕಾಗಿ ರಸ್ತೆಯನ್ನು ಅಗೆಯಲಾಗುತ್ತಿದೆ. ಅಕ್ಕಪಕ್ಕದ ಪೈಪ್‌ಗಳನ್ನು ಅಳವಡಿಸಲು ಅಡ್ಡಿಯಾಗಿದ್ದ ಕೆಲವು ಕಡೆ ಸಣ್ಣ ಬೇರುಗಳನ್ನು ಕತ್ತರಿಸಲಾಗಿದೆ. ದೊಡ್ಡ ಬೇರುಗಳಿಗೆ ಹಾನಿ ಮಾಡಿಲ್ಲ. ಬೇರುಗಳ ಅಥವಾ ಮಧ್ಯದಲ್ಲಿ ಪೈಪ್‌ಗಳನ್ನು ಅಳವಡಿಸಲಾಗಿದೆ. ಗರಗಸ ಅಥವಾ ಕೊಡಲಿಯಿಂದ ಬೇರುಗಳನ್ನು ಕತ್ತರಿಸಿಲ್ಲ. ಅನಿವಾರ್ಯವಿದ್ದ ಕಡೆ ಡ್ರಿಲ್ ಮಾಡಿ ಪೈಪ್‌ಗಳನ್ನು ಅಳವಡಿಸಲಾಗಿದೆ. ಸುತ್ತಲೂ ಮಣ್ಣನ್ನು ಹಾಕಲಾಗಿದ್ದು, ಮರಗಳಿಗೆ ಹಾನಿಯಾಗದಂತೆ ಕ್ರಮ ಕೈಗೊಳ್ಳಲಾಗಿದೆ' ಎಂದು ಕಾಮಗಾರಿಯ ಮೇಲ್ವಿಚಾರಣೆ ವಹಿಸಿರುವ ಎಂಜಿನಿಯರ್‌ಗಳು 'ಪ್ರಜಾವಾಣಿ'ಗೆ ತಿಳಿಸಿದರು.

'ಚಿನ್ನರಿ' ಸಂಗೀತ ಕಾರ್ಯಕ್ರಮ 29ಕ್ಕೆ

ಬೆಂಗಳೂರು: ವನಮಾಲಾ ಸೆಂಟರ್ ಫಾರ್ ಆರ್ಟ್ಸ್ ಆ್ಯಂಡ್ ಕಲ್ಚರ್ ಟ್ರಸ್ಟ್‌ನಿಂದ ವನಮಾಲಾ ಸಂಗೀತೋತ್ಸವದ ಅಂಗವಾಗಿ ಇದೇ 29ರಂದು ಬೆಳಿಗ್ಗೆ 10.15ಕ್ಕೆ ಜಯನಗರದ ವಿವೇಕ ಸಭಾಂಗಣದಲ್ಲಿ ಮಕ್ಕಳಿಗಾಗಿ ಮೈಸೂರಿನ ಚಿನ್ನರಿ ಸಂಗೀತ ಭಾಗ-2 ಕಾರ್ಯಕ್ರಮ ಹಮ್ಮಿಕೊಂಡಿದೆ.

'ಈ ಕಾರ್ಯಕ್ರಮದಲ್ಲಿ ಕಲೆ ಮತ್ತು ಸಂಸ್ಕೃತಿಗೆ ಮೈಸೂರಿನ ಮಹಾರಾಜರು ನೀಡಿದ ಕೊಡುಗೆಯ ಕುರಿತು ಮಕ್ಕಳಿಗೆ ಮಾಹಿತಿ ನೀಡಲಾಗುತ್ತದೆ. ಚಲನಚಿತ್ರ ನಟಿ ಲಕ್ಷ್ಮಿ ಗೋಪಾಲಸ್ವಾಮಿ, ಅನನ್ಯ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಆರ್.ವಿ. ರಾಘವೇಂದ್ರ, ಡಿಸ್ಕವರ್ ಮಾಂಟೆಸ್ಸರಿಯ ಸಂಸ್ಥಾಪಕ ನಿರ್ದೇಶಕಿ ಸುಮತಿ ರವೀಂದ್ರನಾಥ್ ಭಾಗವಹಿಸಲಿದ್ದಾರೆ' ಎಂದು ಟ್ರಸ್ಟ್‌ನ ಮೀರಾ ರಾಜಾರಾಮ್ ಪ್ರಾಣೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಕಕಾಲದಲ್ಲಿ ಎರಡು ಹೃದಯ ಕವಾಟಗಳ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಫ್ರಿಕಾದ 25 ವರ್ಷದ ಮಹಿಳೆಯೊಬ್ಬರಿಗೆ ಇಲ್ಲಿನ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಏಕಕಾಲದಲ್ಲಿ ಎರಡು ಹೃದಯ ಕವಾಟಗಳ ಬದಲಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿದ್ದಾರೆ.



ರೋಗಿ 15 ವರ್ಷಗಳಿಂದ ಸಮಸ್ಯೆ ಎದುರಿಸುತ್ತಿದ್ದರು. ಇದನ್ನು ನಿರ್ಲಕ್ಷಿಸಿದ್ದ ಕಾರಣ ಮಹಾಪಧಮನಿ ಸೋರಿಕೆಯಾಗಿ, ಜೀವಕ್ಕೆ ಅಪಾಯ ತಂದೊಡ್ಡುವ ಸ್ಥಿತಿ ನಿರ್ಮಾಣವಾಗಿತ್ತು.ಕಾಲಿನ ಸೋಂಕು, ಹಲವು ಬಾರಿ ಗರ್ಭಪಾತ ಸೇರಿ ವಿವಿಧ ಸಮಸ್ಯೆಗಳಿಗೂ ಒಳಗಾಗಿದ್ದರು. ಡಾ. ವಿವೇಕ್ ಜವಳಿ ನೇತೃತ್ವದ ವೈದ್ಯರ ತಂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದೆ ಎಂದು ಆಸ್ಪತ್ರೆ ತಿಳಿಸಿದೆ.

'ಮಹಿಳೆಯ ಹೃದಯವನ್ನು ಸಂಪೂರ್ಣ ತಪಾಸಣೆಗೆ ಒಳಪಡಿಸಿದ ಬಳಿಕ ಹೃದಯದ ಎರಡು ಕವಾಟಗಳಲ್ಲಿ ಬ್ಲಾಕೇಜ್ ಆಗಿರುವುದು ದೃಢಪಟ್ಟಿತು. ಮಹಾಪಧಮನಿಯ ಕವಾಟ ಮತ್ತು ಮಿಟ್ರಲ್ ಕವಾಟವನ್ನು ಬದಲಾಯಿಸಿದ್ದೇವೆ. ಅವರ ಎಡ ಹೃತ್ಕರ್ಣವನ್ನು ಚಿಕ್ಕದಾಗಿಸಿ, ರಕ್ತ ಹೆಪ್ಪುಗಟ್ಟುವುದನ್ನು ತಡೆಯಲು ಅವರ ಹೃದಯದ ಒಂದು ಭಾಗವನ್ನು ಮುಚ್ಚಿದೆವು. ಏಕಕಾಲದಲ್ಲಿಯೇ ಅವರಿಗೆ ಎರಡು ಕವಾಟ ಬದಲಿ ಶಸ್ತ್ರಚಿಕಿತ್ಸೆ ನಡೆಸಿದೆವು. ಇದು ಸವಾಲಿನ ಕೆಲಸವಾಗಿತ್ತು' ಎಂದು ಡಾ. ವಿವೇಕ್ ಜವಳಿ ತಿಳಿಸಿದ್ದಾರೆ.

ರಸ್ತೆ ಸ್ವಚ್ಛತೆಗೆ ಜಾಗೃತಿ ಅಗತ್ಯ

ಬೆಂಗಳೂರು: 'ನಗರದ ಸೌಂದರ್ಯ ಹೆಚ್ಚಿಸಬೇಕಾದರೆ ರಸ್ತೆ ಬದಿ ಕಸ ಬಿಸಾಡುವುದನ್ನು ನಿಲ್ಲಿಸಬೇಕು. ಈ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕು' ಎಂದು ಪೂರ್ವ ವಲಯದ ಆಯುಕ್ತೆ ಸ್ನೇಹಲ್ ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಗೋಪಾಲ್ ರಾಮನಾರಾಯಣ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ 'ಸ್ವಚ್ಛತಾ ಹಿ ಸೇವಾ 2024' ಅಭಿಯಾನದಲ್ಲಿ ಕಪ್ಪು ಚುಕ್ಕೆಗಳ (ಕಸ ಸುರಿಯುವ ಸ್ಥಳ ಬ್ಲ್ಯಾಕ್ ಸ್ಪಾಟ್) ಸೌಂದರ್ಯೀಕರಣ ಹಾಗೂ ಸ್ವಚ್ಛತೆಯ ಕುರಿತು ಅವರು ಮಾತನಾಡಿದರು.

ಡಾಲರ್ಸ್ ಕಾಲೊನಿಯ 4, 5 ಮತ್ತು 3ನೇ ಅಡ್ಡರಸ್ತೆಯಲ್ಲಿ ಕಸ ಸಂಗ್ರಹಣೆ ಕುರಿತು ಜಾಗೃತಿ ಮೂಡಿಸಲಾಯಿತು.

ಬಹುಮಾನ: ಘನತ್ಯಾಜ್ಯ ನಿರ್ವಹಣೆ ಕುರಿತ ಚಿತ್ರಕಲಾ ಸ್ಪರ್ಧೆಯಲ್ಲಿ ಸುಮಾರು 40 ಮಕ್ಕಳು ಭಾಗವಹಿಸಿದ್ದು, 15 ಮಕ್ಕಳಿಗೆ ಬಹುಮಾನ ನೀಡಲಾಯಿತು.

ಮೈಸೂರು ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ಮಹಾರಾಜಾಸ್ ಕಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ವಿಕ್ ವಿಟೆಡ್ 2, ಸೀ ಡೈಮಂಡ್ 7, ಇನ್‌ಎಕ್ಸಾಸ್ಟಿಬಲ್ 10
2ನೇ ರೇಸ್: ಫ್ಲೈಯಿಂಗ್ ಫಾಲ್ಕನ್ 3, ಫ್ಯೂರಿಯಸ್ ಫನ್ 4, ಐಲ್ಯಾಂಡ್ ಲಾಸ್ 5
3ನೇ ರೇಸ್: ವೈಟ್ ಲೈಸ್ 11, ರಾಪ್ಚರ್ 12, ಸಿಟಿ ಆಫ್ ಹಸ್ಲ್ 4
4ನೇ ರೇಸ್: ರಿವರ್ ಆಫ್ ಗೋಲ್ಡ್ 3. ಡಿಸಿಪಲ್ 6, ಅಲೈಸ್ ಬ್ಲೂ 10
5ನೇ ರೇಸ್: ಸ್ಟೆಲ್ಲಾಂಟಿಸ್ 5, ಅರಲಿನ 8, ಸೆಗರ 1
6ನೇ ರೇಸ್: ಶ್ಯಾಮ್‌ರಾಕ್ 2, ಒನ್ಸ್ ಯು ಗೋ ಬ್ಲ್ಯಾಕ್ 1, ಐರನ್ ಕ್ಲಾಡ್ 4
7ನೇ ರೇಸ್: ರೆಡ್ ಫಾಲ್ಕನ್ 3, ಟ್ರೂ ಪಂಚ್ 1, ಎಲ್ ಅಲಾಮಿನ್ 15
8ನೇ ರೇಸ್: ಎನ್‌ಆರ್‌ಐ ಟಚ್ 3, ಟವರ್ ಕ್ವೆಸ್ಟ್ 1, ಟ್ವಿಲೈಟ್ ಫೇಮ್ 2

ಉತ್ತಮ ಬೆಟ್: ಫ್ಲೈಯಿಂಗ್ ಫಾಲ್ಕನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

'ಮಹಿಳೆಯರ ಸುರಕ್ಷತೆಗೆ ಕ್ರಮ ಕೈಗೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರಾಧಗಳು ನಡೆದಾಗ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಆಗ್ರಹಿಸಿದೆ.

ವೈಯಾಲಿಕಾವಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಮಹಾಲಕ್ಷ್ಮೀ ಕೊಲೆ ಪ್ರಕರಣವನ್ನು ಉಲ್ಲೇಖಿಸಿ ಬೆಂಗಳೂರು ನಗರ ಹೆಚ್ಚುವರಿ ಪೊಲೀಸ್ ಕಮಿಷನರ್ ಅವರಿಗೆ ಸಂಘಟನೆಯ ನಿಯೋಗ ಗುರುವಾರ ಮನವಿ ಸಲ್ಲಿಸಿದೆ.

'ಅತ್ಯಾಚಾರ, ದೌರ್ಜನ್ಯ ಸೇರಿ ವಿವಿಧ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಮಹಿಳೆಯರನ್ನು ಸರಕಿನಂತೆ ಪರಿಗಣಿಸುವ, ಭೋಗವಸ್ತುವಾಗಿಯೇ ನೋಡುವ ಮನೋಭಾವ ಸಮಾಜದಲ್ಲಿದೆ. ಈ ಮನೋಭಾವ ಅಧಿಕಾರದ ಕೇಂದ್ರದಲ್ಲಿಯೂ ಇರುವುದರಿಂದ ಮಹಿಳೆಯರ ಘನತೆಯ ಬದುಕಿನ ಸಾಂವಿಧಾನಿಕ ಹಕ್ಕುಗಳನ್ನು ಉಳಿಸುವ ಕೆಲಸ ಹಿಂದೆ ಬೀಳುತ್ತಿದೆ. ರಾಜ್ಯ ಸರ್ಕಾರ ಕೂಡಾ ಇವುಗಳತ್ತ ಗಂಭೀರ ಗಮನ ಕೊಡದಿರುವುದು ಅಪರಾಧಿಗಳಿಗೆ ಬಲ ನೀಡಿದಂತಾಗಿದೆ' ಎಂದು ಹೇಳಿದೆ.

'ಪ್ರಕರಣಗಳು ನಡೆದಾಗ ಸಿ.ಸಿ. ಟಿ.ವಿ. ಕ್ಯಾಮೆರಾಗಳ ಅಳವಡಿಕೆ, ಸಮಾಲೋಚನಾ ಸಭೆಗಳು ಅಲ್ಪ ಸ್ವಲ್ಪ ಸಹಾಯಕವಾಗಬಹುದೇ ಹೊರತು, ಪೂರ್ಣ ಪ್ರಮಾಣದಲ್ಲಿ ಅಪರಾಧ ತಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಹಿಂಸೆ, ದೌರ್ಜನ್ಯ ಪ್ರಕರಣಗಳನ್ನು ಪೊಲೀಸ್ ಇಲಾಖೆಯು ಗಂಭೀರವಾಗಿ ಪರಿಗಣಿಸಿ, ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದೆ.

ಸ್ವಚ್ಛ, ಹಸಿರು ಬೆಂಗಳೂರಿಗಾಗಿ 'ಸ್ವಚ್ಛತಾ ಪ್ರತಿಜ್ಞೆ'

ಬೆಂಗಳೂರು: ಸ್ವಚ್ಛ, ಹಸಿರು ಬೆಂಗಳೂರಿಗಾಗಿ 'ಸ್ವಚ್ಛತಾ ಪ್ರತಿಜ್ಞೆ' ಮಾಡಲು ನಗರದ ನಾಗರಿಕರು ಹಾಗೂ ವಿದ್ಯಾರ್ಥಿಗಳಿಗೆ ಬಿಬಿಎಂಪಿ ಅವಕಾಶ ಮಾಡಿಕೊಟ್ಟಿದೆ.

'ಬೆಂಗಳೂರನ್ನು ಭಾರತದ ಸ್ವಚ್ಛ ನಗರವನ್ನಾಗಿ ಮಾಡೋಣ, ಅದಕ್ಕೆ ನಾವೆಲ್ಲರೂ ಪಣ ತೊಡೋಣ' ಎಂದು ನಾಗರಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪಾಲಿಕೆಯ ಜೊತೆ ಕೈಜೋಡಿಸಬಹುದು. ಅಕ್ಟೋಬರ್ 1ರೊಳಗೆ ವೆಬ್‌ಲಿಂಕ್ https://cleanblr.bbmp.gov.in/eng/pledge.php ಮೂಲಕ ಸ್ವಚ್ಛತಾ ಪ್ರತಿಜ್ಞೆ ಸ್ವೀಕರಿಸಬಹುದು.

ನಗರದಲ್ಲಿ ಇಂದು

'ಸಿಹಿಸುದ್ದಿ ಸಾರಿ' ಅಧಿವೇಶನ: ಆಯೋಜನೆ: ಯೆಹೋವನ ಸಾಕ್ಷಿಗಳು, ಸ್ಥಳ: ಇಬಿಸು ಕನ್ವೆನ್ಷನ್ ಸೆಂಟರ್, ಹೆಗಡೆ ನಗರ ಮುಖ್ಯರಸ್ತೆ, ಬಾಲಾಜಿ ಲೇಔಟ್, ಬೆಳಿಗ್ಗೆ 9.20

ಮೊದಲನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಡಾ.ಎಂ.ಸಿ. ಸುಧಾಕರ್, ಅತಿಥಿಗಳು: ಜೈರಾಮ್ ರಮೇಶ್, ಡಯನೇಶಿಯಸ್ ವಾಜ್, ಆಯೋಜನೆ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 10.15

ವಿಜ್ಞಾನ ಲೋಕ ವಿಸ್ಮಯದ ಮಾಯಾ ಜಗತ್ತು ಮಕ್ಕಳಿಗೆ ಪರಿಚಯಿಸುವ 'ಅತ್ಯಾಧುನಿಕ ಬಸ್' ಉದ್ಘಾಟನೆ: ಅತಿಥಿಗಳು: ಪ್ರಕಾಶ್ ರಾವ್, ಅಲಿ ಹ್ಯಾರಿಸ್ ಶೇರ್, ಮಂದಿರಾ ಬೇಡಿ, ಸ್ಥಳ: ಸೇಂಟ್ ಜೋಸೆಫ್ ಹೈಸ್ಕೂಲ್, ವಿಠ್ಠಲ್ ಮಲ್ಯ ರಸ್ತೆ, ಬೆಳಿಗ್ಗೆ 10.30

'ಡ್ರೈವಿಂಗ್ ಇನೋವೇಟಿವ್ ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ಆ್ಯಂಡ್ ಎಕನಾಮಿಕ್ ಸಸ್ಟೇನೆಬಿಲಿಟಿ' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಪಿ. ಮಣಿವಣ್ಣನ್, ಕೆ.ಸಿ. ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಎಚ್‌ಆರ್‌ಬಿಆರ್ ಲೇಔಟ್, ಕಲ್ಯಾಣನಗರ, ಬೆಳಿಗ್ಗೆ 11



ಪಿ.ಮಣಿವಣ್ಣನ್

'ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ–2024': ಉದ್ಘಾಟನೆ: ಆರ್.ವಿ. ದೇಶಪಾಂಡೆ, ಅತಿಥಿಗಳು: ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ವಿಶ್ವಾಸ್ ವಸಂತ್ ವೈದ್ಯ, ಯು.ಬಿ. ವೆಂಕಟೇಶ್, ಅಶೋಕ್ ಹಾರನಹಳ್ಳಿ, ರಾಜೇಂದ್ರ ಕುಮಾರ್ ಕಟಾರಿಯಾ, ಅಧ್ಯಕ್ಷತೆ: ಅಸಗೋಡು ಜಯಸಿಂಹ, ಆಯೋಜನೆ: ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾಂಗಣ, ಶೇಷಾದ್ರಿ ರಸ್ತೆ, ಬೆಳಿಗ್ಗೆ 11

ಎರಡು ದಿನಗಳ ರಂಗಪರಂಪರೋತ್ಸವ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಮಲ್ಲಿಕಾರ್ಜುನ್ ಮಹಾಮನೆ, ಆರ್. ಲಕ್ಷ್ಮಣಯ್ಯ, ಜಿ.ವೈ. ಪದ್ಮಾ ನಾಗರಾಜ್, ಅನುರಾಗ್, 'ಶ್ರೀಮನ್ ಮುಖವಾಗಿತ್ತು' ನಾಟಕ ಪ್ರದರ್ಶನ: ಕತೆ: ಕುವೆಂಪು, ನಿರ್ದೇಶನ: ಗಣಪತಿ ಗೌಡ, '36 ಅಲ್ಲ 63' ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ಗಣಪತಿ ಗೌಡ, ಆಯೋಜನೆ: ರಂಗ ಪರಂಪರೆ ಟ್ರಸ್ಟ್, ಸ್ಥಳ: ಸಿ.ಆರ್. ಸಿಂಹ ಸಾಂಸ್ಕೃತಿಕ ಭವನ, ಅಭಯಹಸ್ತ ಬಲಮುರಿ ಗಣಪತಿ ದೇವಸ್ಥಾನ, ನಾಲ್ಕನೇ ಮುಖ್ಯರಸ್ತೆ ಜ್ಞಾನಭಾರತಿ ಬಡಾವಣೆ, ವಳಗೇರಹಳ್ಳಿ, ಸಂಜೆ 6.30

ರಾಜ್ಯಮಟ್ಟದ ಬೃಹತ್ ವಿರಾಟ್ ವಿಶ್ವಕರ್ಮ ಮಹೋತ್ಸವ, 'ವಿಶ್ವಕರ್ಮ ಶ್ರೀ', 'ವಿಶ್ವಕರ್ಮ ಸೇವಾ ರತ್ನ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಜಗ್ಗೇಶ್, ಆಯೋಜನೆ: ವಿಶ್ವಕರ್ಮ ಸೇವಾ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

'ಜಿ. ನಾರಾಯಣಕುಮಾರ್ ಸಂಸ್ಮರಣೆ ಮತ್ತು ಜಿ.ನಾ.ಕು. ಪ್ರಶಸ್ತಿ' ಪ್ರದಾನ: ರಾಮಲಿಂಗಾರೆಡ್ಡಿ, ಉದ್ಘಾಟನೆ: ವಿ. ಗೋಪಾಲಗೌಡ, ಜಿನಾಕು ಭಾವಚಿತ್ರಕ್ಕೆ ಪುಷ್ಪನಮನ: ವಿ. ಸೋಮಣ್ಣ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಪ್ರಾಸ್ತಾವಿಕ ನುಡಿ: ಗುರುದೇವ್ ನಾರಾಯಣ್‌ಕುಮಾರ್, ಪ್ರಶಸ್ತಿ ಪುರಸ್ಕೃತರು: ಆರ್. ಲಕ್ಷ್ಮಿಕಾಂತ್, ಎಚ್. ರವೀಂದ್ರ, ವೆಂಕಟೇಶ್, ಎಂ. ಪ್ರಕಾಶಮೂರ್ತಿ, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ, ಬಿಬಿಎಂಪಿ ನೌಕರರ ಕನ್ನಡ ಸಂಘ, ಸ್ಥಳ: ಬಿಬಿಎಂಪಿ ನೌಕರರ ಭವನ, ಕೇಂದ್ರ ಕಚೇರಿ, ನರಸಿಂಹರಾಜ ವೃತ್ತ, ಸಂಜೆ 5

ಮುರಳೀಧರ ಬಿ.ಎಲ್., ಅವರ 'ಮನಸು ಮನಸಿನಾ ಮಾತು' ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಪುಸ್ತಕದ ಕುರಿತು: ಎಚ್. ದಂಡಪ್ಪ, ಅತಿಥಿ: ಜಯಕರ ಎಸ್.ಎಂ., ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು ಬಸವನಗುಡಿ, ಸಂಜೆ 6

ಸಾಲುಮರದ ತಿಮ್ಮಕ್ಕ ಅವರಿಗೆ ನೃತ್ಯನಮನ: ಪ್ರಸ್ತುತಿ: ಶಾಮಾ ಭಾಟೆ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರ ಕಾರ್ಯಾಚರಣೆ, ಹಲವು ಪ್ರಕರಣಗಳ ಪತ್ತೆ

ಆಟೊ, ಮೊಬೈಲ್ ಕಳ್ಳತನ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ


ಅಮ್ಜದ್ ಖಾನ್


ಫೈರೋಜ್ ಪಾಷಾ


ಶಾಬಾಜ್


ಮುಬಾರಕ್

ಬೆಂಗಳೂರು: ನಾಗರಬಾವಿ ಮನೆಯೊಂದರ ಎದುರು ನಿಲುಗಡೆ ಮಾಡಿದ್ದ ಆಟೊ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸೊಣ್ಣೇನಹಳ್ಳಿ ಉಲ್ಲಾಳ ಮುಖ್ಯರಸ್ತೆಯ 17ನೇ ಕ್ರಾಸ್‌ನ ನಿವಾಸಿ ಅಮ್ಜದ್ ಖಾನ್ (19) ಹಾಗೂ ಅದೇ ಬಡಾವಣೆಯ ನಿವಾಸಿ ಫೈರೋಜ್ ಪಾಷಾ (19) ಬಂಧಿತರು.

'ಬಂಧಿತರಿಂದ ₹3.25 ಲಕ್ಷ ಮೌಲ್ಯದ ಎರಡು ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ನಾಗರಬಾವಿಯ ಎರಡನೇ ಮುಖ್ಯರಸ್ತೆಯ ನಿವಾಸಿ ಹರ್ಷ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಆಗಸ್ಟ್ 23ರಂದು ರಾತ್ರಿ ಮನೆಯ ಎದುರು ನಿಲುಗಡೆ

ಅಪರಾಧ ಸುದ್ದಿ

ಮಾಡಿದ್ದ ಆಟೊವನ್ನು ನಕಲಿ ಕೀ ಬಳಸಿ ಇಬ್ಬರು ಕಳ್ಳತನ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳ ಬಂಧನದಿಂದ ಚಂದ್ರಾ ಲೇಔಟ್, ಅನ್ನಪೂರ್ಣೇಶ್ವರಿ ನಗರ, ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳೂ ಪತ್ತೆ ಆಗಿವೆ' ಎಂದು ಮಾಹಿತಿ ನೀಡಿದರು.

ಮೊಬೈಲ್ ಕಳ್ಳತನ: ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರನ್ನು ಅಡ್ಡಗಟ್ಟಿ ಮೊಬೈಲ್ ಫೋನ್ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಇದೇ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಎಂ.ಎಸ್.ಪಾಳ್ಯದ ನಿವಾಸಿ ಶಾಬಾಜ್ (24) ಹಾಗೂ ಗಂಗೊಂಡನಹಳ್ಳಿ ಐದನೇ ಮುಖ್ಯರಸ್ತೆಯ ಮುಬಾರಕ್ (24) ಬಂಧಿತರು.

'ಬಂಧಿತರಿಂದ ₹2.15 ಲಕ್ಷ ಮೌಲ್ಯದ 11 ಮೊಬೈಲ್ ಫೋನ್ ಹಾಗೂ ಕೃತ್ಯಕ್ಕೆ ಬಳಸಿದ್ದ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಶಿವಕುಮಾರ್ ಅವರು ಗೋವಿಂದ ರಾಜನಗರದ ಬಿಡಿಎ ಕಾಂಪ್ಲೆಕ್ಸ್ ಎದುರು ನಡೆದು ತೆರಳುತ್ತಿದ್ದಾಗ, ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು ಐಫೋನ್ ಕಸಿದು ಪರಾರಿ ಆಗಿದ್ದರು. ಶಿವಕುಮಾರ್ ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಆರೋಪಿಗಳ ಬಂಧನದಿಂದ ಅನ್ನಪೂರ್ಣೇಶ್ವರಿ ನಗರ ಹಾಗೂ ಕಾಡುಗೊಂಡನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದರು.

ವಂಚನೆ ಪ್ರಕರಣ: 'ಬಿಟಿವಿ' ಎಂ.ಡಿ ಕಸ್ಟಡಿಗೆ

ಬೆಂಗಳೂರು: ವಂಚನೆ ಪ್ರಕರಣದಲ್ಲಿ 'ಬಿಟಿವಿ' ಸುದ್ದಿವಾಹಿನಿಯ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜಿ.ಎಂ. ಕುಮಾರ್ ಅವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ಐದು ದಿನ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಕುಮಾರ್ ಅವರು ಗುರುವಾರ ನ್ಯಾಯಾಲಯಕ್ಕೆ ಹಾಜರಾಗಲು ಬರುತ್ತಿದ್ದ ಅದೇ ವೇಳೆ ಅವರನ್ನು ವಶಕ್ಕೆ ಪಡೆಯಲಾಯಿತು.

'ಜಿ.ಎಂ.ಕುಮಾರ್ ವಿರುದ್ಧ ಅಶ್ವಿನ್ ಮಹೇಂದ್ರ ಅವರು ದೂರು ನೀಡಿದ್ದರು. ಐಪಿಸಿ ಸೆಕ್ಷನ್ 402 (ನಂಬಿಕೆ ದ್ರೋಹ) ಹಾಗೂ ಸೆಕ್ಷನ್ 420 (ವಂಚನೆ) ಆರೋಪದಡಿ ಕುಮಾರ್ ವಿರುದ್ಧ 2022ರಲ್ಲಿ ವಿಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

ಈ ಪ್ರಕರಣದಲ್ಲಿ ಕುಮಾರ್ ಅವರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಅಶ್ವಿನ್ ಮಹೇಂದ್ರ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸುಪ್ರೀಂ ಕೋರ್ಟ್ ಜಾಮೀನು ರದ್ದುಗೊಳಿಸಿ ಶರಣಾಗುವಂತೆ ಕುಮಾರ್ ಅವರಿಗೆ ಸೂಚಿಸಿತ್ತು. ಆದರೆ, ಅವರು ತಲೆಮರೆಸಿಕೊಂಡು ಓಡಾಡುತ್ತಿದ್ದರು.

ಮಹಾಲಕ್ಷ್ಮಿ ಕೊಲೆ ಮನಸ್ತಾಪ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಯಾಲಿಕಾವಲ್‌ನಲ್ಲಿ ನಡೆದಿದ್ದ ಮಹಾಲಕ್ಷ್ಮಿ ಅವರ ಕೊಲೆ ಪ್ರಕರಣದ ಆರೋಪಿ ಮುಕ್ತಿ ರಂಜನ್ ರಾಯ್ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ಬರೆದಿದ್ದಾರೆ ಎನ್ನಲಾದ ಮರಣಪತ್ರವು ಒಡಿಶಾದ ಧುಸುರಿ ಪೊಲೀಸರಿಗೆ ಸಿಕ್ಕಿದೆ.

ಆ ಪತ್ರವನ್ನು ಬೆಂಗಳೂರು ನಗರ ಪೊಲೀಸರಿಗೆ ಧುಸುರಿ ಪೊಲೀಸರು ಹಸ್ತಾಂತರಿಸಿದ್ದಾರೆ.

ಆರೋಪಿ ಬಂಧನಕ್ಕಾಗಿ ಮೂರು ವಿಶೇಷ ಪೊಲೀಸ್ ತಂಡಗಳು ಬೆಂಗಳೂರಿನಿಂದ ಒಡಿಶಾಕ್ಕೆ ತೆರಳಿದ್ದವು.

'ಸೆ.3ರಂದು ಮಹಾಲಕ್ಷ್ಮಿ ಮನೆಗೆ ತೆರಳಿದ್ದೆ. ಆಗ ಇಬ್ಬರ ಮಧ್ಯೆ ಜಗಳ ನಡೆದಿತ್ತು. ಆಗ ಆಕೆಯೇ ನನ್ನ ಮೇಲೆ ಹಲ್ಲೆ ನಡೆಸಿದ್ದಳು. ಇದರಿಂದ ಕೋಪಗೊಂಡು, ಪ್ರತಿಯಾಗಿ ಹಲ್ಲೆ ನಡೆಸಿ ಕೊಲೆ ಮಾಡಿದೆ. ದೇಹವನ್ನು 59 ತುಂಡುಗಳಾಗಿ ಕತ್ತರಿಸಿ ಫ್ರಿಜ್‌ನಲ್ಲಿ ಇರಿಸಿದ್ದೆ. ಹಲವು ದಿನಗಳಿಂದ ಇಬ್ಬರೂ ಆತ್ಮೀಯರಾಗಿದ್ದರೂ ಸಣ್ಣ ವಿಚಾರಕ್ಕೂ ಅವಳು ಮುನಿಸಿಕೊಳ್ಳುತ್ತಿದ್ದಳು. ಅವಳ ವರ್ತನೆಯಿಂದ ಬೇಸತ್ತು ಕೃತ್ಯ ಎಸಗಿದ್ದೇನೆ ಎಂಬುದಾಗಿ ಮರಣಪತ್ರದಲ್ಲಿ ಉಲ್ಲೇಖಿಸಿದ್ದಾನೆ' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಆತ್ಮಹತ್ಯೆ ಮಾಡಿಕೊಂಡಿದ್ದ ಸ್ಥಳದಲ್ಲಿ ಲ್ಯಾಪ್‌ಟಾಪ್ ದೊರೆತಿಲ್ಲ. ಒಂದು ಬ್ಯಾಗ್ ಮತ್ತು ಸ್ಕೂಟರ್ ಇತ್ತು. ಬ್ಯಾಗ್, ಅದರಲ್ಲಿದ್ದ ದಾಖಲೆಗಳು ಹಾಗೂ ಮರಣಪತ್ರವನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಡ್ಡಾ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ಅವಮಾನಕರ ಹಾಗೂ ಪ್ರಚೋದನಕಾರಿ ಹೇಳಿಕೆ ಪ್ರಕಟಿಸಲಾಗಿದೆ' ಎಂಬ ಆರೋಪದಡಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ವಿರುದ್ಧ ಕಲಬುರಗಿಯ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಕಲಬುರಗಿಯ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಿಸಿರುವ ದೂರು ಹಾಗೂ ಅದಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಜೆ.ಪಿ. ನಡ್ಡಾ ಹಾಗೂ ಬಿಜೆಪಿ ರಾಷ್ಟ್ರೀಯ ಐ.ಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ನಡ್ಡಾ ಪರ ವಕೀಲ ಎಂ.ವಿನೋದ್ ಕುಮಾರ್, 'ದೂರಿನಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 153 (ಎ) ಅಡಿ ಆರೋಪ ಹೊರಿಸಲಾಗಿದೆ. ಆದರೆ, ಅದಕ್ಕೆ ಪುರಾವೆಗಳಿಲ್ಲ. ದೆಹಲಿಯಲ್ಲಿ ಟ್ವೀಟ್ ಮಾಡಿರುವುದಕ್ಕೂ ಕಲಬುರಗಿಗೂ ಏನು ಸಂಬಂಧ? ಅರ್ಜಿದಾರರ ವಿರುದ್ಧದ ಇಂತಹುದೇ ಬೇರೊಂದು ಪ್ರಕರಣವನ್ನು ನ್ಯಾಯಾಲಯ ಈಗಾಗಲೇ ರದ್ದುಪಡಿಸಿದೆ. ಹಾಗಾಗಿ, ಈ ಪ್ರಕರಣಕ್ಕೆ ಸಂಪೂರ್ಣ ತಡೆ ನೀಡಬೇಕು' ಎಂದು ಕೋರಿದರು.

ವಾದ ಮಾನ್ಯ ಮಾಡಿದ ನ್ಯಾಯಪೀಠ, ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿ, ದೂರುದಾರ ಪ್ರವೀಣ್ ಕುಮಾರ್ ಪಾಟೀಲ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಹೈಕೋರ್ಟ್ ಅನುಮತಿ ಇಲ್ಲದೆ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬಾರದು' ಎಂದು ತನಿಖಾಧಿಕಾರಿಗೆ ನಿರ್ದೇಶನ ನೀಡಿದ ಪೀಠವು ವಿಚಾರಣೆಯನ್ನು ಅಕ್ಟೋಬರ್ 24ಕ್ಕೆ ಮುಂದೂಡಿದೆ.

'ದ್ರಾವಿಡ ಭಾಷೆಗಳಿಗೆ ಸಿಗದ ಪ್ರಾಮುಖ್ಯ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಗೌರಿ ಕಿರುಬನಂದನ್ ಅವರಿಗೆ 'ದ್ರಾವಿಡ ಭಾಷಾ ಅನುವಾದ ಪ್ರಶಸ್ತಿ'ಯನ್ನು ಹಂ.ಪ. ನಾಗರಾಜಯ್ಯ ಪ್ರದಾನ ಮಾಡಿದರು. ಡಿಬಿಟಿಎ ಸಲಹೆಗಾರ ನಾ. ದಾಮೋದರ ಶೆಟ್ಟಿ, ಡಿಬಿಟಿಎ ಅಧ್ಯಕ್ಷೆ ಸುಷ್ಮಾ ಶಂಕರ್ ಹಾಗೂ ಕಲಾವಿದೆ ಲಕ್ಷ್ಮೀ ಚಂದ್ರಶೇಖರ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ದೇಶದಲ್ಲಿ ಹಿಂದಿ ಮತ್ತು ಸಂಸ್ಕೃತ ಭಾಷೆಗೆ ನೀಡುವ ಪ್ರಾಮುಖ್ಯವನ್ನು ದ್ರಾವಿಡ ಭಾಷೆಗಳಿಗೆ ನೀಡುತ್ತಿಲ್ಲ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದರು.

ದ್ರಾವಿಡ ಭಾಷಾ ಅನುವಾದಕರ ಸಂಘ (ಡಿ.ಬಿ.ಟಿ.ಎ) ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಲೇಖಕಿ ಗೌರಿ ಕಿರುಬನಂದನ್ ಅವರಿಗೆ 'ದ್ರಾವಿಡ ಭಾಷಾ ಅನುವಾದ ಪ್ರಶಸ್ತಿ' ಪ್ರದಾನ ಮಾಡಿದರು. ಈ ಪ್ರಶಸ್ತಿಯು ₹11,111 ನಗದು ಒಳಗೊಂಡಿದೆ.

'ದ್ರಾವಿಡ ಭಾಷೆಗಳಲ್ಲಿ ಪ್ರತಿಭಾನ್ವಿತ ಸಾಹಿತಿಗಳನ್ನು ಪ್ರಾದೇಶಿಕ ಭಾಷೆಗಳಿಗೆ ಸೀಮಿತಗೊಳಿಸಲಾಗಿದೆ. ದ್ರಾವಿಡ ಭಾಷೆಗಳಲ್ಲಿ ತಮಿಳು ಭಾಷಾ ಸಾಹಿತ್ಯ ಮಾತ್ರ ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದಗೊಂಡಿದೆ. ಕನ್ನಡ, ತೆಲುಗು, ಮಲಯಾಳ ಭಾಷೆಯ ಸಾಹಿತ್ಯ ಅಷ್ಟಾಗಿ ಜಗತ್ತಿನ ಬೇರೆ ಭಾಷೆಗಳಿಗೆ ಅನುವಾದಗೊಂಡಿಲ್ಲ' ಎಂದು ನಾಗರಾಜಯ್ಯ ಹೇಳಿದರು.

'ದ್ರಾವಿಡ ಭಾಷೆಯ ಸಾಹಿತ್ಯ ಜಗತ್ತಿನ ವಿವಿಧೆಡೆ ತಲುಪಬೇಕಾದರೆ ಇಲ್ಲಿನ ಸಾಹಿತ್ಯ ಕೃತಿಗಳು ಜಾಗತಿಕ ಭಾಷೆಗೆ ಹೆಚ್ಚು ಹೆಚ್ಚು ಅನುವಾದವಾಗಬೇಕು. ಇದರಿಂದ ನಮ್ಮ ಭಾಷೆಯೂ ಜಾಗತಿಕ ಮಟ್ಟಕ್ಕೆ ಹೋಗಲಿದೆ' ಎಂದರು.

ಕಲಾವಿದೆ ಲಕ್ಷ್ಮೀ ಚಂದ್ರಶೇಖರ್, 'ದ್ರಾವಿಡ ಭಾಷೆಗಳು ಸಮೃದ್ಧ ಸಾಹಿತ್ಯ ಹೊಂದಿವೆ. ಈ ಭಾಷೆಗಳ ನಡುವೆ ಕೊಡುಕೊಳ್ಳುವಿಕೆ ಹೆಚ್ಚಬೇಕು' ಎಂದು ಹೇಳಿದರು.

ಪ್ರಶಸ್ತಿ ಪುರಸ್ಕೃತೆ ಗೌರಿ ಕಿರುಬನಂದನ್, 'ಮೂಲ ಕೃತಿಗೆ ಧಕ್ಕೆ ಬಾರದಂತೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವುದು ಸುಲಭವಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಹುಲ್ ವಿರುದ್ಧದ ಅರ್ಜಿ: ತುರ್ತು ವಿಚಾರಣೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪವನ್ನು ಟೀಕಿಸುವ ಭರದಲ್ಲಿ ಮಹಿಳೆಯರ ಮಾನ ಹಾನಿಯಾಗುವಂತೆ ಹೇಳಿಕೆ ನೀಡಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯ ತುರ್ತು ವಿಚಾರಣೆಗೆ ಹೈಕೋರ್ಟ್ ನಿರಾಕರಿಸಿದೆ.

'ಆಲ್ ಇಂಡಿಯಾ ದಲಿತ್ ಆ್ಯಕ್ಷನ್ ಕಮಿಟಿ' ರಾಷ್ಟ್ರೀಯ ಅಧ್ಯಕ್ಷ ಚಿ.ನಾ. ರಾಮು, ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷೆ ಸುಶೀಲಾ ದೇವರಾಜ್ ಸಲ್ಲಿಸಿರುವ ಅರ್ಜಿ ಇದು.

ಷಡಕ್ಷರಿ ಮಠದ ಸ್ವಾಮೀಜಿಗೆ ಬೆದರಿಕೆ: ₹6 ಕೋಟಿಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಪಟೂರಿನ ಷಡಕ್ಷರಿ ಮಠದ ರುದ್ರಮುನಿಸ್ವಾಮಿ ಅವರಿಗೆ ಬೆದರಿಕೆ ಹಾಕಿ, ₹6 ಕೋಟಿಗೆ ಬೇಡಿಕೆ ಇಟ್ಟಿದ್ದ ಆರೋಪದ ಅಡಿ ಮಹಿಳೆಯೊಬ್ಬರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಾಗಿದೆ.

ವಿದ್ಯಾ ಬಿರಾದಾರ್ ಪಾಟೀಲ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಆಗಸ್ಟ್ 31ರಂದು ಮಧ್ಯಾಹ್ನ 3ರ ಸುಮಾರಿಗೆ ಸ್ವಾಮೀಜಿ ಅವರಿಗೆ ಕರೆ ಮಾಡಿದ್ದ ಮಹಿಳೆ, ತಾನು ರಾಜ್ಯ ಮಾಹಿತಿ ಹಕ್ಕು ಆಯೋಗದ ಅಧ್ಯಕ್ಷೆ ಹಾಗೂ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರ ಸಹೋದರಿ ಎಂಬುದಾಗಿ ಪರಿಚಯ ಮಾಡಿಕೊಂಡಿದ್ದರು. ಡಿ.ಬಿ.ಪಲ್ಲವಿ ಹಾಗೂ ಸೂರ್ಯನಾರಾಯಣ ಎಂಬುವರು ತಮಗೆ ಸೇರಿದ ದೃಶ್ಯಾವಳಿ ಹಾಗೂ ದೂರಿನ ಪತ್ರ ನೀಡಿ, ಕ್ರಮ ಕೈಗೊಳ್ಳುವಂತೆಯೂ ಕೋರಿದ್ದಾರೆಂದು ಹೇಳಿಕೊಂಡಿದ್ದರು. ಅಲ್ಲದೇ ವಿದ್ಯಾ ಅವರು ಸ್ವಾಮೀಜಿ ಅವರಿಗೆ ಪದೇ ಪದೇ ಕರೆ ಮಾಡಿ ಕಿರುಕುಳ ನೀಡುತ್ತಿದ್ದರು' ಎಂಬುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಸ್ವಾಮೀಜಿ ಅವರ ಕಾನೂನು ಸಲಹೆಗಾರ ಧನಂಜಯ್ ಅವರು ವಿದ್ಯಾ ಅವರನ್ನು ಬೆಂಗಳೂರಿನ ಗಾಂಧಿ ನಗರದ ರಾಮಕೃಷ್ಣ ಹೋಟೆಲ್ ಬಳಿ ಭೇಟಿ ಮಾಡಿದ್ದರು. ಆಗ ಸ್ವಾಮೀಜಿ ಅವರಿಗೆ ಸಂಬಂಧಿಸಿದ ಅಶ್ಲೀಲ ವಿಡಿಯೊಗಳಿದ್ದು, ಅದನ್ನು ಬಹಿರಂಗಪಡಿಸದೇ ಇರಲು ₹6 ಕೋಟಿಗೆ ಬೇಡಿಕೆ ಇಟ್ಟಿದ್ದರು. ತಕ್ಷಣ ₹50 ಲಕ್ಷ ನೀಡಬೇಕು. ಹಣ ನೀಡದಿದ್ದರೆ ಅಶ್ಲೀಲ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಲಾಗುವುದು ಎಂದು ಬೆದರಿಸಿದ್ದರು' ಎಂದು ದೂರಲಾಗಿದೆ.

'ಸ್ವಾಮೀಜಿ ಅವರನ್ನೇ ಹೋಲುವಂತೆ ನಕಲಿ ಅಶ್ಲೀಲ ವಿಡಿಯೊ, ಫೋಟೊಗಳನ್ನು ಸೃಷ್ಟಿಸಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ನಾಳೆಯಿಂದ

ಬೆಂಗಳೂರು: ಆಲ್ ಇಂಡಿಯಾ ಫೆಡರೇಷನ್ ಆಫ್ ವುಮೆನ್ ಲಾಯರ್ಸ್ ಮತ್ತು ಕರ್ನಾಟಕ ಫೆಡರೇಷನ್ ಆಫ್ ವುಮೆನ್ ಲಾಯರ್ಸ್ ವತಿಯಿಂದ ಇದೇ 28 ಮತ್ತು 29ರಂದು ವಿಧಾನಸೌಧದಲ್ಲಿ 'ಬ್ರೇಕಿಂಗ್ ಬ್ಯಾರಿಯರ್ಸ್–ಬಿಲ್ಡಿಂಗ್ ಬ್ರಿಡ್ಜಸ್' ಎಂಬ ರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

'ಮಹಿಳಾ ಸಬಲೀಕರಣ, ವಕೀಲ ವೃತ್ತಿಯಲ್ಲಿ ಲಿಂಗ ಸಮಾನತೆ ಹೆಚ್ಚಿಸುವುದು ಹಾಗೂ ಸಾಮಾಜಿಕ ಅಂತರವನ್ನು ಕಡಿಮೆ ಮಾಡುವುದು ಈ ಸಮ್ಮೇಳನದ ಉದ್ದೇಶವಾಗಿದೆ' ಎಂದು ಫೆಡರೇಷನ್‌ನ ಅಧ್ಯಕ್ಷೆ ಹೇಮಲತಾ ಮಹಿಷಿ ಹೇಳಿದರು.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿಶೇಷ ಭೂಸ್ವಾಧೀನಾಧಿಕಾರಿರವರ ಕಚೇರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಸಂಪರ್ಕ ಸೌಧ, ಸರ್ವೆ ನಂ.8 (ಬಿ.ಇ.ಪಿ ಆವರಣ),
ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010
ದೂ.ನಂ: 080–22024000 ಇ–ಮೇಲ್: cekrdcl@gmail.com, laqkrdcl@gmail.com

ಪ್ರಕಟಣೆ

ನಂ. ಕೆ.ಆರ್.ಡಿ.ಸಿ.ಎಲ್./ಭೂಸ್ವಾ/ಬಿಎಸ್‌ಆರ್–2/ಪ್ರಕಟಣೆ/2022–23/1665 ದಿನಾಂಕ: 24.09.2024

ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಕಲಂ 19ರಡಿ ಅಧಿಸೂಚನೆ ಸಂಖ್ಯೆ: **ಲೋಇ 77 ಇಎಪಿ 2019 ದಿನಾಂಕ:30–04–2020 ಮತ್ತು ಲೋಇ 75 ಇಎಪಿ 2019 ದಿನಾಂಕ:20.10.2020 ಮತ್ತು 22.01.2021 ರಂತೆ ಹಾಗೂ ಲೋಇ 74 ಇಎಪಿ 2019 ದಿನಾಂಕ:21.10.2021 ರಂತೆ** ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಕ್ರಮವಾಗಿ ದಿನಾಂಕ: 15.05.2021 ರಂದು ಹಾಗೂ ದಿನಾಂಕ: 29.03.2022 ರಂತೆ ಐತೀರ್ಪು ರಚಿಸಿ ಆದೇಶಿಸಲಾಗಿದೆ. ಈ ಪೈಕಿ ಈ ಕೆಳಕಂಡ ಗ್ರಾಮಗಳಲ್ಲಿನ ಸರ್ವೆ ನಂಬರುಗಳ ಭೂಮಾಲೀಕರು ತಹಲ್‌ವರೆವಿಗೂ ಭೂಮಾಲೀಕತ್ವವನ್ನು ಸಾಬೀತುಪಡಿಸುವ ದಾಖಲೆ ಹಾಗೂ ವೈಯಕ್ತಿಕ ದಾಖಲೆಗಳನ್ನು ಸಲ್ಲಿಸದೇ ಇರುವುದು/ಅಪೂರ್ಣವಾಗಿ ಸಲ್ಲಿಸಿರುವುದು ಕಂಡುಬಂದಿರುತ್ತದೆ. ಆದುದರಿಂದ ಈ ಕೆಳಕಂಡ ಸರ್ವೆ ನಂಬರುಗಳ ಭೂಮಾಲೀಕರು ತಮ್ಮ ಜಮೀನಿಗೆ ಸಂಬಂಧಿಸಿದ/ಮಾಲೀಕತ್ವವನ್ನು ಸಾಬೀತುಪಡಿಸುವ ದಾಖಲೆಗಳು ಹಾಗೂ ಬ್ಯಾಂಕ್ ಖಾತೆ ವಿವರಗಳನ್ನೊಳಗೊಂಡ ವೈಯಕ್ತಿಕ ದಾಖಲೆಗಳನ್ನು (ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಭಾವಚಿತ್ರಗಳು ಇತ್ಯಾದಿ) ಈ ಪ್ರಕಟಣೆಯು ಪ್ರಕಟಗೊಂಡ 7 ದಿನಗಳೊಳಗಾಗಿ ನಿಗಮದ ಕೇಂದ್ರ ಕಛೇರಿಗೆ (ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಸಂಪರ್ಕ ಸೌಧ, ಸರ್ವೆ ನಂ.8 (ಬಿ.ಇ.ಪಿ ಆವರಣ), ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010) ಸಲ್ಲಿಸಲು ಅಂತಿಮವಾಗಿ ತಿಳಿಸಿದೆ. ತಪ್ಪಿದ್ದಲ್ಲಿ, ಪರಿಹಾರದ ಮೊಬಲಗನ್ನು ಸಕ್ಷಮ ನ್ಯಾಯಾಲಯದಲ್ಲಿ ಠೇವಣೀಕರಿಸಲು ಕ್ರಮವಹಿಸಲಾಗುವುದು ತಿಳಿಯುವುದು.

ಷೆಡ್ಯೂಲ್

ಬೆಂಗಳೂರು ಸುತ್ತಮುತ್ತಲಿನ ರಸ್ತೆ ಸಂಖ್ಯೆ–1

ಕ್ರಮ ಸಂಖ್ಯೆ	ಅಧಿಸೂಚನೆಯಂತೆ ಖಾತೆದಾರರ ಹೆಸರು	ಸರ್ವೆ ನಂಬರ್	ಹಿಸ್ಸಾ ನಂ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ: ಒಟ್ಟು ಎ–ಗು–ಆ	ಖರಾಬು ಎ–ಗು–ಆ	ಐನು ಎ–ಗು–ಆ
1	2	3	4	5	6	7
	ಗ್ರಾಮದ ಹೆಸರು: ಚೀಮಸಂದ್ರ	ತಾಲ್ಲೂಕು : ಬೆಂಗಳೂರು ಪೂರ್ವ		ಜಿಲ್ಲೆ : ಬೆಂಗಳೂರು		
1	ಚಿ ಹರಿಲಾಲ್ ಬಿನ್ ತಾರಾಚಂದ್	17	3	R–0.02.08 L–0.01.00	0.00.00 0.00.00	0.02.08 0.01.00
2	ಎ) ಆರ್.ಪ್ರತಾಪ್ ಕುಮಾರ್ ರೆಡ್ಡಿ ಬಿ) ವಿ ವೆಂಕಟಕೃಷ್ಣರೆಡ್ಡಿ ಮತ್ತಿತರರು ಸಿ) ಬಿ.ಎನ್..ಶೆಟ್ಟಿ ಅನಸೂಯ ಕೋಂ ಎ.ನರಸಿಂಹಮೂರ್ತಿ ಡಿ) ಎಂ.ಕೆ. ಗೋವಿಂದರೆಡ್ಡಿ ಬಿನ್ ಸುಬ್ಬಾರೆಡ್ಡಿ ಇ) ಶೋಭಾ ರೆಡ್ಡಿ ಎಫ್) ವಿ. ಸೂರ್ಯಕುಮಾರಿ ಬಿನ್ ವಿ.ರಾಮಕೃಷ್ಣರೆಡ್ಡಿ ಜಿ) ಆನಿಲ್ ಕೆ ಮೆನನ್ ಬಿನ್ ಎಂ.ಕೆ. ಮೆನನ್ ಹೆಚ್) ವಿ. ಲಕ್ಷ್ಮೀ ಕೋಂ ವಿ. ಜನಾರ್ಧನರೆಡ್ಡಿ ಐ) ಆರ್.ಪ್ರತಾಪ್ ಕುಮಾರ್ ರೆಡ್ಡಿ ಬಿನ್ ಲೇ. ಆರ್.ಸುಬ್ಬರಾಮಿ ರೆಡ್ಡಿ ಜೆ) ವಿ.ವೆಂಕಟಕೃಷ್ಣಾರೆಡ್ಡಿ ಬಿನ್ ವೆಂಕಟರಾಮಿರೆಡ್ಡಿ	105		0.01.08	–	0.01.08
	ಗ್ರಾಮದ ಹೆಸರು: ಬೊಮ್ಮೇನಹಳ್ಳಿ	ತಾಲ್ಲೂಕು : ಬೆಂಗಳೂರು ಪೂರ್ವ		ಜಿಲ್ಲೆ : ಬೆಂಗಳೂರು		
1	ಇಂಡೋಜಪಾನ್ ಸಾಫ್ಟವೇರ್ ಇಂ..ಕಾ..ಪ್ರೈಲಿ.	147		0.01.08	0.00.00	0.01.08
	ಗ್ರಾಮದ ಹೆಸರು: ಮಂಡೂರು	ತಾಲ್ಲೂಕು : ಬೆಂಗಳೂರು ಪೂರ್ವ		ಜಿಲ್ಲೆ: ಬೆಂಗಳೂರು		
1	ಕಲ್ಲಂ ವೀರಾರೆಡ್ಡಿ ಬಿನ್ ಕಲ್ಲಂ ಕೃಷ್ಣಾರೆಡ್ಡಿ	181	1	0.00.08	0.00.00	0.00.08
2	ಕಲ್ಲಂ ವೀರಾರೆಡ್ಡಿ ಬಿನ್ ಕಲ್ಲಂ ಕೃಷ್ಣಾರೆಡ್ಡಿ	181	2	0.00.08	0.00.00	0.00.08
3	ಎ)ಆರ್.ಕೃಷ್ಣಮೂರ್ತಿ ಬಿನ್ ಲೇ. ಚಿಕ್ಕರಂಗಪ್ಪ ಬಿ)ಆರ್.ಕೃಷ್ಣಮೂರ್ತಿ ಬಿನ್ ಲೇ. ಚಿಕ್ಕರಂಗಪ್ಪ ಸಿ)ಲಿಜಿ ಜಾನ್ಸನ್ ಕೋಂ ಜಾನ್ಸನ್ ಡಿ)ಪಿ.ಪದ್ಮನಾಭರೆಡ್ಡಿ ಬಿನ್ ಪಿ.ರಘುನಾಥರೆಡ್ಡಿ ಇ)ಬಂಡಪಲ್ಲಿ ನವೀನ್ ಕುಮಾರ್ ಬಿನ್ ಬಂಡಪಲ್ಲಿ ಜ್ಯೋತೀಶ್ವರ ರೆಡ್ಡಿ ಎಫ್)ಐಸಾಕ್ ಪುತೇನ್ ವಿಲಯಿಲ್ ಜಾರ್ಜ್ ಬಿನ್ ಪಿ.ಸಿ.ಜಾರ್ಜ್ ಕುಟ್ಟಿ ಜಿ)ಟಿ.ಎಂ.ಇಲಿಯಾಸ್ ಬಿನ್ ಲೇ. ಕೆ.ಟಿ.ಕುನ್ಹಿ ಮೊಯಿದ್ದೀನ್ ಹಾಜಿ ಹೆಚ್)ಪಿ.ಡಿ.ಜಿಜಿಮೊನ್ ಬಿನ್ ಲೇ. ಪಿ.ಒ.ಡೇನಿಯಲ್ ಐ)ರೋಷಿನಿ ಪ್ರಥೀಪ್ ಕೋಂ ಪ್ರದೀಪ್ ಜಾರ್ಜ್ ಜೆ)ಪ್ರಿಯಾ ಜಾರ್ಜ್ ಬಿನ್ ವಿ.ವಿ.ಜಾರ್ಜ್ ಕೆ)ಅಫ್ಜಲ್.ಎ.ಎನ್. ಬಿನ್ ಲೇ. ಕೆ.ಪಿ.ಅಬ್ದುಲ್ ಅಜೀಜ್ ಎಲ್)ಶುಕೂರ್.ಕೆ.ಎಂ. ಬಿನ್ ಟಿ.ಯು.ಮೂಸಾ ಎಮ್)ಫಿಲಿಪ್ ವರ್ಗೀಸ್ ಬಿನ್ ಲೇ. ಪಿ.ಎ.ವರ್ಗೀಸ್ ಎನ್)ಎಸ್.ಡಿ.ಉಮೇಶ್ ಬಿನ್ ದುಗ್ಗಪ್ಪ ಗೌಡ ಒ)ರಾಜ್ ಕುಮಾರ್ ಸಹಾನಿ ಬಿನ್ ಬೊತಾಯ್ ಸಹಾನಿ	180	1	0.01.04	0.00.00	0.01.04
4	ಎ.ರಾಮಕೃಷ್ಣ ಬಿನ್ ಆಂಜನೇಯಾಚಾರ್	31		0.01.00	0.00.00	0.01.00
	ಗ್ರಾಮದ ಹೆಸರು : ಹಂದರಹಳ್ಳಿ	ತಾಲ್ಲೂಕು: ದೇವನಹಳ್ಳಿ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಗೋಪಾಲ್‌ರೆಡ್ಡಿಬಸ ಬಿನ್ ಅಪ್ಪಲರೆಡ್ಡಿಬಸ	121	6	00.00.08		00.00.08
2	ಎಂ.ರಾಮಚಂದ್ರ – ಕೆ.ವಿ.ಮುನಿಯಪ್ಪ	122	2	0.14.12	–	0.14.12
3	ಎಂ.ರಾಮಚಂದ್ರ ಬಿನ್ ಕೆ.ವಿ.ಮುನಿಯಪ್ಪ	122	3	0.14.08	–	0.14.08
	ಗ್ರಾಮದ ಹೆಸರು : ಬೂದಿಗೆರೆ	ತಾಲ್ಲೂಕು: ದೇವನಹಳ್ಳಿ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಹನುಮಾನ್ ಸಿಂಗ್ ಬಿನ್ ಲೇಟ್ ಶ್ಯಾಮ್‌ಸಿಂಗ್ ಅವದೇಶ್ ಸಿಂಗ್ ಬಿನ್ ಲೇಟ್ ಶ್ಯಾಮ್ ಸಿಂಗ್	219	16	00.00.04	0.00.00	00.00.04
2	ಆರ್. ಕೆ. ವೆಂಕಟರಮಣ ಬಿನ್ ಆರ್. ಕೃಷ್ಣಪ್ಪ ಅಲಿಯಾಸ್ ಕೃಷ್ಣಯ್ಯ ಆರ್. ಶ್ರೀನಿವಾಸುಲು ಬಿನ್ ಆರ್. ಕೃಷ್ಣಪ್ಪ ಅಲಿಯಾಸ್ ಕೃಷ್ಣಯ್ಯ	226	3	0.00.04	0.00.00	0.00.04
3	ಆರ್. ಕೃಷ್ಣಪ್ಪ ಉರುಫ್.ಕೃಷ್ಣಯ್ಯ ಬಿನ್ ಲೇಟ್ ವೆಂಕಟೇಶ್ ಆರ್.ಕೆ. ವೆಂಕಟರಮಣ ಬಿನ್ ಆರ್. ಕೃಷ್ಣಪ್ಪ ಉರುಫ್. ಕೃಷ್ಣಯ್ಯ	226	4	0.00.08	0.00.00	0.00.08
	ಗ್ರಾಮ: ಮಂಚಪ್ಪನಹೊಸಹಳ್ಳಿ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಸಿ.ದೇವರಾಜು ಬಿನ್ ಲೇಟ್ ಚನ್ನೇಗೌಡ	42	4	0.00.02	0.00.00	0.00.02
2	ಸಿ ದೇವರಾಜು ಬಿನ್ ಲೇಟ್ ಚನ್ನೇಗೌಡ	42	5	0.00.04	0.00.00	0.00.04
3	ಎ.ಕೃಷ್ಣಮೂರ್ತಿ ಬಿನ್ ಅನಂತಪ್ಪ	41	1	0.01.00	0.00.00	0.01.00
4	ಎ.ಸಿ.ನಾರಾಯಣಸ್ವಾಮಿ ಬಿನ್ ಲೇಟ್ ಚಿಕ್ಕಮುನಿಯಪ್ಪ ಪದ್ಮಮ್ಮ ಕೋಂ ಎ.ಸಿ.ನಾರಾಯಣಸ್ವಾಮಿ	41	2	0.00.08	0.00.00	0.00.08
5	ಕೆ.ರಮೇಶ್ ಬಿನ್ ಎಸ್.ಕರಿಸಿದ್ದೇಗೌಡ	41	3	0.00.04	0.00.00	0.00.04
	ಗ್ರಾಮ: ಉಣಚೂರು	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ)ಕೆಂಪಣ್ಣ ಬಿನ್ ಮುನಿನಂಜಪ್ಪ ಬಿ)ಕೆಂಪಣ್ಣ ಬಿನ್ ಮುನಿಯಪ್ಪ	90	1	0.05.00	0.00.00	0.05.00
2	ಡಿ.ಎಂ.ಆಂಜನಪ್ಪ ಬಿನ್ ಮುನಿವೆಂಕಟಪ್ಪ– ಭೂ.ಪ	4	1	0.00.08	0.00.00	0.00.08
3	ಸತ್ಯಪ್ರೇಮನಾಗರಾಜನ್	3	2	0.00.04	0.00.00	0.00.04
	ಗ್ರಾಮ: ಮೈಲನಹಳ್ಳಿ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ)ಮುನಿಶಾಮಪ್ಪ ಬಿನ್ ಸೊಣ್ಣಪ್ಪ ಬಿ)ಮುನಿಶಾಮಪ್ಪ ಬಿನ್ ಸೊಣ್ಣಪ್ಪ	81	1	0.00.06	0.00.00	0.00.06
2	ಎ)ಮಾರಪ್ಪ ಬಿನ್ ಲೇಟ್ ಶನಿವಾರಪ್ಪ ಬಿ)ಚಿಕ್ಕಮುದ್ದಯ್ಯ ಬಿನ್ ಸೀತಪ್ಪ ಸಿ)ಮುನಿಗ ಡಿ)ಮುನಿವೆಂಕಟ	24		0.01.08	0.00.00	0.01.08

ಬೆಂಗಳೂರು ಸುತ್ತಮುತ್ತಲಿನ ರಸ್ತೆ ಸಂಖ್ಯೆ–2

1	2	3	4	5	6	7
	ಗ್ರಾಮ: ಬಸವನಹಳ್ಳಿ	ತಾಲ್ಲೂಕು: ನೆಲಮಂಗಲ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಎ)ಲಲಿತಮ್ಮ ಬಿ)ಮಕಬೂಲ್ ಸಿ)ರಾಮಕ್ರಷ್ಣಯ್ಯ	46	–	0.00.04	0.00.00	0.00.04
2	ಗಂಗಯ್ಯ ಬಿನ್ ಲೇ ಗಂಗರಂಗಯ್ಯ	10	1	0.00.04	0.00.00	0.00.04
	ಗ್ರಾಮ: ಮೈಲನಹಳ್ಳಿ	ತಾಲ್ಲೂಕು: ನೆಲಮಂಗಲ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಉಮಾದೇವಿ ಕೋಂ ರಂಗಧಾಮಯ್ಯ. ಎಂ. ಜಿ.	85	2ಸಿ	0.00.04	0.00.00	0.00.04
	ಗ್ರಾಮ: ಹ್ಯಾಡಾಳು	ತಾಲ್ಲೂಕು: ನೆಲಮಂಗಲ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಎ)ಶಿವರಾಮು ಬಿನ್ ಶಾರದಮ್ಮ ಬಿ)ರಾಮಕೃಷ್ಣಯ್ಯ ಬಿನ್ ಶಾರದಮ್ಮ ಸಿ)ರಾಜಣ್ಣ ಬಿನ್ ಶಾರದಮ್ಮ ಡಿ)ಜಯರಾಮು ಬಿನ್ ಶಾರದಮ್ಮ ಇ)ಸುರೇಶ್ ಬಿನ್ ಶಾರದಮ್ಮ	45	4	0.00.04	0.00.00	0.00.04
	ಗ್ರಾಮ: ಶೀರೇಸಂದ್ರ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ) ಶ್ಯಾಮಣ್ಣ ಬಿನ್ ಮುನಿಶಾಮಪ್ಪ ಬಿ) ಶ್ರೀನಿವಾಸ ಚಾರ್	33	1	0.05.00	0.00.00	0.05.00
	ಗ್ರಾಮ: ಕಾಮಾಕ್ಷಿಪುರ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ) ನಾಗಪ್ಪ ಬಿನ್ ಗಂಗಹುಚ್ಚಯ್ಯ ಬಿ) ಮಾಳಪ್ಪ ಬಿನ್ ಗಂಗಹುಚ್ಚಯ್ಯ ಸಿ) ಮುನಿಆಂಜನಪ್ಪ ಬಿನ್ ಗಂಗಹುಚ್ಚಯ್ಯ ಡಿ) ಮುನಿಕೃಷ್ಣಯ್ಯ ಬಿನ್ ಗಂಗಹುಚ್ಚಯ್ಯ	15	–	0.00.12	0.00.00	0.00.12
2	ಎ) ನಾಗಪ್ಪ ಬಿನ್ ಗಂಗಹುಚ್ಚಪ್ಪ ಬಿ) ಮಾಳಪ್ಪ ಬಿನ್ ಗಂಗಹುಚ್ಚಪ್ಪ ಸಿ) ಮುನಿಆಂಜನಪ್ಪ ಬಿನ್ ಗಂಗಹುಚ್ಚಯ್ಯ ಡಿ) ಮುನಿಕೃಷ್ಣಪ್ಪ ಬಿನ್ ಗಂಗಹುಚ್ಚಯ್ಯ	11	3	0.00.06	0.00.00	0.00.06
	ಗ್ರಾಮ: ಕಾಕೋಳು	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ನರಸಿಂಹಮೂರ್ತಿ ಬಿನ್ ಚಿಕ್ಕೇಗೌಡ	53	1	0.00.03	0.00.00	0.00.03
2	ನರಸಿಂಹಮೂರ್ತಿ ಬಿನ್ ಚಿಕ್ಕೇಗೌಡ	61	1	0.00.04	0.00.00	0.00.04
3	ವಂದನಗುಪ್ತ ಕೋಂ ಮುಖೇಶ್ ಗುಪ್ತ	61	3	0.00.04	0.00.00	0.00.04
4	ಜಯಮ್ಮ ಕೋಂ ಲೇಟ್ ಉಜ್ಜಿನಿ ಅಲಿಯಾಸ್ ಉಜ್ಜಿನಿಯಪ್ಪ	81	5	0.00.04	0.00.00	0.00.04
	ಗ್ರಾಮ: ಶ್ಯಾನುಬೋಗನಹಳ್ಳಿ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಗಾಳಪ್ಪ ಬಿನ್ ಲೇಟ್. ತಿಮ್ಮರಾಯಪ್ಪ	92	–	0.00.04	0.00.00	0.00.04
2	ಮುನಿಶಂಕರ್ ಕೆ ಬಿನ್ ಲೇಟ್ ಕೇಶವಮೂರ್ತಿ ಕೃಷ್ಣಮೂರ್ತಿ ಕೆ ಬಿನ್ ಲೇಟ್ ಕೇಶವಮೂರ್ತಿ	93	1	0.00.08	0.00.00	0.00.08
	ಗ್ರಾಮ: ದಿಬ್ಬೂರು	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಗಾಳಪ್ಪ ಬಿನ್ ತಿಮ್ಮರಾಯಪ್ಪ	14	2	0.01.10	0.00.00	0.01.10
	ಗ್ರಾಮ: ಚೊಕ್ಕನಹಳ್ಳಿ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಮುನಿಎಲ್ಲಪ್ಪ	24	4	0.00.04	0.00.00	0.00.04
	ಗ್ರಾಮ: ಅದ್ದಿಗಾನಹಳ್ಳಿ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ) ಲಿಂಗಪ್ಪ ಬಿನ್ ದೊಡ್ಡಣ್ಣ ಬಿ) ಶಾಂತಪ್ಪಗೌಡ ಬಿನ್ ಬಿರುಮಾನ್ಗೌಡ ಸಿ)ಗೌರಮ್ಮ ಗಂಡ ಮುನಿಯಪ್ಪ ಡಿ) ರಂಗಪ್ಪ ಬಿನ್ ಲೇಟ್ ಅಪ್ಪಯ್ಯಣ್ಣ ಇ) ಹನುಮಂತರಾಯಪ್ಪ ಬಿನ್ ಡಿ.ಚನ್ನಪ್ಪ ಎಫ್) ಹೆಚ್.ಪಿ.ಪುಟ್ಟರಾಜು ಬಿನ್ ಹೆಚ್.ಎಂ.ಪುಟ್ಟಶಾಮಯ್ಯ ಜಿ) ಪುಷ್ಪಲತಾ ಬಿನ್ ತಿಮ್ಮಯ್ಯ ಹೆಚ್) ನಂಜಪ್ಪ ಬಿನ್ ಚನ್ನಪ್ಪ ಐ) ರತ್ನಮ್ಮ ಕೋಂ ನಂಜಪ್ಪ ಜೆ) ಡಿ.ವೆಂಕಟೇಶಯ್ಯ ಬಿನ್ ಲೇಟ್ ಅಪ್ಪಯ್ಯಣ್ಣ ಕೆ) ಡಿ.ಎಂ.ರಾಮಯ್ಯ ಬಿನ್ ಲೇಟ್ ಮುನಿಯಪ್ಪ	28	–	0.02.06	0.00.00	0.02.06
2	ಎ) ಚಿಕ್ಕಪಟಾಲಯ್ಯ ಬಿನ್ ಹನುಮಂತರಾಯಪ್ಪ ಬಿ) ಗೋವಿಂದಪ್ಪ ಬಿನ್ .ಹನುಮಂತರಾಯಪ್ಪ ಸಿ)ಸಿ.ನಾಗರಾಜು ಬಿನ್ ಚಿಕ್ಕಅಪ್ಪಯ್ಯ ಡಿ)ಆಂಜನಪ್ಪ ಬಿನ್ ರಾಮಯ್ಯ ಇ)ಅನಿತಾ ಬಿನ್ ಪಟಾಲಪ್ಪ ಎಫ್) ಎಸ್.ಆಂಜಿನಪ್ಪ ಬಿನ್ ಲೇ. ಸಿದ್ದಪ್ಪ ಜಿ) ಬಿ.ರವಿ ಕುಮಾರ್ ಹೆಚ್) ಯಶೋಧಮ್ಮ ಕೋಂ ಬಸವರಾಜು ಐ) ಎಸ್. ಶಾಂತರಾಜು ಬಿನ್ ಸಿಂಗಾರಪ್ಪ ಕೆ) ಪುಷ್ಪ ಕೋಂ ಸಿ. ಕುಮಾರ್ ಎಲ್) ಅಕ್ಕಯ್ಯಮ್ಮ ಕೋಂ ನಾರಾಯಣಪ್ಪ ಎಮ್) ಕೆ.ಅರ್. ಗುರುಪ್ರಸಾದ್ ಒ) ರಾಮಕೃಷ್ಣಯ್ಯ ಬಿನ್ ನರಸಿಂಹಯ್ಯ ಪಿ) ಶ್ರೀಮತಿ. ಇಂದ್ರಮ್ಮ ಕೋಂ ಶ್ರೀ. ಕೆ. ಆರ್. ಹನುಮಂತೇಗೌಡ ಆರ್) ಶ್ರೀ. ಸುರಜೀತ್ ಸಿಂಗ್ ಬಿನ್ ಶ್ರೀ. ತೇಜ್ ಸಿಂಗ್ ಎಸ್) ಹನುಮೇಗೌಡ ಬಿನ್ ಚನ್ನತಿಮ್ಮೇಗೌಡ ಟಿ) ಶಿವಣ್ಣ ಬಿನ್ ವೀರೇರೌಡ ಯು) ಕೆ. ವೆಂಕಟೇಶಯ್ಯ ಬಿನ್ ಕರೀಚಿನ್ನೇಗೌಡ ವಿ) ಶಿವಪ್ಪ ಬಿನ್ ಈರಪ್ಪ	37	1	0.01.08	0.00.00	0.01.08
3	ಎ) ಕೆಂಪಣ್ಣ ಬಿನ್ ಲೇಟ್ ಸುಬ್ಬರಾಯಪ್ಪ ಬಿ) ಮುನೇಗೌಡ ಬಿನ್ ಲೇಟ್ ಸುಬ್ಬರಾಯಪ್ಪ ಸಿ) ಮುನೇಗೌಡ ಬಿನ್ ಲೇಟ್ ಸೊಣ್ಣಪ್ಪ ಡಿ) ಚಂದ್ರಕಲಾ ಕೋಂ ರವಿ ಇ) ಹನುಮಂತರಾಯ ಉರುಫ್ ಹನುಮಂತಪ್ಪ ಬಿನ್ ಸೊಣ್ಣಪ್ಪ ಎಫ್) ಚೆನ್ನಮ್ಮ ಕೋಂ ಲೇಟ್ ನಂಜುಂಡಪ್ಪ ಜಿ) ಬುಡ್ಡಮ್ಮ ಕೋಂ ಲೇಟ್ ಹನುಮಂತರಾಯಪ್ಪ	37	3ಎ	0.01.00	0.00.00	0.01.00
4	ಎ) ಅಶೋಕನ್ ಕೆ.ಅಲಿಯಾಸ್ ಅಶೋಕ್ ಕೆ. ಬಿನ್ ಕಣ್ಣನ್ ಬಿ) ಎಲ್.ಕೃಷ್ಣಪ್ಪ ಬಿನ್ ಲೇ.ಲಕ್ಕಯ್ಯ ಸಿ) ಎಲ್.ಪಟಾಲಪ್ಪ ಬಿನ್ ಲೇ.ಲಕ್ಕಯ್ಯ	104	1	L–0.00.04 R–0.00.03	0.00.00 0.00.00	0.00.04 0.00.03
5	ಆರ್.ಎಸ್.ಮನೋಹರ್ ಬಿನ್ ಶಿವಲಿಂಗಪ್ಪ	92	2	0.00.13	0.00.00	0.00.13
	ಗ್ರಾಮ: ತಿಮ್ಮಸಂದ್ರ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ) ಬಿ. ಎನ್. ಮಂಜುನಾಥ ಬಿನ್ ಲೇಟ್ ನಂಜೇಮರಿಯಪ್ಪ ಬಿ) ಮಂಜುಳ ಕೋಂ ಲೇಟ್ ಕೆ.ಎಂ. ನಾಗರಾಜು	78	1	L–0.00.12 R–0.00.06	0.00.00 0.00.00	0.00.12 0.00.06
2	ಅಶ್ವತ್ಥ ಬಿನ್ ಮುನಿಯಪ್ಪ ಉ ಪಾಪಯ್ಯ	78	3	0.01.08	0.00.00	0.01.08
3	ಎ) ರಾಧಮ್ಮ ಕೋಂ ಮರಿಯಪ್ಪ ಬಿ) ಸಾಕಮ್ಮ ಕೋಂ. ಕ್ಯಾತಪ್ಪ	79	2	0.00.08	0.00.00	0.00.08
	ಗ್ರಾಮ: ನೆಲ್ಲುಕುಂಟೆ	ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು		
1	ಎ)ನಾರಾಯಣಮ್ಮ ಬಿ)ಗುಣಭೂಷಣ್ ಬಿನ್ ಲೇಟ್. ಅಣ್ಣಯ್ಯಪ್ಪ	43	–	0.00.02	0.00.00	0.00.02

ಬೆಂಗಳೂರು ಸುತ್ತಮುತ್ತಲಿನ ರಸ್ತೆ ಸಂಖ್ಯೆ–3

1	2	3	4	5	6	7
	ಗ್ರಾಮ: ಹಾರೋಹಳ್ಳಿ	ತಾಲ್ಲೂಕು: ಹಾರೋಹಳ್ಳಿ		ಜಿಲ್ಲೆ: ರಾಮನಗರ		
1	ಮಹಮದ್ ಅನ್ವರ್ ಬಿನ್ ಲೇ..ಅಬ್ದುಲ್ ಗಫೂರ್ ಸಾಬ್ ಮಹಮದ್ ಅಲಿ ಬಿನ್ ಲೇ..ಅಬ್ದುಲ್ ಗಫೂರ್ ಸಾಬ್	79		0.00.04	–	0.00.04
	ಗ್ರಾಮ: ಅತ್ತಿಕುಪ್ಪೆ	ತಾಲ್ಲೂಕು: ಹಾರೋಹಳ್ಳಿ		ಜಿಲ್ಲೆ: ರಾಮನಗರ		
1	ಚೇತನ್ ವೇಣುಗೋಪಾಲ್ ಬಿನ್ ಪಿ. ವೇಣುಗೋಪಾಲ್ ಬಿ.ಜಿ.ರಾಧಾ ಕೋಂ ಚೇತನ್ ವೇಣುಗೋಪಾಲ್	98	5	0.00.08	–	0.00.08
2	ಶಾಂತಮ್ಮ ಕೆ.ಎನ್ ಕೋಂ ಸುಬ್ರಮಣ್ಯ .ಎನ್	26	5	0.01.12	–	0.01.12
3	ಹುಚ್ಚೀರ ಬಿನ್ ಕರೀಗೌಡ	25	2	0.00.04	–	0.00.04
4	ಟಿ.ಎಸ್.ಕೋಟೇಶ್ವರ ಬಿನ್ ಟಿ.ಎಸ್.ಸಿದ್ದರಾಜಶೆಟ್ಟಿ	20	6	0.00.12	–	0.00.12
5	ವಿ.ರಾಜು ಬಿನ್ ವೆಂಕಟರಸಪ್ಪ.ಎಂ.	20	2	0.00.04	–	0.00.04
6	ವಿ.ರಾಜು ಬಿನ್ ವೆಂಕಟರಸಪ್ಪ.ಎಂ.	20	5	0.00.04	–	0.00.04
7	ವಿ.ರಾಜು ಬಿನ್ ವೆಂಕಟರಸಪ್ಪ.ಎಂ.	20	3	0.00.04	–	0.00.04
8	ಎಮ್.ನಂಜಪ್ಪ–ಬಿನ್ ಮುದ್ದೇಗೌಡ	16	3	0.00.04	–	0.00.04
9	ತಿಪ್ಪೇಗೌಡ – ಬಿನ್ ನಂಜೇಗೌಡ ಟಿ.ನಂಜೇಗೌಡ ಕೆಂಚೇಗೌಡ ಬಿನ್ ಓದೋನಂಜೇಗೌಡ ಸರ್ಕಾರಿ ಪಥಾ	102	–	0.00.04	–	0.00.04

ಮುಂದುವರೆದಿದೆ....

‘ಅರಣ್ಯ ಒತ್ತುವರಿ ತೆರವಿಗೆ ಆದ್ಯತೆ’

‘ತಿಮ್ಮಕ್ಕ ನ್ಯಾಷನಲ್ ಗ್ರೀನರಿ’ ಪ್ರಶಸ್ತಿ ಪ್ರದಾನ • ಸಚಿವ ಈಶ್ವರ್ ಖಂಡ್ರೆ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅರಣ್ಯ ಜಮೀನು ಒತ್ತುವರಿ ಕಾರಣದಿಂದ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ಹಾಗಾಗಿ ಒತ್ತುವರಿ ತೆರವಿಗೆ ಆದ್ಯತೆ ನೀಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ, ಸಿದ್ಧಾರ್ಥ ಎಜುಕೇಷನ್ ಸೊಸೈಟಿ, ಸಾಲು ಮರದ ತಿಮ್ಮಕ್ಕ ಇಂಟರ್ ನ್ಯಾಷನಲ್ ಫೌಂಡೇಷನ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸಾಲು ಮರದ ತಿಮ್ಮಕ್ಕ ಅಭಿನಂದನಾ ಸಮಿತಿ ಗುರುವಾರ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒತ್ತುವರಿ ಪರಿಣಾಮ ಅರಣ್ಯ ಪ್ರದೇಶ ಕ್ಷೀಣಿಸುತ್ತಿದೆ. ಇದನ್ನು ತಪ್ಪಿಸಲು ವೃಕ್ಷಗಳ ಸಂಖ್ಯೆ ಹೆಚ್ಚಬೇಕು ಎಂದರು.

ತಿಮ್ಮಕ್ಕ ಅವರು ಮಾಗಡಿ ತಾಲ್ಲೂಕು ಹುಲಿಕಲ್‌ನಿಂದ ಕುದೂರು ನಡುವೆ ರಾಜ್ಯ ಹೆದ್ದಾರಿ 94ರಲ್ಲಿ 8 ಸಾವಿರ ಸಸಿಗಳನ್ನು ನೆಟ್ಟು, ಬೆಳೆಸಿ ಮಾದರಿ ಆಗಿದ್ದಾರೆ ಎಂದು ಶ್ಲಾಘಿಸಿದರು.



ಬೆಂಗಳೂರಿನಲ್ಲಿ ಗುರುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾಲು ಮರದ ತಿಮ್ಮಕ್ಕ ಅವರನ್ನು ಪಲ್ಲಕ್ಕಿಯಲ್ಲಿ ವೇದಿಕೆಗೆ ಕರೆತರಲಾಯಿತು. ಪ್ರಜಾವಾಣಿ ಚಿತ್ರ

ಪರಿಸರ ರಾಯಭಾರಿ ತಿಮ್ಮಕ್ಕ ಅವರ ಸಾಕು ಪುತ್ರ ಬಳ್ಳೂರು ಉಮೇಶ್ ಅವರನ್ನು ಯುವ ಪರಿಸರ ರಾಯಭಾರಿಯಾಗಿ ಮಾಡುವ ಬಗ್ಗೆ ಸಂಬಂಧಪಟ್ಟವರ ಜತೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಗೃಹ ಸಚಿವ ಜಿ.ಪರಮೇಶ್ವರ, ‘ಪ್ರಸ್ತುತ ದಿನಗಳಲ್ಲಿ ಮಳೆ ಬರಬೇಕಾದ ಸಂದರ್ಭಕ್ಕೆ ಬರುತ್ತಿಲ್ಲ. ಒಂದು ಭಾಗದಲ್ಲಿ ಮಳೆಯಾದರೆ, ಮತ್ತೊಂದು ಭಾಗದಲ್ಲಿ ಮಳೆಯಾಗುತ್ತಿಲ್ಲ. ಭೂಮಿಯ ಹಸಿರು ಪದರು ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ಇದರಿಂದ ಭೂಮಿಯ ಉಷ್ಣಾಂಶ ಹೆಚ್ಚಾಗುತ್ತಿದೆ. ಕೋಟ್ಯಂತರ ಕೀಟಗಳು ನಾಶವಾಗುತ್ತಿವೆ. ಕೀಟಗಳು ನಾಶವಾದರೆ ಮನುಕುಲಕ್ಕೆ ಅಪಾಯ ಎದುರಾಗಲಿದೆ ಎಂದು ಎಚ್ಚರಿಸಿದರು.

ವಿವಿಧ ಕ್ಷೇತ್ರಗಳ ಸಾಧಕರಿಗೆ ‘ಸಾಲು ಮರದ ನ್ಯಾಷನಲ್ ಗ್ರೀನರಿ ಅವಾರ್ಡ್–2021–22’ ಹಾಗೂ ಕಿರಿಯರಿಗೆ ‘ಸಾಲು ಮರದ ತಿಮ್ಮಕ್ಕ ನ್ಯಾಷನಲ್ ಗ್ರೀನರಿ ಬಾಲ ಪುರಸ್ಕಾರ್–2024’ ನೀಡಿ ಗೌರವಿಸಲಾಯಿತು. ‘ಇತಿಹಾಸ ಸೃಷ್ಟಿಸಿದ ಸಾಲುಮರದ ತಿಮ್ಮಕ್ಕ’ ಧ್ವನಿಸುರಳಿ ಬಿಡುಗಡೆ ಮಾಡಲಾಯಿತು.

ಚಿತ್ರದುರ್ಗದ ಭೋವಿ ಮಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಕೆ.ರಾಕೇಶ್ ಕುಮಾರ್, ವೈದ್ಯ ರಮಣರಾವ್, ಅಪೋಲೋ ಆಸ್ಪತ್ರೆ ಮುಖ್ಯಸ್ಥ ಡಾ. ಗೋವಿಂದಯ್ಯ ಯತೀಶ್, ಶ್ವಾಸಕೋಶ ತಜ್ಞೆ ಡಾ. ರಜನಿ ಸುರೇಂದರ್ ಭಟ್ ಭಾಗವಹಿಸಿದ್ದರು.

ಮುಖ್ಯಾಂಶಗಳು

- ಸಾಲುಮರದ ತಿಮ್ಮಕ್ಕ ಸಾಧನೆಗೆ ಶ್ಲಾಘನೆ
- ಅರಣ್ಯ ರಕ್ಷಣೆ ಜೊತೆಗೆ ಬೆಳೆಸುವುದೂ ಮುಖ್ಯ
- ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ

ಜೆಸಿಸಿ ಆಧಾರದಲ್ಲಿ 148 ಇವಿ ಬಸ್ಸುಗಳು

ಬೆಂಗಳೂರು: ಬಿಎಂಟಿಸಿಗೆ ಹವಾ ನಿಯಂತ್ರಣರಹಿತ 148 ವಿದ್ಯುತ್ ಚಾಲಿತ ಬಸ್ಸುಗಳನ್ನು ಜೆಸಿಸಿ ಆಧಾರದಲ್ಲಿ ಕಾರ್ಯಾಚರಣೆ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ, ಸುದ್ದಿಗಾರರಿಗೆ ಈ ಕುರಿತು ವಿವರ ನೀಡಿದರು.

15ನೇ ಹಣಕಾಸು ಆಯೋಗದ ಅನುದಾನದಲ್ಲಿ ₹55 ಕೋಟಿ ವೆಚ್ಚದಲ್ಲಿ 127 ಬಸ್ಸುಗಳು, ನಗರ ಭೂಸಾರಿಗೆ ನಿರ್ದೇಶನಾಲಯದ ರಾಜ್ಯ ನಗರ ಸಾರಿಗೆ ನಿಧಿ ಅಡಿ ಮಂಜೂರಾದ ₹29.13 ಕೋಟಿ ಅನುದಾನದಲ್ಲಿ 21 ಬಸ್ಸುಗಳ ಕಾರ್ಯಾಚರಣೆಗೆ ತೀರ್ಮಾನಿಸಲಾಗಿದೆ ಎಂದರು. ಪ್ರತಿ ಬಸ್ಸಿಗೆ ₹39.08 ಲಕ್ಷ ಸಹಾಯಧನ ನೀಡಿ ಪ್ರತಿ ಕಿ.ಮೀ.ಗೆ ₹41.01 ದರದಲ್ಲಿ ಜೆಸಿಸಿ ಆಧಾರದ ಮೇಲೆ ಬಸ್ಸುಗಳನ್ನು ಓಡಿಸಲು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

ಸಿ.ಎಂ ರಾಜೀನಾಮೆಗೆ ಆಗ್ರಹ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಶಾಸಕರು ವಿಧಾನಸೌಧದ ಗಾಂಧಿ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿದರು.

ಉಭಯ ಸದನಗಳ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಉಪ ನಾಯಕ ಅರವಿಂದ ಬೆಲ್ಲದ, ಸಂಸದ ಗೋವಿಂದ ಕಾರಜೋಳ, ಶಾಸಕರು, ವಿಧಾನಪರಿಷತ್ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆರ್.ಅಶೋಕ ಅವರು, ವಿಧಾನಸಭೆ ವಿಸರ್ಜಿಸಿ ನಿಮ್ಮ ಹಿಂದೆ ರಾಜ್ಯದ ಜನರು ಇದ್ದಾರೆ ಎಂದು ತೋರಿಸಿಕೊಟ್ಟರೆ ಬಿಜೆಪಿ ನಿಮ್ಮ ವಿರುದ್ಧ ಪ್ರತಿಭಟನೆಯನ್ನೇ ಮಾಡುವುದಿಲ್ಲ ಎಂದರು.



ಬಿಜೆಪಿ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಪ್ರತಿಭಟನೆಯಲ್ಲಿದ್ದರು

ಸಿದ್ದರಾಮಯ್ಯ ಅಧಿಕಾರದಲ್ಲಿ ಇದ್ದರೆ ನಿಷ್ಪಕ್ಷಪಾತ ತನಿಖೆ ಆಗಲು ಸಾಧ್ಯವಿಲ್ಲ. ಈಗ ರಾಜೀನಾಮೆ ಬಿಟ್ಟು ಬೇರೇನೂ ಸಾಧ್ಯವಿಲ್ಲ.’ ಎಂದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ‘ಹೈಕೋರ್ಟ್ ಆದೇಶ ಬಂದ ಕೂಡಲೇ ಸಿ.ಎಂ ರಾಜೀನಾಮೆ ನೀಡಬೇಕಿತ್ತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ರಾಜೀನಾಮೆ ಪಡೆಯಬೇಕಿತ್ತು. ಕಾಂಗ್ರೆಸ್ ಹೈಕಮಾಂಡ್ ದುರ್ಬಲ ಎಂಬುದು ಇದರಿಂದ ಸಾಬೀತಾಗಿದೆ’ ಎಂದು ಅಭಿಪ್ರಾಯಪಟ್ಟರು.

ಸಂಘಕ್ಕೆ ಅ.14ರಂದು ಚುನಾವಣೆ

ಬೆಂಗಳೂರು: ಕರ್ನಾಟಕ ಕಾರ್ಮಿಕ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಗೆ ಅ. 14ರಂದು ಚುನಾವಣೆ ನಡೆಯಲಿದೆ.

ಬನ್ನೇರುಘಟ್ಟ ರಸ್ತೆಯ ಕಾರ್ಮಿಕ ಭವನದ ಆವರಣದಲ್ಲಿ ಮತದಾನ ನಡೆಯಲಿದೆ. ಅ.4ರಿಂದ ನಾಮಪತ್ರ ಸಲ್ಲಿಸಬಹುದು. 7ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. 8ರಂದು ಹಿಂಪಡೆಯಲು ಕಡೇ ದಿನ. ಮತದಾನಕ್ಕೆ ಗುರುತಿನ ಚೀಟಿ ಕಡ್ಡಾಯವಾಗಿದ್ದು, ಕಚೇರಿ ಸಮಯದಲ್ಲಿ ಪಡೆಯಬಹುದು ಎಂದು ಚುನಾವಣಾಧಿಕಾರಿ ಆಂಜನಮೂರ್ತಿ ಅವರು ತಿಳಿಸಿದ್ದಾರೆ.

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ||, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./ಭೂ.ಉ.ಬ./19/2024–25/1583 ದಿನಾಂಕ : 25–09–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ, ಈ ಕೆಳಕಂಡ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಸರ್ಕಾರದಿಂದ ಅನುಮೋದನೆ ಯಾಗಿರುವ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ. ಆದಿಕೇಶವುಲು ನಾಯ್ಡು, ಶ್ರೀ. ಪಿ. ಲಾಜರ್, ಶ್ರೀ. ಕೃಷ್ಣಪ್ಪ, ಶ್ರೀ. ಬಿ. ಮಾಂಗಿಲಾಲ್	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ತಟ್ಟಗುಪ್ಪೆ	8/4	0–23	ವ್ಯವಸಾಯ	ವಸತಿ
02					8/5	0–38		
03					9/1	0–13		
04					9/3	1–30		
05					10/1	3–05.08		
06					10/2	0–12.08		
07					19/2	2–09		
					ಒಟ್ಟು	9–11		
08	ಶ್ರೀ. ಆದಿಕೇಶವುಲು ನಾಯ್ಡು, ಶ್ರೀ. ಪಿ.ಲಾಜರ್, ಶ್ರೀ. ಕೃಷ್ಣಪ್ಪ, ಶ್ರೀ. ಬಿ. ಮಾಂಗಿಲಾಲ್	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ತಟ್ಟಗುಪ್ಪೆ	10/1	0–21.08	ವ್ಯವಸಾಯ	ವಾಣಿಜ್ಯ
09					12/1	0–07		
10					12/3	0–03		
11					12/7	0–04		
12					12/8	0–07		
13					12/9	0–09.08		
14					12/10	0–10		
15					12/11	0–10		
16					12/12	0–09.08		
					ಒಟ್ಟು	2–01.08		

ಷರಾ : ಪ್ರಸ್ತಾವನೆಯಲ್ಲಿನ ಅರ್ಜಿದಾರರು **ಕ್ರ.ಸಂ. 01 ರಿಂದ 07ರ ವರೆಗಿನ** ಜಮೀನುಗಳಲ್ಲಿ ಬಡಾವಣೆ / ಅಪಾರ್ಟ್‌ಮೆಂಟ್/ ಇತರೆ ವಾಸದ ಯೋಜನೆಗಳಿಗೆ ಅಭಿವೃದ್ಧಿಪಡಿಸುವುದರಿಂದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ / ಅಪಾರ್ಟ್‌ಮೆಂಟ್ ದೊರೆಯುವುದಾಗಿ ಹಾಗೂ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುವುದಾಗಿ, ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುವುದಾಗಿ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ **“ವ್ಯವಸಾಯ” ವಲಯದಿಂದ “ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳುವುದಾಗಿ ಹಾಗೂ **ಕ್ರ.ಸಂ. 08 ರಿಂದ 16ರ ವರೆಗಿನ** ಜಮೀನುಗಳಲ್ಲಿ ವಾಣಿಜ್ಯ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರಿಗೆ ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ಬಾಡಿಗೆಗೆ ದೊರಕುವುದಲ್ಲದೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುವುದಾಗಿ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಹಾಗೂ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ **“ವ್ಯವಸಾಯ” ವಲಯದಿಂದ “ವಾಣಿಜ್ಯ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/359/ಮಣಿಪಾಲ್/2024–25

1	2	3	4	5	6	7
	ಗ್ರಾಮ: ಗೋದೂರು	**ತಾಲ್ಲೂಕು: ಹಾರೋಹಳ್ಳಿ**			**ಜಿಲ್ಲೆ: ರಾಮನಗರ**	
1	ನಳಿನಿಬಾಲಿ ಕೋಂ ಬಾಲಾಜಿ	227	–	0.00.08	–	0.00.08
2	ಬಸವೇಗೌಡ ಬಿನ್ ಮಾರೇಗೌಡ ಉ.ಬಡರೇಗೌಡ ನಳಿನಿಬಾಲಿ ಕೋಂ ಬಾಲಾಜಿ	131	1	0.00.04	–	0.00.04
3	ಜಿ.ಸಿ ಚೂಡಯ್ಯ ಜಿ.ಸಿ. ಭದ್ರಗಿರೀಗೌಡ ಚೂಡಯ್ಯ ಜಿ.ಸಿ ಚನ್ನಬಸವೇಗೌಡ ಪಾರ್ವತಮ್ಮ ಬಿನ್ ಲೇ.ಭದ್ರೇಗೌಡ ಬಸಮ್ಮ ಬಿನ್ ಲೇ.ಭದ್ರೇಗೌಡ ಜಿ.ಬಿ.ಚೂಡಯ್ಯ ಬಿನ್ ಲೇ.ಭದ್ರೇಗೌಡ ಪಾರ್ವತಮ್ಮ ಕೋಂ ಲೇ ಚೂಡಪ್ಪ ವರಮಹಾಲಕ್ಷ್ಮಮ್ಮ ಕೋಂ ಲೇ ಚೂಡಪ್ಪ	115	Block (I)	0.00.08	–	0.00.08
		115	Block (II)	0.00.08	–	0.00.08
4	ಮಾರಕ್ಕ ಉ.. ವರದಮ್ಮ ಕೋಂ ಲೇ. ಎಂ. ಮಾದೇಗೌಡ	116	2“Block (I)	0.02.00	–	0.02.00
		116	2“Block (II)	0.00.04	–	0.00.04
	ಗ್ರಾಮ: ಬಿಳಿಗನಕುಪ್ಪೆ	**ತಾಲ್ಲೂಕು: ಹಾರೋಹಳ್ಳಿ**			**ಜಿಲ್ಲೆ: ರಾಮನಗರ**	
1	ಮಾದೇಗೌಡ ಬಿನ್ ಲೇ.ಮಾದೇಗೌಡ ಚಿಕ್ಕತಾಯಮ್ಮ ಕೋಂ ಲೇ ಚನ್ನೇಗೌಡ	69	20	0.00.04	–	0.00.04
2	ಲಿಂಗೇಗೌಡ ಬಿನ್ ಲಿಂಗಯ್ಯ	69	29“Block (I)	0.00.12	–	0.00.12
	ಬೋರೇಗೌಡ ಬಿನ್ ಚನ್ನೇಗೌಡ	69	29“Block (II)	0.01.04	–	0.01.04
3	ಕೆ.ಶಿವರಾಜು ಬಿನ್ ಅಂಕೇಗೌಡ	69	24“Block (I)	0.01.00	–	0.01.00
		69	24“Block (II)	0.02.12	–	0.02.12
4	ಕರಿಯ ಚಲುವ	69	23	0.02.00	–	0.02.00
5	ಎಂ..ಪುಟ್ಟಮಾದಯ್ಯ ಬಿನ್ ಮಾದೇಗೌಡ ತಾಯಿಮಾರಕ್ಕ ಬಿನ್ ಲೇ ಸತ್ತೀಗೇಗೌಡ ಪಾರ್ವತಮ್ಮ ಬಿನ್ ಲೇ ಸತ್ತೀಗೇಗೌಡ ಸರೋಜಮ್ಮ ಬಿನ್ ಲೇ ಸತ್ತೀಗೇಗೌಡ	69	21“Block (I)	0.01.00	–	0.01.00
	ಕೆಂಪಮ್ಮ ಬಿನ್ ಲೇ ಸತ್ತೀಗೇಗೌಡ ಹೆಚ್ ಎಂ. ಮಾರೇಗೌಡ ಬಿನ್ ಲೇ ಮಾರೇಗೌಡ ಉ ಮಾರಪ್ಪ ಶಿವಮ್ಮ ಕೋಂ ಲೇ ಶಿವಣ್ಣ ಹೆಚ್.ಮಾರೇಗೌಡ ಬಿನ್ ಲೇ ಸತ್ತಿಗೆ ಉ ಕರೀಗೌಡ	69	21“Block(II)	0.00.12	–	0.00.12
6	ಎಂ.ಪುಟ್ಟಮಾದಯ್ಯ ಬಿನ್ ಮಾದೇಗೌಡ	69	40	0.00.04	–	0.00.04
7	ಬಸವಲಿಂಗಯ್ಯ ಬಿನ್ ಲೇಟ್ ಬಸಪ್ಪ ಬೋರಮ್ಮ ಕೋಂ ಲೇಟ್ ಬಸಪ್ಪ	69	25	0.00.04	–	0.00.04
8	ಬಸವಯ್ಯ	69	26	0.00.04	–	0.00.04
9	ತಾಯಿಮಾರಕ್ಕ ಬಿನ್ ಲೇ ಸತ್ತೀಗೇಗೌಡ ಪಾರ್ವತಮ್ಮ ಬಿನ್ ಲೇ ಸತ್ತೀಗೇಗೌಡ ಸರೋಜಮ್ಮ ಬಿನ್ ಲೇ ಸತ್ತೀಗೇಗೌಡ ಕೆಂಪಮ್ಮ ಬಿನ್ ಲೇ ಸತ್ತೀಗೇಗೌಡ ಹೆಚ್ ಎಂ. ಮಾರೇಗೌಡ ಬಿನ್ ಲೇ ಮಾರೇಗೌಡ ಉ ಮಾರಪ್ಪ ಶಿವಮ್ಮ ಕೋಂ ಲೇ ಶಿವಣ್ಣ ಹೆಚ್.ಮಾರೇಗೌಡ ಬಿನ್ ಲೇ ಸತ್ತಿಗೆ ಉ ಕರೀಗೌಡ	69	27	0.00.04	–	0.00.04
10	ಮರಿಯಣ್ಣ ಬಿನ್ ಮಾದೇಗೌಡ ಉ ಮಾದಯ್ಯ	69	22	0.00.12	–	0.00.12
11	ಎ.ವೆಂಕಟಸ್ವಾಮಪ್ಪ ಬಿನ್ ಲೇ ಅಜ್ಜಪ್ಪ	69	17	0.00.08	–	0.00.08
12	ತಾಯಿಮಾರಕ್ಕ ಬಿನ್ ಲೇಟ್ ಸತ್ತೀಗೆ ಉ..ಕರೀಗೌಡ ಪಾರ್ವತಮ್ಮ ಬಿನ್ ಲೇಟ್ ಸತ್ತೀಗೆ ಉ..ಕರೀಗೌಡ ಸರೋಜಮ್ಮ ಬಿನ್ ಲೇಟ್ ಸತ್ತೀಗೆ ಉ..ಕರೀಗೌಡ ಕೆಂಪಮ್ಮ ಬಿನ್ ಲೇಟ್ ಸತ್ತೀಗೆ ಉ..ಕರೀಗೌಡ	69	18	0.00.04	–	0.00.04
13	ಸುಧಾ ವೆಂಕಟೇಶ್ ಬಿನ್ ವೆಂಕಟೇಶ್	69	6	0.00.04	–	0.00.04
14	ಸುಧಾ ವೆಂಕಟೇಶ್ ಕೋಂ ವೈ ವೆಂಕಟೇಶ್	69	7	0.00.08	–	0.00.08
15	ವೆಂಕಟೇಶಚಾರಿ. ಬಿನ್ ಗೋವಿಂದಚಾರಿ	69	15A	0.00.04	–	0.00.04
16	ಲಕ್ಷ್ಮಮ್ಮ ಕೋಂ ಲೇ ಕೃಷ್ಣಚಾರಿ ಗೋವಿಂದಚಾರಿ ಬಿನ್ ಲೇ ವೆಂಕಟರಮಣಚಾರಿ ಚಿಕ್ಕಾಚಾರಿ ಬಿನ್ ಲೇ ವೆಂಕಟರಮಣಚಾರಿ	69	15B	0.00.04	–	0.00.04
17	ಮರಿಯಣ್ಣ ಬಿನ್ ಮಾದೇಗೌಡ ಉ. ಮಾದಯ್ಯ ನಿಂಗಪ್ಪ ಬಿನ್ ಮಾದೇಗೌಡ ಉ.ಮಾದಯ್ಯ ಪುಟ್ಟಮಾದಪ್ಪ ಬಿನ್ ಮಾದೇಗೌಡ ಉ.ಮಾದಯ್ಯ ನವೀನ್ ಬಿನ್ ಮಾದೇಗೌಡ ಉ.ಮಾದಯ್ಯ	69	14	0.00.04	–	0.00.04
18	ಚಿಕ್ಕತಾಯಿ ಕರಿಯ ಚಲುವ	69	28	0.00.04	–	0.00.04
19	ಚಿಕ್ಕತಾಯಿ ಕರಿಯ ಚಲುವ	62	13	0.01.00	–	0.01.00
20	ಬಸವಲಿಂಗಯ್ಯ ಬಿನ್ ಲೇಟ್ ಬಸಪ್ಪ ಬೋರಮ್ಮ ಕೋಂ ಲೇಟ್ ಬಸಪ್ಪ	62	14	0.00.04	–	0.00.04
21	ಬಸವಯ್ಯ	62	15	0.00.08	–	0.00.08
22	ಎ.ವೆಂಕಟಸ್ವಾಮಪ್ಪ ಬಿನ್ ಲೇ ಅಜ್ಜಪ್ಪ	62	18	0.00.04	–	0.00.04
23	ಬಸವೇಗೌಡ ಬಿನ್ ಲೇ ಚಿಕ್ಕಅಂತರಹಳ್ಳಿ ಚಿಕ್ಕಮರಿ ಉ ಅಂತರಹಳ್ಳಿ ಬಿನ್ ಲೇ ಚಿಕ್ಕ ಅಂತರಹಳ್ಳಿ ಕೆಂಪಮ್ಮ ಬಿನ್ ಲೇ ಚಿಕ್ಕಅಂತರಹಳ್ಳಿ	63	2	0.00.04	–	0.00.04
24	ಚಿನ್ನಗಿರಿ ಬಿನ್ ದಾಸೇಗೌಡ ಬಸವೇಗೌಡ ಬಿನ್ ಚಿಕ್ಕಬಸವೇಗೌಡ ಬಿ.ಎಸ್.ಚಂದ್ರಿಕಾ ಕೋಂ ವಿ.ಶೇಖರ್ ಸುಶೀಲಮ್ಮ ಕೋಂ ಹೊನ್ನಯ್ಯ ಮಲ್ಲಯ್ಯ ಉ ಮಲ್ಲೇಗೌಡ ಬಿನ್ ಚಿಕ್ಕ ಉರುಗೇಗೌಡ ಬಸವರಾಜು ಬಿನ್ ಲೇ ಬಸವೇಗೌಡ ಶಿವಣ್ಣ ಬಿನ್ ಲೇ ಬಸವೇಗೌಡ ಶಿವಲಿಂಗ ಬಿನ್ ಲೇ ಬಸವೇಗೌಡ ಲೋಕೇಶ ಬಿನ್ ಲೇ ಬಸವೇಗೌಡ ಹೊನ್ನೇಗೌಡ ಮಂಡೇಗೌಡ ಮಲ್ಲಯ್ಯ ಬಿನ್ ಹೊನ್ನೇಗೌಡ ಚಿಕ್ಕಪುಟ್ಟಯ್ಯ ಬಿನ್ ಹೊನ್ನೇಗೌಡ ಶಿವನಮ್ಮ ಕೋಂ ಮಲ್ಲೇಗೌಡ ಮುದ್ದಮ್ಮ ಕೋಂ ಮಲ್ಲೇಗೌಡ ಶಿವನಮ್ಮ ಕೋಂ ಮಲ್ಲೇಗೌಡ ಚಿಕ್ಕಮ್ಮ ಕೋಂ ಲೇ ಮಾರೇಗೌಡ	63	1A1	0.00.08	–	0.00.08
25	ಬಿ.ಎಸ್.ಚಂದ್ರಿಕಾ ಕೋಂ ವಿ.ಶೇಖರ್	63	1A2“Block(I)	0.00.08	–	0.00.08
		63	1A2“Block (II)	0.00.04	–	0.00.04
26	ಬಿ.ಎಸ್.ಚಂದ್ರಿಕಾ ಕೋಂ ವಿ.ಶೇಖರ್	63	1A6	0.00.04	–	0.00.04
27	ಕೋಮಲ ಕೋಂ ಜಗನ್ನಾಥ್ ಆರ್.ಡಿ .	71	1	0.00.04	–	0.00.04
	ಗ್ರಾಮ: ತಟ್ಟೇಕೆರೆ	**ತಾಲ್ಲೂಕು: ಹಾರೋಹಳ್ಳಿ**			**ಜಿಲ್ಲೆ: ರಾಮನಗರ**	
1	ಮುಕುಂದ ಬೆಳಗಲಿ ಬಿನ್ ಪಂಪಕವಿ ಆರ್. ಬೆಳಗಲಿ ರೇಖಿನಾಯ್ಕ ಬಿನ್ ಸೇವಿನಾಯ್ಕ	144	–	0.00.12	–	0.00.12
2	ಭಟಾವುನಾಯ್ಕ ಬಿನ್ ಸಕ್ರಿಯನಾಯ್ಕ	210	–	0.00.08	–	0.00.08
3	ಮುಕುಂದ ಬೆಳಗಲಿ ಬಿನ್ ಪಂಪಕವಿ ಆರ್. ಬೆಳಗಲಿ	112	1“Block (I)	0.00.04	–	0.00.04
	ಬಾಚಾವುನಾಯ್ಕ ಬಿನ್ ಲೇಟ್ ಸಕ್ರಿಯಾನಾಯ್ಕ ಮುಕುಂದ ಬೆಳಗಲಿ ಬಿನ್ ಪಂಪಕವಿ ಆರ್. ಬೆಳಗಲಿ	112	1“Block (II)	0.00.08	–	0.00.08
4	ಆರ್ ರವಿಕುಮಾರ್ ಬಿನ್ ಲೇ.ಟಿ.ಎನ್. ರುದ್ರಾರಾಧ್ಯ ಆರ್ ನಾಗೇಶ್ ಬಿನ್ ಲೇ.ಟಿ.ಎನ್. ರುದ್ರಾರಾಧ್ಯ	112	2	0.00.12	–	0.00.12
5	ದೊಡ್ಡಯ್ಯ ಬಿನ್ ದೊಳ್ಳೇಗೌಡ	9	Block (I)	0.00.08	–	0.00.08
		9	Block (II)	0.00.08	–	0.00.08
6	ಟಿ.ಕೆ ಚಿಕ್ಕಣ್ಣ ಡಿ.ರಾಮಯ್ಯ ಬಿನ್ ದಾಸೇಗೌಡ ಮಾದೇಗೌಡ ಬಿನ್ ಭೀಮೇಗೌಡ ಗೌರಮ್ಮ ಬಿನ್ ಲೇ. ಮಲ್ಲೇಗೌಡ	8	1“Block (I)	0.01.12	–	0.01.12
	ನಾಗರಾಜು ಬಿನ್ ಲೇ. ಮಲ್ಲೇಗೌಡ ನಾಗೇಶ್ ಬಿನ್ ಮಲ್ಲೇಗೌಡ ನಂಜುಂಡೇಗೌಡ ಬಿನ್ ಲೇ. ಮಲ್ಲೇಗೌಡ	8	1“Block (II)	0.01.00	–	0.01.00
7	ಸಿ.ಎಲ್.ಭಾಸ್ಕರರೆಡ್ಡಿ ಬಿನ್ ನಾರಾಯಣರೆಡ್ಡಿ	8	2	0.00.04	–	0.00.04

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿಗಳು
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

DIPR/CP/YC/2172/2024-25

ಸಿನಿಮಾ ಪುರವಣಿ



ರಾಧಿಕಾ ಕುಮಾರಸ್ವಾಮಿ

ದೀರ್ಘ ವಿರಾಮದ ಬಳಿಕ ನಟಿ ರಾಧಿಕಾ ಕುಮಾರಸ್ವಾಮಿ ಚಿತ್ರರಂಗಕ್ಕೆ ಮರಳಿದ್ದಾರೆ. ಅವರ ನಟನೆಯ 'ಭೈರಾದೇವಿ' ಸಿನಿಮಾ ಅ. 3ರಂದು ತೆರೆಗೆ ಬರುತ್ತಿದೆ. ಚಿತ್ರ ಹಾಗೂ ತಮ್ಮ ವೃತ್ತಿ ಬದುಕಿನ ಕುರಿತು ಅವರು ಮಾತನಾಡಿದ್ದಾರೆ.

'ಬಿಟ್ಟೆನೆಂದರೂ ಬಿಡದೀ ಮಾಯೆ!

ವಿನಾಯಕ ಕೆ.ಎಸ್.

● 'ಭೈರಾದೇವಿ' ಯಾವ ಜಾನರ್‌ನ ಚಿತ್ರ?

ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಚಿತ್ರ. ಕಾಳಿ, ಅಘೋರಿ ಮೊದಲಾದ ವಿಷಯಗಳನ್ನು ಹೊಂದಿದೆ. ಇದರ ಜೊತೆಗೆ ಕೌಟುಂಬಿಕ ಕಥೆ ಕೂಡ ಇದೆ. ಪುರುಷರು ಮಾತ್ರ ಅಘೋರಿಗಳಾಗುತ್ತಾರೆ ಎಂದುಕೊಂಡಿದ್ದೆ. ಆದರೆ ಈ ಕಥೆ ಕೇಳಿದ ಬಳಿಕ ಮಹಿಳೆಯರೂ ಅಘೋರಿಗಳಾಗುತ್ತಾರೆ ಎಂಬ ವಿಷಯ ತಿಳಿಯಿತು. ಒಂದು ವಿಭಿನ್ನ ಜಾನರ್‌ನ ಚಿತ್ರ. ಹಾಗಾಗಿ ಈ ಕಥೆ ಒಪ್ಪಿಕೊಂಡೆ.

● ಸಿನಿಮಾ ವಿಳಂಬವಾಗಿದ್ದು ಯಾಕೆ?

ಶುರು ಮಾಡಿ ಹಲವು ವರ್ಷಗಳಾಗಿತ್ತು. ಆದರೆ ಚಿತ್ರೀಕರಣ ಪೂರ್ಣಗೊಂಡಿದ್ದು ಇತ್ತೀಚೆಗೆ. ಈ ಸಿನಿಮಾ ಚಿತ್ರೀಕರಣಕ್ಕೆ ಹೊರಟಾಗ ಒಂದಲ್ಲ ಒಂದು ತೊಂದರೆ ಎದುರಾಗುತ್ತಲೇ ಇತ್ತು. ಮೊದಲು ಕಾಳಿ ಅವತಾರದಲ್ಲಿ ಒಂದು ಹಾಡಿನ ಚಿತ್ರೀಕರಣ ಮಾಡಿದ್ದೆವು. ಅದಾದ ಬಳಿಕ ಸಂಕಷ್ಟಗಳು ಎದುರಾದವು. ನಿರ್ದೇಶಕರಿಗೆ ಆರೋಗ್ಯ ಸರಿ ಇರಲಿಲ್ಲ. ಸೆಟ್‌ನಲ್ಲಿ ನಾನು ಸಾಹಸ ಮಾಡುವಾಗ ಏಟು ತಿಂದೆ. ಮಳೆ ಬಂತು. ಕಾಳಿ ಅವತಾರಕ್ಕೆ ದಿನ 4–5 ಗಂಟೆ ಮೇಕಪ್‌ಗೆ ಬೇಕಿತ್ತು. ನಾನು ಸಾಕಷ್ಟು ತೊಂದರೆ ಅನುಭವಿಸಿದೆ. ಈ ಎಲ್ಲ ಕಾರಣಗಳಿಂದ ಸಿನಿಮಾ ತಡವಾಯ್ತು.

● ಸುದೀರ್ಘ ವಿರಾಮದ ನಂತರ ಈ ಸಿನಿಮಾ ಆಯ್ದುಕೊಂಡಿದ್ದು ಏಕೆ?

ಸಾಕಷ್ಟು ಕಥೆಗಳನ್ನು ಕೇಳಿದೆ. ಯಾವುದೂ ಇಷ್ಟವಾಗಲಿಲ್ಲ. ನನಗೆ ಸಿನಿಮಾವೆಂದರೆ ಎಲ್ಲಿಯೂ ಮುಜುಗರವಿಲ್ಲದೆ ಇಡೀ ಕುಟುಂಬದವರು ನೋಡುವಂತೆ ಇರಬೇಕು. ಆ ರೀತಿ ಕಥೆಗಳನ್ನು ಆಯ್ದುಕೊಳ್ಳುತ್ತೇನೆ. ಸಿನಿಮಾ ಹೊರತಾಗಿ ನನ್ನ ಹಲವು ಬಿಸಿನೆಸ್‌ಗಳಿವೆ. ಆದರೆ ಸಿನಿಮಾ ಎಂಬುದು ನನಗೆ ಒಂದು ರೀತಿಯ ಸೆಳೆತ. ಇದನ್ನು ಬಿಟ್ಟು ಇರಲಾರೆ. ನಮ್ಮ ನಿರ್ಮಾಣ ಸಂಸ್ಥೆಯಿಂದಲೂ ಒಂದಷ್ಟು ಸಿನಿಮಾಗಳನ್ನು ಮಾಡುವ ಆಲೋಚನೆಯೊಂದಿಗೆ ಮರಳಿದೆ.

● ಈ ಚಿತ್ರದ ಬಗ್ಗೆ ನಿಮಗೆ ಎಷ್ಟು ಆತ್ಮವಿಶ್ವಾಸವಿದೆ?

ತುಂಬ ಭಿನ್ನವಾದ ಜಾನರ್‌ನ ಸಿನಿಮಾ. ಒಂದು ಉತ್ತಮ ಚಿತ್ರ ಮಾಡಲು ಪ್ರಾಮಾಣಿಕ ಶ್ರಮ ಹಾಕಿದ್ದೇವೆ. ಜನಕ್ಕೆ ಇಷ್ಟವಾಗುತ್ತದೆ ಎಂಬ ನಂಬಿಕೆ ಇದೆ. ಮುಂದಿನ ವಾರ ಫಲಿತಾಂಶ ತಿಳಿಯುತ್ತದೆ.

● ನೀವು ಚಿತ್ರೋದ್ಯಮದಲ್ಲಿ ಆಗಾಗ ಸಕ್ರಿಯರಾಗಿ, ಮತ್ತೊಂದಷ್ಟು ಕಾಲ ಕಣ್ಮರೆಯಾಗುವುದು ಏಕೆ? ಇಲ್ಲಿತನಕದ ಪಯಣ ಹೇಗಿತ್ತು?

ಚಿತ್ರರಂಗದಲ್ಲಿ ಎರಡು ದಶಕಗಳನ್ನು ಪೂರೈಸಿರುವೆ. ಒಂದಷ್ಟು ಉತ್ತಮ ಸಿನಿಮಾ ಮಾಡಿದ್ದೇನೆ. ಮೊದಲೇ ಹೇಳಿದಂತೆ ಬಿಟ್ಟೆನೆಂದರೂ ಬಿಡದೀ ಮಾಯೆ! ನನಗೆ ಮೊದಲಿನಂದಲೂ ನಟನೆ, ನೃತ್ಯದಲ್ಲಿ ಒಲವು ಜಾಸ್ತಿ. ಹೀಗಾಗಿ ಬೇಡ ಎಂದು ಆಚೆ ಹೋದರೂ ವಾಪಸ್ ಕರೆದುಕೊಂಡು ಬರುತ್ತದೆ. ಎಲ್ಲಿಯೂ ಸಿಗದ ಒಂದು ರೀತಿಯ ತೃಪ್ತಿ, ಆನಂದ ಸಿನಿಮಾ, ನಟನೆಯಲ್ಲಿ ಸಿಗುತ್ತದೆ. ಚಿತ್ರರಂಗದಿಂದ ದೂರವಾಗಿದ್ದೆ. ಇಲ್ಲಿನ ಯಾರ ಸಂಪರ್ಕದಲ್ಲಿಯೂ ಇರಲಿಲ್ಲ. 2012ರಲ್ಲಿ ನಮ್ಮದೇ ನಿರ್ಮಾಣ ಸಂಸ್ಥೆ ಪ್ರಾರಂಭ ಮಾಡಿ 'ಲಕ್ಕಿ' ಸಿನಿಮಾದೊಂದಿಗೆ ಸಕ್ರಿಯನಾದೆ. ಅಲ್ಲಿಂದ ಮತ್ತೆ ಈ ನಂಟು ಪ್ರಾರಂಭವಾಯಿತು. ಉತ್ತಮ ಕಥೆಗಳನ್ನು ಹುಡುಕುತ್ತಿರುವೆ. ನಾಟ್ಯರಾಣಿ ಶಾಂತಲಾ, 'ಶರಪಂಜರ'ದ ಕಲ್ಪನಾ ರೀತಿಯ ಪಾತ್ರಗಳನ್ನು ಮಾಡಬೇಕೆಂಬ ಆಸೆಯಿದೆ. ನೃತ್ಯದ ಜೊತೆಗೆ ಕಥೆ ಇರುವ ಸಿನಿಮಾಗಳನ್ನು ಮಾಡಬೇಕು.

● ಈ ಚಿತ್ರದಲ್ಲಿ ರಮೇಶ್ ಪಾತ್ರವೇನು?

ರಮೇಶ್ ಅವರೇ ಈ ಚಿತ್ರದ ನಾಯಕ. ಕಥೆ ಕೇಳಿದ ತಕ್ಷಣ ಈ ಪಾತ್ರಕ್ಕೆ ಅವರೇ ಸೂಕ್ತ ಎನ್ನಿಸಿತು. ಪೊಲೀಸ್ ಇನ್‌ಸ್ಪೆಕ್ಟರ್ ಪಾತ್ರ. ಆದರೆ ಇದು ಕೇವಲ ತನಿಖೆ, ಠಾಣೆಗೆ ಸೀಮಿತವಾದ ಪಾತ್ರವಲ್ಲ. ಅವರ ಪಾತ್ರ ಹೇಗೆ ಟ್ರಾವೆಲ್ ಮಾಡುತ್ತದೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು.

● ನಿಮ್ಮ ಮುಂದಿನ ಯೋಜನೆಗಳು?

'ಅಜಾಗ್ರತ' ಬಿಡುಗಡೆಗೆ ಸಿದ್ಧವಿದೆ. ಬೇರೆ ಭಾಷೆಗಳಿಂದ ಅವಕಾಶ ಬರುತ್ತಿವೆ. ಆದರೆ ಯಾವುದನ್ನೂ ಒಪ್ಪಿಕೊಳ್ಳುತ್ತಿಲ್ಲ. ಈ ಚಿತ್ರದ ಫಲಿತಾಂಶದ ಮೇಲೆ ನನ್ನ ಮುಂದಿನ ಯೋಜನೆಗಳು ಅವಲಂಬಿತವಾಗಿವೆ.

● ಈ ಸಿನಿಮಾ ಗೆಲ್ಲದಿದ್ದರೆ ಚಿತ್ರರಂಗ ಬಿಡುವ ಮಾತನಾಡಿದ್ದೀರಿ?.

ಸಿನಿಮಾವನ್ನು ಜನರಿಗಾಗಿಯೇ ಮಾಡುವುದು. ಅವರೇ ನೋಡಿ ಇಷ್ಟಪಡದಿದ್ದರೆ ಯಾರಿಗಾಗಿ ಸಿನಿಮಾ ಮಾಡಬೇಕು ಹೇಳಿ? ಒಂದು ಸಿನಿಮಾ ಸಿದ್ಧಗೊಳ್ಳುವಲ್ಲಿ ದೊಡ್ಡ ತಂಡದ ಶ್ರಮವಿರುತ್ತದೆ. ಈ ಚಿತ್ರದಲ್ಲಿ ಪಾತ್ರದ ಸಿದ್ಧತೆಗೆ ಸಾಕಷ್ಟು ಸಮಯ ವ್ಯಯಿಸಿದ್ದೇನೆ. ನೋವು, ಕಷ್ಟಗಳನ್ನು ಮೀರಿ ಚಿತ್ರೀಕರಣ ಮಾಡಿರುತ್ತೇವೆ. ಹಾಗಂತ ಜನ ಎಲ್ಲವನ್ನೂ ಒಪ್ಪಿಕೊಳ್ಳಬೇಕು ಎಂದಲ್ಲ. ಜನಕ್ಕೆ ನಮ್ಮ ಸಿನಿಮಾ ಇಷ್ಟವಾಗುತ್ತಿಲ್ಲ ಎಂದರೆ, ನಾವು ಚಿತ್ರರಂಗದಿಂದ ದೂರ ಉಳಿಯುವುದೇ ಉತ್ತಮ ಎಂದು ಅನ್ನಿಸಿದೆ. ಆ ನೋವಿನಲ್ಲಿ ಈ ಮಾತು ಹೇಳಿರುವೆ. ನನ್ನದೇ ಇನ್ನೊಂದು ಚಿತ್ರ 'ಅಜಾಗ್ರತ' ಬಿಡುಗಡೆಗೆ ಸಿದ್ಧವಿದೆ.



ಆರಾ

ಸೆಟ್ಟೇರಿದ 'ಆ ದಿನಗಳು, ಈ ದಿನಗಳು'

ಈಗಾಗಲೇ ಕೆಲವಷ್ಟು ಸಿನಿಮಾಗಳನ್ನು ಪೂರ್ಣಗೊಳಿಸಿ ಬಿಡುಗಡೆಗೆ ಎದುರು ನೋಡುತ್ತಿರುವ ನಟ ಭಾರ್ಗವ್ ನಾಯಕನಾಗಿ ನಟಿಸುತ್ತಿರುವ 'ಆ ದಿನಗಳು,ಈ ದಿನಗಳು' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ದುರ್ಗ ಮೋಹನ್ ನಿರ್ದೇಶನದ ಚಿತ್ರವನ್ನು ಆರ್‌ಎಸ್‌ಪಿ ಪ್ರೊಡಕ್ಷನ್ಸ್-ಚಿನ್ಮಯ್ ಸಿನಿ ಕ್ರಿಯೇಶನ್ಸ್ ನಿರ್ಮಾಣ ಮಾಡುತ್ತಿದೆ.

'ಆ ದಿನಗಳು, ಈ ದಿನಗಳು' ಶೀರ್ಷಿಕೆಯನ್ನು ಪ್ರೇಕ್ಷಕರ ಕುತೂಹಲಕ್ಕಾಗಿ 'ಆ..ಈ..' ಎಂದು ಬದಲಿಸಿದ್ದೇವೆ. ಕಾಶಿನಾಥ್ ಅವರ ಕಾಲದಲ್ಲಿ ಬರುತ್ತಿದ್ದ ಹಾಸ್ಯಕಥೆಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿದ ಕಥೆಯಿದು. ಮನರಂಜನೆ ಜೊತೆಗೊಂದು ಸಂದೇಶವಿದೆ. ಹಳ್ಳಿ ಬದುಕು, ಕಾರ್ಪೊರೇಟ್ ಜೀವನ, ನಮ್ಮ ಕಾಲ, ಇಂದಿನ ಕಾಲ ಎಲ್ಲವನ್ನೂ ಅವಲೋಕಿಸಿದರೆ ಎಲ್ಲ ಕಡೆ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇವೆ. ಇದರಲ್ಲಿ ಒಳ್ಳೆಯದನ್ನು ತೆಗೆದುಕೊಂಡರೆ ಜೀವನ ಸುಂದರವಾಗುತ್ತದೆ. ಪ್ರಚಲಿತ ವಿದ್ಯಮಾನಗಳು, ಜತೆಗೆ ನಾಲ್ಕು ಭಿನ್ನ ರೀತಿಯ ಪ್ರೇಮಕಥೆ ಚಿತ್ರದಲ್ಲಿದೆ' ಎಂದು ಚಿತ್ರದ ಕುರಿತು ಮಾಹಿತಿ ನೀಡಿದರು ದುರ್ಗ ಮೋಹನ್.

ರಾಘವೇಂದ್ರ ರಾಜ್‌ಕುಮಾರ್, ಸುಧಾರಾಣಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆರಾ, ಶ್ವೇತಾಸಂಕೇತ್, ಛವಸಖಿ ತಿಮ್ಮಯ್ಯ, ಮೋನಿಕಾವಸಿಷ್ಠ ಮುಂತಾದವರು ತಾರಾಗಣದಲ್ಲಿದ್ದಾರೆ. ವಿವೇಕ್ ಜಂಗ್ಲಿ ಸಂಗೀತ ಚಿತ್ರಕ್ಕಿದೆ.

ಹೊರಬಂತು 'ಗೋಪಿಲೋಲ'ನ ಟ್ರೇಲರ್



ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಗಣ್ಯರು

ಬಹುತೇಕ ಹೊಸಬರೇ ಕೂಡಿ ಸಿದ್ಧಪಡಿಸಿರುವ 'ಗೋಪಿಲೋಲ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟರಾದ ದೊಡ್ಡಣ್ಣ, ಶ್ರೀನಗರ ಕಿಟ್ಟಿ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಸುಕೃತಿ ಚಿತ್ರಾಲಯ ಲಾಂಛನದಲ್ಲಿ ಎಸ್.ಆರ್. ಸನತ್ ಕುಮಾರ್ ನಿರ್ಮಿಸಿರುವ ಚಿತ್ರಕ್ಕೆ ಆರ್. ರವೀಂದ್ರ ನಿರ್ದೇಶನವಿದೆ. ನೈಸರ್ಗಿಕ ಕೃಷಿ, ಪ್ರೇಮ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರ ಅಕ್ಟೋಬರ್ 4ರಂದು ತೆರೆಗೆ ಬರಲಿದೆ.

'ಚಿತ್ರದ ನಿರ್ಮಾಪಕರೇ ಕಥೆ ಬರೆದಿದ್ದಾರೆ. ನೈಸರ್ಗಿಕ ಕೃಷಿಯ ಕುರಿತಾದ ಹಾಗೂ ಸುಂದರ ಪ್ರೇಮಕಥೆಯುಳ್ಳ ಚಿತ್ರ. ಒಂದೊಳ್ಳೆ ಸಂದೇಶ ಕೂಡ ಇದೆ. ಆ್ಯಕ್ಷನ್, ಲವ್, ಸಸ್ಪೆನ್ಸ್–ಹೀಗೆ ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಒಳ್ಳೆ ಕಂಟೆಂಟ್ ಇದೆ' ಎಂದರು ನಿರ್ದೇಶಕರು.

ಆರು ಹಾಡುಗಳಿಗೆ ಮಿಥುನ್ ಅಶೋಕನ್ ಸಂಗೀತ ಸಂಯೋಜಿಸಿದ್ದಾರೆ. ಮಂಜುನಾಥ್ ಅರಸ್ ಚಿತ್ರದ ನಾಯಕ. ಅವರಿಗೆ ನಿಮಿಷ ಜೋಡಿಯಾಗಿದ್ದಾರೆ.

ಹೆಸರಿಡದ ಚಿತ್ರದಲ್ಲಿ ಗುರುನಂದನ್



ಚಿತ್ರತಂಡ

'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ನಟ ಗುರುನಂದನ್ ಇತ್ತೀಚೆಗಷ್ಟೇ ಇನ್ನೂ ಹೆಸರಿಡದ ಸಿನಿಮಾ ಘೋಷಿಸಿದ್ದರು. ತಮ್ಮದೇ ಮಂಡಿಮನೆ ಟಾಕೀಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ಕೈಗೆತ್ತಿಕೊಂಡಿದ್ದರು. ಇದೀಗ ಸಿನಿಮಾದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ.

ಸುಮಂತ್ ಗೌಡ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಅವರ ಮೊದಲ ಚಿತ್ರವಿದು. ಶಿವಸೇನಾ ಛಾಯಾಚಿತ್ರಗ್ರಹಣ, ಕಿರಣ್ ರವೀಂದ್ರನಾಥ್ ಸಂಗೀತ ನಿರ್ದೇಶನವಿದೆ.

'ಮೊದಲ ಹಂತದಲ್ಲಿ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಪೂರ್ಣಗೊಂಡಿದೆ. ಚಿಕ್ಕಮಗಳೂರು, ಲಡಾಖ್‌ನಲ್ಲಿ ಚಿತ್ರೀಕರಿಸುವ ಯೋಜನೆಯಿದೆ. ಸ್ಟಾಂಡ್ ಅಪ್ ಕಾಮಿಡಿಯನ್ ಕುರಿತಾದ ಸಿನಿಮಾವಿದು' ಎಂದಿದ್ದಾರೆ ನಿರ್ದೇಶಕರು.

'ಹರಿಕಥೆ ಅಲ್ಲ ಗಿರಿಕಥೆ' ಖ್ಯಾತಿಯ ತಪಸ್ವಿನಿ ಪೂಣಚ್ಚ ಗುರುನಂದನ್‌ಗೆ ಜೋಡಿಯಾಗಿದ್ದಾರೆ . ತಬಲ ನಾಣಿ, ಧರ್ಮಣ್ಣ ಸೇರಿದಂತೆ ದೊಡ್ಡ ತಾರಾಬಳಗ ಚಿತ್ರದಲ್ಲಿದೆ.



ಸಾತ್ವಿಕ ರಾವ್

ಮೂರು ಚಿತ್ರಗಳು ತೆರೆಗೆ

ನೈಟ್ ರೋಡ್

ಈ ಮೊದಲು 'ನೈಸ್ ರೋಡ್' ಶೀರ್ಷಿಕೆಯಿಂದ ವಿವಾದಕ್ಕೊಳಗಾಗಿ, ಬಳಿಕ ಶೀರ್ಷಿಕೆ ಬದಲಿಸಿಕೊಂಡ 'ನೈಟ್ ರೋಡ್' ಚಿತ್ರ ಇಂದು (ಸೆ.27) ತೆರೆ ಕಾಣುತ್ತಿದೆ.

ಈ ಹಿಂದೆ 'ತಾಂಡವ' ಚಿತ್ರವನ್ನು ನಿರ್ದೇಶಿಸಿದ್ದ ಗೋಪಾಲ್ ಹಳೇಪಾಳ್ಯ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಅಪಘಾತದಿಂದ ಮೃತಪಟ್ಟ ಯುವಕನ ಅಸಹಜ ಸಾವಿನ ತನಿಖೆಗೆ ಮುಂದಾಗುವ ನಾಯಕ ಹೇಗೆ ಆಧ್ಯಾತ್ಮದತ್ತ ವಾಲುತ್ತಾನೆ ಎಂಬುದೇ ಚಿತ್ರಕಥೆ.

ತಾರಾಗಣದಲ್ಲಿ ಧರ್ಮ, ಜ್ಯೋತಿ ರೈ, ಗಿರಿಜಾ ಲೋಕೇಶ್, ಗೋವಿಂದೇಗೌಡ(ಜಿ.ಜಿ), ರವಿಕಿಶೋರ್ ಮುಂತಾದವರಿದ್ದಾರೆ. ಸತೀಶ್ ಆರ್ಯನ್ ಸಂಗೀತ, ಪ್ರವೀಣ್ ಶೆಟ್ಟಿ ಛಾಯಾಚಿತ್ರಗ್ರಹಣ, ಜೀವನ್ ಪ್ರಕಾಶ್ ಸಂಕಲನವಿದೆ.

ಸಂಜು

ಪ್ರೇಮ ಕಥೆಗಳಿಗೆ ಕೊನೆಯಿಲ್ಲ, ಭಾವನಾತ್ಮಕ ಸಂಬಂಧಗಳಿಗೆ ಸಾವಿಲ್ಲ, ಪ್ರಕೃತಿಗೆ ಸೋಲದ ಮನಸ್ಸಿಲ್ಲ ಎಂಬ ಕಥಾಸಾರವನ್ನು ಹೊಂದಿರುವ ಚಿತ್ರ ಸಂಜು. ನಟ, ನಿರ್ದೇಶಕ ಯತಿರಾಜ್ ಆ್ಯಕ್ಷನ್–ಕಟ್ ಹೇಳಿದ್ದಾರೆ. ಸಂತೋಷ್ ಡಿ.ಎಂ ನಿರ್ಮಾಣವಿದೆ.

'ಹದಿಹರೆಯದಲ್ಲಿ ಬಹಳಷ್ಟು ಏರಿಳಿತ, ಸೋಲು, ಹತಾಶೆ, ಅವಮಾನ ಸಹಜ. ಕೆಲವರು ಅದನ್ನು ಸುಲಭವಾಗಿ ಮೆಟ್ಟಿ ಮುಂದೆ ಸಾಗುತ್ತಾರೆ. ಇನ್ನೂ ಕೆಲವರು ತಮಗೆ ಎದುರಾಗುವ ಘಟನೆಗಳಿಗೆ ಅಂಜಿ ಎದೆಗುಂದುತ್ತಾರೆ. ಅಂತಹ ಎರಡು ಪ್ರಸಂಗಗಳನ್ನು ಪ್ರೀತಿಯ ಚೌಕಟ್ಟಿನಲ್ಲಿ ಹೇಳಿದ್ದೇನೆ' ಎನ್ನುತ್ತಾರೆ ಯತಿರಾಜ್.

ಮಡಿಕೇರಿಯ ಮೂರ್ನಾಡುವಿನಲ್ಲಿ ಚಿತ್ರೀಕರಣಗೊಂಡಿದೆ. ಮನ್ವಿತ್ ಚಿತ್ರದ ನಾಯಕ. ಸಾತ್ವಿಕ ರಾವ್ ನಾಯಕಿ. ಸುಂದರಶ್ರೀ, ಸಂಗೀತ, ಬಲ ರಾಜವಾಡಿ, ಅಪೂರ್ವ ಮುಂತಾದವರು ನಟಿಸಿದ್ದಾರೆ.

ವಿದ್ಯಾ ನಾಗೇಶ್ ಛಾಯಾಚಿತ್ರಗ್ರಹಣ, ವಿಜಯ್ ಹರಿತ್ಸ ಸಂಗೀತ, ಸಂಜೀವ ರೆಡ್ಡಿ ಸಂಕಲನ ಚಿತ್ರಕ್ಕಿದೆ.

ಕೇದಾರ್‌ನಾಥ್ ಕುರಿಫಾರಂ

'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಮಡೆನೂರ್ ಮನು ನಾಯಕನಾಗಿ ನಟಿಸಿರುವ ಚಿತ್ರ 'ಕೇದಾರ್‌ನಾಥ್ ಕುರಿಫಾರಂ'. ಜೆ.ಕೆ. ಮೂವೀಸ್ ಬ್ಯಾನರ್‌ನಲ್ಲಿ ಕೆ.ಎಂ.ನಟರಾಜ್ ನಿರ್ಮಿಸಿರುವ ಚಿತ್ರಕ್ಕೆ ಶೀನು ಸಾಗರ್ ನಿರ್ದೇಶನವಿದೆ.

ಶಿವಾನಿ ಅಮರ್ ಚಿತ್ರದ ನಾಯಕಿ. ಟೆನ್ನಿಸ್ ಕೃಷ್ಣ, ಕರಿಸುಬ್ಬು ಮೊದಲಾದವರು ತಾರಾಗಣದಲ್ಲಿದ್ದಾರೆ. ಸನ್ನಿ ಡಾನ್ ಅಬ್ರಾಹಂ ಸಂಗೀತ, ರಾಜೇಶ್ ತಿಲಕ್ ಛಾಯಾಚಿತ್ರಗ್ರಹಣವಿದೆ.

'ಒನ್ ಆಂಡ್ ಹಾಫ್'ನ ಹಾಡು



ಮಾನ್ವಿತಾ ಹರೀಶ್

ಮಾನ್ವಿತಾ ಹರೀಶ್, ಶ್ರೇಯಶ್ ಸೂರಿ ಜೋಡಿಯಾಗಿ ನಟಿಸುತ್ತಿರುವ 'ಒನ್ ಆಂಡ್ ಹಾಫ್' ಸಿನಿಮಾದ 'ಹ್ಯಾಂಡಲ್ ವಿತ್ ಕೇರ್' ಎಂಬ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ರಂಗ್‌ಬಿರಂಗಿ', 'ಡೇವಿಡ್' ಮೊದಲಾದ ಸಿನಿಮಾಗಳ ಮೂಲಕ ಭರವಸೆ ಮೂಡಿಸಿದ್ದ ಯುವ ನಟ ಶ್ರೇಯಶ್ ಸೂರಿ ನಟನೆಯ ಜೊತೆಗೆ ಈ ಚಿತ್ರದ ನಿರ್ದೇಶನವನ್ನೂ ಮಾಡುತ್ತಿದ್ದಾರೆ.

'ಈ ಸಿನಿಮಾ ನನ್ನೊಬ್ಬನದ್ದಲ್ಲ. ಇಡೀ ತಂಡದ್ದು. ಬಿಡುಗಡೆ ಆದ ನಂತರ ಪ್ರೇಕ್ಷಕರದ್ದು. ಜನ ಕೈ ಹಿಡಿದರೆ ಇನ್ನಷ್ಟು ಉತ್ತಮ ಸಿನಿಮಾ ಮಾಡುವ ಆಸೆಯಿದೆ. ಜನಕ್ಕೆ ಇಷ್ಟವಾಗುತ್ತದೆಂಬ ಭರವಸೆಯಿದೆ' ಎಂದರು ಶ್ರೇಯಶ್ ಸೂರಿ.

ಈ ಹಾಡಿಗೆ ಎಂ.ಸಿ.ಬಿಜ್ಜು ಹಾಗೂ ಯಶಸ್ ನಾಗ್ ಸಾಹಿತ್ಯ ಬರೆದಿದ್ದು, ನಾಯಕ ಶ್ರೇಯಶ್ ಸೂರಿ, ಅನಂತ್ ಹಾಗೂ ಎಂ.ಸಿ.ಬಿಜ್ಜು ಧ್ವನಿಯಾಗಿದ್ದಾರೆ. ಕದ್ರಿ ಮಣಿಕಾಂತ್ ಸಂಗೀತ ನಿರ್ದೇಶನವಿದೆ.

ಸಿನಿಮಾವನ್ನು ಸುಲಕ್ಷ್ಮೀ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ. ಸಾಧು ಕೋಕಿಲ, ಅವಿನಾಶ್ ಯಳಂದೂರ್, ಸುಚೇಂದ್ರ ಪ್ರಸಾದ್, ಸ್ಪರ್ಶ ರೇಖಾ, ಅನಂತು, ಸುಂದರಶ್ರೀ ಮುಂತಾದವರು ತಾರಾಬಳಗದಲ್ಲಿದ್ದಾರೆ. ದೇವೇಂದ್ರ ಛಾಯಾಚಿತ್ರಗ್ರಹಣ, ಮುಕೇಶ್ ಜೆ ಸಂಕಲನವಿದೆ.

ವಿಕೆ–29 ಚಿತ್ರದಲ್ಲಿ ವಿಜಯ್ ಪಾತ್ರದ ಹೆಸರು ರಾಚಯ್ಯ. ಹೀಗಾಗಿ ಅದೇ ಶೀರ್ಷಿಕೆ ಎಂಬ ಸುದ್ದಿ ಹರಿದಾಡಿದೆ..



ದುನಿಯಾ ವಿಜಯ್

'ರಾಚಯ್ಯ'ನಾಗುತ್ತಾರಾ ವಿಜಯ್?

'ಭೀಮ'ದ ಯಶಸ್ಸಿನ ಬಳಿಕ ದುನಿಯಾ ವಿಜಯ್ ಬ್ಯುಸಿಯಾಗಿದ್ದಾರೆ. 'ಭೀಮ' ಚಿತ್ರ ತೆರೆಗೆ ಬರುವ ಮೊದಲೇ ಅವರ 29ನೇ ಸಿನಿಮಾ ಸೆಟ್ಟೇರಿತ್ತು. 'ಕಾಟೇರ' ಚಿತ್ರದ ಬರಹಗಾರರಾಗಿದ್ದ ನಿರ್ದೇಶಕ ಜಡೇಶ್ ಹಂಪಿ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ಚಿತ್ರದ ಶೇಕಡ 60ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ.

'ಚಿತ್ರದಲ್ಲಿ ವಿಜಯ್ ಪಾತ್ರದ ಹೆಸರು ರಾಚಯ್ಯ. ಹೀಗಾಗಿ ಇದೇ ಶೀರ್ಷಿಕೆ ಎಂಬ ಸುದ್ದಿ ಹರಿದಾಡಿದೆ. ಆದರೆ ಇದರ ಜೊತೆಗೆ ಬೇರೆ ಮೂರು ಶೀರ್ಷಿಕೆಗಳನ್ನು ಆಲೋಚಿಸಿದ್ದೇವೆ. ಯಾವ ಶೀರ್ಷಿಕೆ ಎಂಬುದು ಇನ್ನೂ ಅಂತಿಮವಾಗಿಲ್ಲ. ಸದ್ಯ ಚಿತ್ರೀಕರಣದ ಮೇಲೆ ಗಮನ ಹರಿಸಿದ್ದೇವೆ' ಎನ್ನುತ್ತಾರೆ ನಿರ್ದೇಶಕ ಜಡೇಶ್.

'ಕಾಲಘಟ್ಟದಲ್ಲಿ ನಡೆಯುವ ಕಥೆ. ಆಗಿನ ಕಾಲದ ರೀತಿಯ ಹಳ್ಳಿಗಳು ಈಗ ಸಿಗುವುದಿಲ್ಲ. ಹೀಗಾಗಿ ಬಹುತೇಕ ಸೆಟ್‌ನಲ್ಲಿಯೇ ಚಿತ್ರೀಕರಣ ನಡೆಯುತ್ತಿದೆ. ಬೆಂಗಳೂರು ಸುತ್ತಮುತ್ತ ಸೆಟ್ ಹಾಕಿ ಶೇಕಡ 60ರಷ್ಟು ಚಿತ್ರೀಕರಣ ಮುಗಿಸಿದ್ದೇವೆ. ಇನ್ನೂ 40 ದಿನದ ಚಿತ್ರೀಕರಣ ಬಾಯಿ ಇದೆ. ಉಮಾಶ್ರೀ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ವರ್ಷದೊಳಗೆ ಚಿತ್ರೀಕರಣ ಮುಗಿಸುವ ಯೋಜನೆಯಿದೆ. ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ಅಚ್ಯುತ್ ಕುಮಾರ್, ಬಿ.ಸುರೇಶ್ ಮೊದಲಾದವರ ಡೇಟ್ ಹೊಂದಿಸಿ ಚಿತ್ರೀಕರಣ ಮಾಡಬೇಕಿದೆ' ಎಂದು ಜಡೇಶ್ ಮಾಹಿತಿ ನೀಡಿದರು.

'ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ' ಎಂಬ ಟ್ಯಾಗ್‌ಲೈನ್ ಹೊಂದಿರುವ ಚಿತ್ರ ಜಾತಿ ವ್ಯವಸ್ಥೆಯ ಕುರಿತಾದ ಕಥೆ ಹೊಂದಿದೆ ಎನ್ನುತ್ತಿವೆ ಚಿತ್ರತಂಡ ಮೂಲಗಳು. 'ಸಾರಥಿ' ಸಿನಿಮಾದ ನಿರ್ಮಾಪಕ ಕೆ.ವಿ. ಸತ್ಯಪ್ರಕಾಶ್ ಬಂಡವಾಳ ಹೂಡುತ್ತಿದ್ದಾರೆ. ದುನಿಯಾ ವಿಜಯ್ ಅವರ ಮಗಳು ಮೋನಿಕಾ ಈ ಸಿನಿಮಾದಿಂದ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ವಿಜಯ್‌ಗೆ ರಚಿತಾ ರಾಮ್ ಜೋಡಿಯಾಗಿದ್ದಾರೆ.

ಕೆಪಿಎಸ್‌ಸಿ: ಮರು ಪರೀಕ್ಷೆ ಡಿ. 29ಕ್ಕೆ?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಡಿಸೆಂಬರ್ 29ರಂದು ಪೂರ್ವಭಾವಿ ಪರೀಕ್ಷೆಯನ್ನು ಮತ್ತೆ ನಡೆಸಲು ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಮುಂದಾಗಿದೆ. ಮರು ಪರೀಕ್ಷೆಯ ದಿನಾಂಕ ನಿಗದಿಪಡಿಸುವ ಕುರಿತು ಚರ್ಚಿಸಲು ಆಯೋಗದ ಸಭೆ ಗುರುವಾರ ನಡೆಯಿತು.

ಈ ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ನಡೆಸಿತ್ತು. ಆದರೆ, ಪ್ರಶ್ನೆ ಪತ್ರಿಕೆ 1 ಮತ್ತು 2ರಲ್ಲಿನ ಪ್ರಶ್ನೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿದ್ದರಲ್ಲಿ ಹಲವು ತಪ್ಪುಗಳು ನುಸುಳಿದ್ದವು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಪರೀಕ್ಷಾರ್ಥಿಗಳು ಮರು ಪರೀಕ್ಷೆಗೆ ಆಗ್ರಹಿಸಿದ್ದರು. ಈ ಬೇಡಿಕೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡಪರ ಸಂಘಟನೆಗಳೂ ದನಿಗೂಡಿಸಿದ್ದವು.

ಹೀಗಾಗಿ, ಎರಡು ತಿಂಗಳ ಒಳಗೆ ಮರು ಪರೀಕ್ಷೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಪಿಎಸ್‌ಸಿಗೆ ಸೂಚನೆ ನೀಡಿದ್ದರು. ಮುಖ್ಯಮಂತ್ರಿ ಸೂಚನೆ ನೀಡಿದ ನಂತರ ಆಯೋಗದ ಮೂರು ಸಭೆಗಳು ನಡೆದರೂ ಮರು ಪರೀಕ್ಷೆ ದಿನಾಂಕ ನಿಗದಿ ಆಗಿರಲಿಲ್ಲ. ಮರು ಪರೀಕ್ಷೆಯ ದಿನಾಂಕ ನಿಗದಿಪಡಿಸುವಂತೆ ಕೆಲವು ಸದಸ್ಯರು ಪಟ್ಟು ಹಿಡಿದಿದ್ದರು ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ವೇಗದ ಮಿತಿಗೆ ಕಡಿವಾಣ, ನಿಯಮ ಉಲ್ಲಂಘನೆಗೆ ದಂಡದಿಂದಾಗಿ ತಗ್ಗಿದ ಸಾವಿನ ಸಂಖ್ಯೆ

ಅಪಘಾತ: ಪೂರ್ಣ 'ಬ್ರೇಕ್'ಗೆ ಕಸರತ್ತು

• ಕೆ.ಎಸ್.ಸುನಿಲ್

ಬೆಂಗಳೂರು: ವೇಗದ ವಾಹನ ಚಾಲನೆಗೆ ಕಡಿವಾಣ, ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಕುರಿತು ಜಾಗೃತಿಯ ಜೊತೆಯಲ್ಲೇ ಪೊಲೀಸರು ದಂಡದ ಅಸ್ತ್ರವನ್ನೂ ಬಳಸಿದ್ದರಿಂದ ರಾಜ್ಯದಲ್ಲಿ ರಸ್ತೆ ಅಪಘಾತಗಳಲ್ಲಿ ಸಂಭವಿಸುವ ಸಾವುಗಳ ಸಂಖ್ಯೆ ತಗ್ಗಲಾರಂಭಿಸಿದೆ.

2022, 2023 ಮತ್ತು 2024ರ ಮೊದಲ ಎಂಟು ತಿಂಗಳ ಅಪಘಾತಗಳ ಅಂಕಿ ಅಂಶಗಳನ್ನು ಉಲ್ಲೇಖಿಸಿರುವ ಪೊಲೀಸ್ ಇಲಾಖೆ, ಅಪಘಾತಗಳನ್ನು ಸಂಪೂರ್ಣ ನಿಯಂತ್ರಿಸಲು ಬ್ಲಾಕ್ ಸ್ಪಾಟ್‌ಗಳನ್ನು (ಅಪಘಾತ ವಲಯ) ಗುರುತಿಸಿ ಮುಂಜಾಗ್ರತಾ ಕ್ರಮವಹಿಸಲಾಗುತ್ತಿದೆ ಎಂದು ಹೇಳಿದೆ.

ಈ ವರ್ಷದ ಮೊದಲ ಎಂಟು ತಿಂಗಳಲ್ಲಿ ರಸ್ತೆ ಅಪಘಾತಗಳಲ್ಲಿನ ಸಾವುಗಳ ಸಂಖ್ಯೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕೊಂಚ ಕಡಿಮೆ ಆಗಿದೆ. ಇಲಾಖೆಯ ಅಂಕಿ ಅಂಶಗಳ ಪ್ರಕಾರ, ಈ ವರ್ಷ ಆಗಸ್ಟ್‌ವರೆಗೆ 7,596 ಮಂದಿ ರಸ್ತೆ ಅಪಘಾತಗಳಲ್ಲಿ ಮೃತಪಟ್ಟಿದ್ದಾರೆ. 2023, 2022ರಲ್ಲಿ ಕ್ರಮವಾಗಿ 8,146, 7,996 ಜನರು ಮೃತಪಟ್ಟಿದ್ದರು.

ಆದರೆ, ಇತರೆ ನಗರಗಳಿಗೆ ಹೋಲಿಸಿದರೆ ರಾಜಧಾನಿ ಈ ವರ್ಷವೂ ಅಪಘಾತಗಳ ಪಟ್ಟಿಯಲ್ಲಿ 'ಪ್ರಥಮ' ಸ್ಥಾನದಲ್ಲಿದೆ. ಬೆಂಗಳೂರು ನಗರದಲ್ಲಿ ಈ ವರ್ಷ ಆಗಸ್ಟ್‌ವರೆಗೆ 569 ಮಂದಿ ಮೃತಪಟ್ಟಿದ್ದಾರೆ. 2022ರಲ್ಲಿ 515 ಹಾಗೂ 2023ರಲ್ಲಿ 567 ಮಂದಿ ಜೀವ ಕಳೆದುಕೊಂಡಿದ್ದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆಯಲ್ಲಿಯೂ ಗಣನೀಯ ಇಳಿಕೆಯಾಗಿದೆ. 2023ರ ಜನವರಿಯಿಂದ ಆಗಸ್ಟ್‌ವರೆಗೆ ಇಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ 147 ಮಂದಿ ಮೃತಪಟ್ಟಿದ್ದರು. ಈ ವರ್ಷ ಜನವರಿಯಿಂದ ಆಗಸ್ಟ್‌ವರೆಗೆ 50 ಮಂದಿ ಮೃತಪಟ್ಟಿದ್ದಾರೆ.

'ವಾಹನಗಳ ವೇಗಕ್ಕೆ ಮಿತಿ ನಿಗದಿ, ಸಿ.ಸಿ.ಟಿ.ವಿ ಕ್ಯಾಮೆರಾಗಳ ಅಳವಡಿಕೆ, ದ್ವಿಚಕ್ರ ವಾಹನ ಸಂಚಾರ ನಿಷೇಧ, ನಿಯಮ ಉಲ್ಲಂಘನೆ ವಿರುದ್ಧ ಪೊಲೀಸರ ವಿಶೇಷ ಕಾರ್ಯಾಚರಣೆ, ಸಂಚಾರ ನಿಯಮ ಉಲ್ಲಂಘನೆಯನ್ನು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ಪತ್ತೆ ಹಚ್ಚುವುದು ಸೇರಿ ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡ ಪರಿಣಾಮ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸಾವಿನ ಪ್ರಮಾಣ ಇಳಿಕೆಯಾಗಿದೆ' ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಮರಣ ಪ್ರಮಾಣ ಇಳಿಕೆಗೆ ಕಾರಣ?: ಅಪಘಾತ ಹೆಚ್ಚು ಸಂಭವಿಸುವ ಹೆದ್ದಾರಿಗಳಲ್ಲಿ ವೇಗದ ಚಾಲನೆಗೆ ಕಡಿವಾಣ, ಶಿಸ್ತುಪಡ, ಬ್ಲಾಕ್ ಸ್ಪಾಟ್‌ಗಳ (ಅಪಘಾತ ವಲಯ) ಬಳಿ ಸೂಚನಾ ಫಲಕ, ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಕೆ, ಮದ್ಯಪಾನ ಮಾಡಿ ಚಾಲನೆ ಮೇಲೆ ನಿಗಾ, ಪ್ರಖರ ಬೆಳಕು ಹೊರಸೂಸುವ ಮತ್ತು ಕಣ್ಣು ಕುಕ್ಕುವ ದೀಪಗಳನ್ನು ಅಳವಡಿಸಿಕೊಂಡ ವಾಹನ ಸವಾರರಿಗೆ ದಂಡ ಮತ್ತು ಎ.ಐ ಆಧಾರಿತ ಕ್ಯಾಮರಾಗಳ ಅಳವಡಿಕೆಯಿಂದ ಸ್ವಲ್ಪ ಪ್ರಮಾಣದಲ್ಲಿ ಫಲ ಕೊಟ್ಟಿದೆ. ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಇಳಿಕೆಯಾಗಿದೆ.

ಹೆದ್ದಾರಿಗಳಲ್ಲಿ ರಸ್ತೆ ಬದಿ ಕೆಟ್ಟು ನಿಂತ ಅಥವಾ ನಿಲುಗಡೆ ಮಾಡಿರುವ ವಾಹನಗಳ ತೆರವಿಗೆ ಆದ್ಯತೆ ನೀಡುವಂತೆ ಗಸ್ತು ಸಿಬ್ಬಂದಿಗೆ ಸೂಚಿಸಲಾಗಿದೆ. ಅದರಲ್ಲಿಯೂ ರಾತ್ರಿ ವೇಳೆ ಹೆದ್ದಾರಿಗಳಲ್ಲಿ ವಾಹನಗಳು ಕೆಟ್ಟು ನಿಂತರೆ ಅಪಾಯ ಹೆಚ್ಚು. ಆದ್ದರಿಂದ ಇಂತಹ ವಾಹನಗಳ ಮೇಲೆ ನಿಗಾ ವಹಿಸುವಂತೆ ಹೆದ್ದಾರಿ ಗಸ್ತು ವಾಹನಗಳ ಸಿಬ್ಬಂದಿಗೆ ಪೊಲೀಸ್ ಇಲಾಖೆ ಸೂಚಿಸಿದೆ.

'2023ಕ್ಕೆ ಹೋಲಿಕೆ ಮಾಡಿದರೆ ಅಪಘಾತ ಪ್ರಮಾಣದಲ್ಲಿ ಪ್ರಸ್ತುತ ವರ್ಷ ಶೇ 30ರಷ್ಟು ಇಳಿಕೆಯಾಗಿದೆ. ಅಪಘಾತ ತಡೆಯುವುದಕ್ಕಾಗಿ ಕೆಲ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಾಹನ ಸವಾರರಿಗೆ ಸಂಚಾರ ನಿಯಮ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಬ್ಲಾಕ್ ಸ್ಪಾಟ್‌ಗಳನ್ನು ಅಭಿವೃದ್ಧಿಪಡಿಸಿ ಎಚ್ಚರಿಕೆ ವಹಿಸಲಾಗಿದೆ' ಎಂದು ರಸ್ತೆ ಸುರಕ್ಷತೆ ಮತ್ತು ಸಂಚಾರ ವಿಭಾಗದ ಹಿಂದಿನ ಎಡಿಜಿಪಿ ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸುರಕ್ಷಿತ ಪ್ರಯಾಣಕ್ಕೆ ನಿಯಮ ಪಾಲನೆ ಅಗತ್ಯ. ಪ್ರಖರ ದೀಪಗಳಿಂದ ಎದುರಿನ ವಾಹನ ಚಾಲಕರು ಮತ್ತು ದ್ವಿಚಕ್ರ ವಾಹನ ಸವಾರರಿಗೆ ರಸ್ತೆ ಕಾಣದಂತಾಗಿ, ಅಪಘಾತಗಳು ಸಂಭವಿಸುತ್ತಿದ್ದವು. ನಿಯಮ ಉಲ್ಲಂಘಿಸುವ ವಾಹನ ಚಾಲಕರಿಗೆ ದಂಡ ಹಾಕಲಾಗುತ್ತಿದೆ' ಎಂದು ಹೇಳಿದರು.



ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ.

'ಫಲಿಸಿದ ಸುಧಾರಣಾ ಕ್ರಮಗಳು'

'ಬೆಂಗಳೂರು ನೆರೆದಿಂದ ಮಹಾನಗರಿಗೆ ಹೊಂದಿಕೊಂಡಂತಿರುವ ಹೆದ್ದಾರಿಗಳಲ್ಲಿಯೇ ಅತಿ ಹೆಚ್ಚಿನ ಅಪಘಾತಗಳು ಸಂಭವಿಸಿವೆ. ವಾಹನ ದಟ್ಟಣೆ, ಅಸುರಕ್ಷಿತ ರಸ್ತೆಗಳು, ಮಿತಿ ಮೀರಿದ ವೇಗ, ಕುಡಿದು ವಾಹನ ಚಾಲನೆ, ಹೆಲ್ಮೆಟ್ ಹಾಕದೇ ಇರುವುದು, ಸೀಟ್ ಬೆಲ್ಟ್ ಧರಿಸದೇ ಇರುವುದು, ಬ್ರೇಕ್ ವೈಫಲ್ಯ ಸೇರಿದಂತೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಸಂಭವಿಸುತ್ತಿದ್ದ ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿತ್ತು. ಇದನ್ನು ತಗ್ಗಿಸುವ ಸಲುವಾಗಿ ಕೈಗೊಂಡ ಸುಧಾರಣಾ ಕ್ರಮಗಳು ಫಲಿಸಿವೆ' ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಅಪಘಾತದಲ್ಲಿ ಮೃತಪಟ್ಟವರ ವಿವರ

ತಿಂಗಳು	2023	2024
ಜನವರಿ	14	12
ಫೆಬ್ರುವರಿ	17	06
ಮಾರ್ಚ್	20	09
ಏಪ್ರಿಲ್	20	03
ಮೇ	29	03
ಜೂನ್	27	09
ಜುಲೈ	10	06
ಆಗಸ್ಟ್	10	02
ಒಟ್ಟು	147	50

ರಾಜ್ಯದಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ (ಜನವರಿಯಿಂದ ಆಗಸ್ಟ್‌ವರೆಗೆ)

ವರ್ಷ	ಸಾವು
2022	7996
2023	8146
2024	7596

ಬೆಂಗಳೂರು ನಗರ
2024ರ ಜನವರಿಯಿಂದ ಆಗಸ್ಟ್‌ವರೆಗೆ

ವರ್ಷ	ಸಾವು
2022	515
2023	567
2024	569

ಮಧುಗಿರಿ: ವೃದ್ಧ ದಂಪತಿಯನ್ನು ತೋಟದಲ್ಲಿ ಕೂಡಿ ಹಾಕಿ ಜೀತ



ಮಧುಗಿರಿ ತಾಲ್ಲೂಕಿನ ಬೆಲ್ಲದಮಡುಗು ತೋಟದಲ್ಲಿ ವೃದ್ಧ ದಂಪತಿ

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ಇಲ್ಲಿನ ತಾಲ್ಲೂಕಿನ ಬೆಲ್ಲದಮಡುಗು ಗ್ರಾಮದ ತೋಟವೊಂದರಲ್ಲಿ ವರ್ಷದಿಂದ ಕೂಡಿ ಹಾಕಲಾಗಿದ್ದ ವೃದ್ಧ ದಂಪತಿಯನ್ನು ಅಧಿಕಾರಿಗಳು ಬಂಧಮುಕ್ತಗೊಳಿಸಿದ್ದಾರೆ.

ದಬ್ಬೇಘಟ್ಟ ಗ್ರಾಮದ ಹನುಮಂತರಾಯಪ್ಪ ಮತ್ತು ರಾಮಕ್ಕ ದಂಪತಿಯನ್ನು ಬೆಲ್ಲದಮಡುಗು ಗ್ರಾಮದಲ್ಲಿರುವ ಲಕ್ಷ್ಮಿನಾರಾಯಣ ಎಂಬುವರ ತೋಟದಲ್ಲಿ ಕೆಲವು ತಿಂಗಳಿಂದ ಕೂಡಿ ಹಾಕಿ, ಕೆಲಸ ಮಾಡಿಸಲಾಗುತ್ತಿತ್ತು.

ಈ ಬಗ್ಗೆ ಗ್ರಾಮಸ್ಥರು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ದಂಪತಿ ಮೇಲೆ ದೌರ್ಜನ್ಯ ಎಸಗಲಾಗುತ್ತಿದ್ದು ಅವರನ್ನು ರಕ್ಷಿಸಬೇಕು. ತೋಟದ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದಲಿತಪರ ಸಂಘಟನೆ ಪದಾಧಿಕಾರಿಗಳು ಒತ್ತಾಯಿಸಿದ್ದರು.

ದೂರು ಬಂದ ತಕ್ಷಣ ಮಧುಗಿರಿ ತಹಶೀಲ್ದಾರ್ ಶಿರಿನ್ ತಾಜ್, ಸಿಡಿಪಿಒ ಕಮಲಾ, ಸಮಾಜ ಕಲ್ಯಾಣ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ದಿನೇಶ್ ಬುಧವಾರ ತೋಟಕ್ಕೆ ತೆರಳಿ ದಂಪತಿಯನ್ನು ಬಂಧಮುಕ್ತಗೊಳಿಸಿದ್ದಾರೆ.

'ತೋಟದಲ್ಲಿ ಕೆಲಸ ನೀಡುವುದಾಗಿ ಹೇಳಿ ಕರೆತಂದು ತೋಟದಲ್ಲಿ ಕೂಡಿ ಹಾಕಲಾಗಿದೆ. ತಿಂಗಳಿಗೆ ₹14 ಸಾವಿರ ನೀಡುವುದಾಗಿ ಹೇಳಿ ವರ್ಷದ ಹಿಂದೆ ಕರೆ ತಂದಿದ್ದರು. ಜಮೀನಿನ ಗೇಟ್‌ಗೂ ಜಮೀನಿನ ಮಾಲೀಕ ಬೀಗ ಹಾಕಿಕೊಂಡು ಹೋಗಿದ್ದಾರೆ. ಆದರೆ, ಎರಡು ತಿಂಗಳು ಮಾತ್ರ ಸಂಬಳ ನೀಡಿದ್ದು ಹತ್ತು ತಿಂಗಳಿನಿಂದ ಕೂಲಿ ನೀಡದೆ ಕೆಲಸ ಮಾಡಿಸಿಕೊಂಡಿದ್ದಾರೆ' ಎಂದು ಅಧಿಕಾರಿಗಳ ಮುಂದೆ ದಂಪತಿ ಅಳಲು ತೋಡಿಕೊಂಡಿದ್ದಾರೆ.

ದಲಿತಪರ ಸಂಘಟನೆ ಪದಾಧಿಕಾರಿಗಳ ಸಭೆ ನಡೆಸಿದ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ತೋಟದ ಮಾಲೀಕ ಬೆಂಗಳೂರಿನ ಲಕ್ಷ್ಮಿನಾರಾಯಣ ವಿರುದ್ಧ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ದಂಪತಿಗೆ ಕಚೇರಿಯಲ್ಲಿ ಜೀತಮುಕ್ತಿ ಪತ್ರ ನೀಡಲಾಯಿತು.

ಜೀವಿಕ ಸಂಘಟನೆಯ ಮಂಜುನಾಥ್, ಸಂಜೀವ ಮೂರ್ತಿ, ಬೆಲ್ಲದಮಡುಗು ಭರತ್ ಕುಮಾರ್, ಶಿವಕುಮಾರ್, ಸಣ್ಣಲಿಂಗಪ್ಪ, ರತ್ನಮ್ಮ, ದಲಿತ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹಾರಾಜು ಹಾಜರಿದ್ದರು.

ಅತಿಥಿ ಉಪನ್ಯಾಸಕರ ಆಯ್ಕೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಕಡ್ಡಾಯಗೊಳಿಸಬೇಕು ಎನ್ನುವ ಹೈಕೋರ್ಟ್ ಸೂಚನೆ 2024–25ನೇ ಸಾಲಿನ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಗೆ ತೊಡಕಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯುಜಿಸಿ ನಿಗದಿ ಮಾಡಿರುವ ಅರ್ಹತೆಗಳನ್ನೇ ಅತಿಥಿ ಉಪನ್ಯಾಸಕರ ಆಯ್ಕೆಗೂ ಅನ್ವಯಿಸಬೇಕು ಎಂದು ಕೋರ್ಟ್ ಹೇಳಿತ್ತು. ಹಾಗಾಗಿ, ನೇಮಕಾತಿ ಪ್ರಕ್ರಿಯೆಯನ್ನು ಕಾಲೇಜು ಶಿಕ್ಷಣ ಇಲಾಖೆ ತಾತ್ಕಾಲಿಕವಾಗಿ ತಡೆ ಹಿಡಿದಿದೆ.

'ಅತಿಥಿ ಉಪನ್ಯಾಸಕರಿಗೂ ಯುಜಿಸಿ ನಿಯಮ ಕಡ್ಡಾಯ ಮಾಡಲು ಹೈಕೋರ್ಟ್ ಸೂಚಿಸಿದೆ. ಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಬೇಕೋ ಅಥವಾ ಯುಜಿಸಿ ಅರ್ಹತೆ ಪರಿಗಣಿಸಿ ಮತ್ತೆ ಅರ್ಜಿ ಕರೆಯಬೇಕೋ ಎನ್ನುವ ಕುರಿತು ಸಚಿವರು, ಉನ್ನತಾಧಿಕಾರಿಗಳ ಜತೆ ಚರ್ಚಿಸಲಾಗುವುದು' ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಜಿ. ಜಗದೀಶ್ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜೊತೆಗೆ ಎನ್ಇಟಿ ಇಲ್ಲವೇ ಕೆ-ಸೆಟ್ ತೇರ್ಗಡೆಯಾಗಿರಬೇಕು ಅಥವಾ ಪಿಎಚ್.ಡಿ ಪದವಿ ಪಡೆದಿರಬೇಕು. ರಾಜ್ಯದ ಅತಿಥಿ ಉಪನ್ಯಾಸಕರೂ ಈ ಎಲ್ಲ ಅರ್ಹತೆ ಹೊಂದಬೇಕು ಎನ್ನುತ್ತದೆ ಯುಜಿಸಿ ನಿಯಮ.

ಕೆಲ ವರ್ಷಗಳ ಹಿಂದೆಯೇ ಉನ್ನತ ಶಿಕ್ಷಣ ಇಲಾಖೆ ರಾಜ್ಯದಲ್ಲೂ ಇದೇ ಮಾನದಂಡ ನಿಗದಿ ಮಾಡಿತ್ತು. ಆದರೆ, ಸರ್ಕಾರಕ್ಕೆ ಮನವಿ ಮಾಡಿದ್ದ ಅತಿಥಿ ಉಪನ್ಯಾಸಕರ ಸಂಘಟನೆಗಳು, 'ದಶಕಗಳಿಂದ ಕೆಲಸ ಮಾಡುತ್ತಿರುವ ಶೇ 80ರಷ್ಟು ಅತಿಥಿ ಉಪನ್ಯಾಸಕರು ಸ್ನಾತಕೋತ್ತರ ಪದವಿಯನ್ನಷ್ಟೇ ಪಡೆದಿದ್ದಾರೆ. ಕಡಿಮೆ ಗೌರವಧನ ಪಡೆದು ವಾರಕ್ಕೆ ಕೇವಲ ಎಂಟು ಗಂಟೆ ಬೋಧನಾ ಅವಧಿ ನಿರ್ವಹಿಸುತ್ತಿರುವುದರಿಂದ, ಯುಜಿಸಿ ನಿಯಮಗಳನ್ನು ಅನ್ವಯಿಸಬಾರದು' ಎಂದು ಕೋರಿದ್ದವು. ಹಾಗಾಗಿ, 2025ರ ಜನವರಿ 13ರವರೆಗೂ ಅವಕಾಶ ನೀಡಲಾಗಿತ್ತು. ಈಗ ಕೋರ್ಟ್ ನೀಡಿರುವ ಆದೇಶದಿಂದ ನಾಲ್ಕು ತಿಂಗಳ ಅವಕಾಶವೂ ಇಲ್ಲವಾಗಿದೆ.

ಅಂಕಿ ಅಂಶಗಳು

10,600 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಅತಿಥಿ ಉಪನ್ಯಾಸಕರು

55% ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರ ಪ್ರಮಾಣ

5,890 ಆದೇಶ ಜಾರಿಯಾದರೆ ಕೆಲಸ ಕಳೆದುಕೊಳ್ಳುವ ಅತಿಥಿ ಉಪನ್ಯಾಸಕರು

ಸಿ.ಟಿ.ರವಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿ ಧಾರ್ಮಿಕ ದ್ವೇಷ ಹರಡಲು ಪ್ರಯತ್ನಿಸಿದ ಮತ್ತು ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ' ಎಂಬ ಆರೋಪದಡಿ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ವಿರುದ್ಧದ ವಿಚಾರಣಾ ನ್ಯಾಯಾಲಯದಲ್ಲಿನ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಪಶ್ಚಿಮಘಟ್ಟದಲ್ಲಿ ಪರಿಸರ ಸೂಕ್ಷ್ಮ ಪ್ರದೇಶ ಘೋಷಣೆ ಕುರಿತ ವರದಿ • ಸಚಿವ ಸಂಪುಟ ನಿರ್ಧಾರ

ಕಸ್ತೂರಿ ರಂಗನ್ ವರದಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮಘಟ್ಟದಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು ಘೋಷಿಸುವ ಬಗ್ಗೆ ಡಾ.ಕಸ್ತೂರಿ ರಂಗನ್ ವರದಿ ಆಧರಿಸಿದ ಕರಡು ಅಧಿಸೂಚನೆಯನ್ನು ತಿರಸ್ಕರಿಸಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಈ ಹಿಂದಿನ ಬಿಜೆಪಿ ಸರ್ಕಾರ ವರದಿಯನ್ನು ತಿರಸ್ಕರಿಸಿ ಕೈಗೊಂಡಿದ್ದ ನಿರ್ಣಯವನ್ನೇ ಮುಂದುವರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದರು.

ಪಶ್ಚಿಮಘಟ್ಟ ಪ್ರದೇಶದಲ್ಲಿ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಲು ಕೇಂದ್ರ ಸರ್ಕಾರವು 2024ರ ಜುಲೈ 31ರಂದು ಆರನೇ ಕರಡು ಅಧಿಸೂಚನೆ ಹೊರಡಿಸಿತ್ತು. 60 ದಿನಗಳಲ್ಲಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸುವಂತೆ ರಾಜ್ಯಗಳಿಗೆ ಸೂಚಿಸಿತ್ತು ಎಂದು ಅವರು ಹೇಳಿದರು.

ಕಸ್ತೂರಿರಂಗನ್ ವರದಿಯು 20,668 ಚ.ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಿತ್ತು. ಇದರಲ್ಲಿ ಆಗಿದ್ದ ಕೆಲವು ಲೋಪಗಳನ್ನು ತಿದ್ದುಪಡಿ ಮಾಡಿದಾಗ, 19,252.70 ಚ.ಕಿ.ಮೀ. ಪರಿಸರ ಸೂಕ್ಷ್ಮ ಎಂಬ ತೀರ್ಮಾನಕ್ಕೆ ಬರಲಾಗಿತ್ತು. ರಾಜ್ಯದ ವಿವಿಧ ಅರಣ್ಯ ಕಾನೂನುಗಳ ಅಡಿಯಲ್ಲಿ ಈಗಾಗಲೇ 16,164 ಚದರ ಕಿ.ಮೀ. ಅರಣ್ಯ ಪ್ರದೇಶವನ್ನು ಸಂರಕ್ಷಿಸಲಾಗುತ್ತಿದೆ. ಆದ ಕಾರಣ ಕಸ್ತೂರಿರಂಗನ್ ವರದಿ ತಿರಸ್ಕರಿಸಲಾಗಿದೆ ಎಂದು ಪಾಟೀಲ ವಿವರಿಸಿದರು.

ಸಂಪುಟದ ಪ್ರಮುಖ ತೀರ್ಮಾನಗಳು:

- ವಿಧಾನಪರಿಷತ್ತಿಗೆ ಇಬ್ಬರು ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವ ಬಗ್ಗೆ ಮುಖ್ಯಮಂತ್ರಿ ಅವರಿಗೆ ಅಧಿಕಾರ.
- ಮೈಸೂರು ಜಿಲ್ಲೆ ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಿದುರುಗೂಡು ಗ್ರಾಮದಿಂದ ರಾಜ್ಯ ಹೆದ್ದಾರಿ–57 ಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಬಿನಿ ನದಿಗೆ ಅಡ್ಡಲಾಗಿ ₹29.35 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣಕ್ಕೆ ಅಸ್ತು.
- ದಕ್ಷಿಣಕನ್ನಡ ಜಿಲ್ಲೆ ಹ್ಯಾಟ್–ಹಿಲ್‌ನಲ್ಲಿ ನ್ಯಾಯಾಂಗ ಅಧಿಕಾರಿಗಳ ವಸತಿ ನಿಲಯ ಕಟ್ಟಡಗಳ ನಿರ್ಮಾಣದ ₹11.70 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ.
- ಶಿರಸಿ ತಾಲ್ಲೂಕು ಚಿಪಗಿ ಗ್ರಾಮದಲ್ಲಿ ಡಿಯೊಸಿಸ್ ಎಜುಕೇಷನ್ ಸೊಸೈಟಿಗೆ ಗುತ್ತಿಗೆ ಆಧಾರದಲ್ಲಿ ನೀಡಿರುವ 5 ಎಕರೆ 12 ಗುಂಟೆ ಜಮೀನನ್ನು ಕಾಯಂ ಆಗಿ ಮಂಜೂರು ಮಾಡಲು ತೀರ್ಮಾನ.
- ಬೆಂಗಳೂರು ದಕ್ಷಿಣ ತಾಲ್ಲೂಕಿನ ಹೊಸಕೆರೆಹಳ್ಳಿ ಗ್ರಾಮದಲ್ಲಿ ಕಾಳಿದಾಸ ಮತ್ತು ಸಂಗೊಳ್ಳಿ ರಾಯಣ್ಣ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘಕ್ಕೆ 20 ಗುಂಟೆ ಜಮೀನು ನೀಡಲು ಸಮ್ಮತಿ.

ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣಕ್ಕೆ ₹200 ಕೋಟಿ

ರಾಜ್ಯ ವಿಪತ್ತು ನಿರ್ವಹಣಾ ನಿಧಿ ಅಡಿ ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣ ಮತ್ತು ಶಾಶ್ವತ ಪರಿಹಾರಕ್ಕಾಗಿ ರೂಪಿಸಿರುವ ₹200 ಕೋಟಿ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ಯೋಜನೆಯ ಮೂಲಕ ಪ್ರವಾಹದ ನೀರನ್ನು ಸದ್ಬಳಕೆ ಮಾಡಲು ಕಾರ್ಯಕ್ರಮ ರೂಪಿಸಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ ವಿವರಿಸಿದರು.

ಕಸ್ತೂರಿ ರಂಗನ್ ವರದಿ: ತೀರ್ಮಾನಕ್ಕೆ ಸ್ವಾಗತ

ಬೆಂಗಳೂರು: ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರ ಸರ್ಕಾರ ಹೊರಡಿಸಿದ ಕರಡು ಅಧಿಸೂಚನೆ

ತಿರಸ್ಕರಿಸಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಗುರುವಾರ ನಿರ್ಧಾರ ಕೈಗೊಂಡಿರುವುದನ್ನು ಮಲೆನಾಡು ಕರಾವಳಿ ಜನಪರ ಒಕ್ಕೂಟ ಸ್ವಾಗತಿಸುತ್ತದೆ ಎಂದು ಮಲೆನಾಡು ಕರಾವಳಿ ಜನಪರ ಒಕ್ಕೂಟದ ರಾಜ್ಯ ಸಂಚಾಲಕ ಅನಿಲ್ ಹೊಸಕೊಪ್ಪ ಹೇಳಿದ್ದಾರೆ.

ಐಐಟಿ ಮಾದರಿಯಲ್ಲಿ ಯುವಿಸಿಇ ಅಭಿವೃದ್ಧಿಗೆ ₹ 500 ಕೋಟಿ

ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು (ಯುವಿಸಿಇ) ₹500 ಕೋಟಿ ವೆಚ್ಚದಲ್ಲಿ ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸುಮಾರು 50 ಎಕರೆ ಪ್ರದೇಶದಲ್ಲಿ ಐಐಟಿ ಮಾದರಿಯಲ್ಲಿ ಯುವಿಸಿಇ ಅಭಿವೃದ್ಧಿಪಡಿಸಲು ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗುವುದು. ಇದನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುವುದು. ಅಲ್ಲದೇ, ಹಳೆಯ ವಿದ್ಯಾರ್ಥಿಗಳಿಂದ ದೇಣಿಗೆ ಮತ್ತು ಇತರ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಹಯೋಗದಿಂದ ಹೆಚ್ಚುವರಿ ಅನುದಾನ ಸಂಗ್ರಹಿಸಲು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.



ಪುನೀತ್ ದೇವಾಲಯ

ಹಾವೇರಿ ತಾಲ್ಲೂಕಿನ ಯಲಗಚ್ಚ ಗ್ರಾಮದಲ್ಲಿ ಗುರುವಾರ ದಿ.ಪುನೀತ್ ರಾಜ್‌ಕುಮಾರ್ ದೇವಾಲಯವನ್ನು ಉದ್ಘಾಟಿಸಿದ ಬಳಿಕ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಪ್ರತಿಮೆಯನ್ನು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಲೋಕಾಯುಕ್ತ ನೋಟಿಸ್ ಬಂದಿಲ್ಲ: ಎಚ್. ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಂಗೇನಹಳ್ಳಿ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ ಎಂದು ಕೇಂದ್ರ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾನು ಕದ್ದು ಮುಚ್ಚಿ ಎಲ್ಲಿಗೂ ಓಡಿ ಹೋಗುವುದಿಲ್ಲ. ಪ್ರಕರಣದ ಸಂಬಂಧ ಈವರೆಗೆ ಯಾರೂ ನನ್ನನ್ನು ಸಂಪರ್ಕಿಸಿಲ್ಲ. ಕಾಂಗ್ರೆಸ್ ಸರ್ಕಾರವು ಸುಳ್ಳು ಹೇಳಿಕೆಗಳನ್ನು ನೀಡುವ ಮೂಲಕ ಅಪಪ್ರಚಾರ ನಡೆಸುತ್ತಿದೆ' ಎಂದರು.

ಹರಿಯಾಣ ವಿಧಾನಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ಖಂಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿರುವ ಟ್ವೀಟ್‌ಗೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್‌ನವರು ಬಿಜೆಪಿ ಸರ್ಕಾರದ ವಿರುದ್ಧ ಶೇ 40 ಲಂಚ ಆರೋಪ ಮಾಡಿದ್ದರು. ಕಾಂಗ್ರೆಸ್ ಸರ್ಕಾರದಲ್ಲಿ ಶೇ 40ರಷ್ಟು ಲಂಚ ಇದೆ ಎಂದು ತುಮಕೂರಿನ ಗುತ್ತಿಗೆದಾರರೇ ಹೇಳಿದ್ದಾರಲ್ಲ' ಎಂದರು.

ಮೋದಿ ರಾಜೀನಾಮೆ ನೀಡಿದ್ದರಾ?: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ, ಗೋಧ್ರಾ ಹತ್ಯಾಕಾಂಡದ ಸಮಯದಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಇಂದಿನ ಪ್ರಧಾನಿ ನರೇಂದ್ರ ಮೋದಿ ಅವರು ರಾಜೀನಾಮೆ ನೀಡಿದ್ದರಾ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಮೇಲೂ ಆರೋಪಗಳಿವೆ. ಅವರೂ ಜಾಮೀನಿನ ಮೇಲೆ ಇದ್ದಾರೆ. ರಾಜೀನಾಮೆ ನೀಡಿದ್ದಾರೆಯೇ? ನನ್ನ ರಾಜೀನಾಮೆ ಕೇಳುವ ನೈತಿಕತೆ ಬಿಜೆಪಿ, ಜೆಡಿಎಸ್‌ಗೆ ಇಲ್ಲ' ಎಂದರು.

ಸಮಾಜಕಲ್ಯಾಣ ಸಚಿವ ಎಚ್ .ಸಿ. ಮಹದೇವಪ್ಪ ಮಾತನಾಡಿ, 'ಬಡಜನರ ಪರವಾಗಿ ಕೆಲಸ ಮಾಡುತ್ತಿರುವ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ದ್ವೇಷ ಸಾಧಿಸುತ್ತಿದೆ. ಮೊದಲು ಜಾಮೀನಿನ ಮೇಲೆ ಇರುವ ಬಿಜೆಪಿ, ಜೆಡಿಎಸ್‌ನ ಎಲ್ಲರೂ ರಾಜೀನಾಮೆ ನೀಡಲಿ, ನಂತರ ನೈತಿಕತೆ ಬಗ್ಗೆ ಮಾತನಾಡಲಿ' ಎಂದು ಹೇಳಿದರು.

> **ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ತಮ್ಮದೇ ಆದ ಛಾಪು ಹೊಂದಿದ್ದು, ನೈತಿಕತೆ ಆಧಾರದ ಮೇಲೆ ರಾಜೀನಾಮೆ ನೀಡಬೇಕು**
> **ಬಸವರಾಜ ಬೊಮ್ಮಾಯಿ,** ಸಂಸದ

'ತೀರ್ಪು ರಾಜಕೀಯಪ್ರೇರಿತ ಎಂದಿಲ್ಲ'

ಬೆಂಗಳೂರು: 'ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ರಾಜಕೀಯ ಪ್ರೇರಿತ ಎಂಬ ಅರ್ಥದಲ್ಲಿ ನಾನು ಹೇಳಿಲ್ಲ. ಒಂದೊಮ್ಮೆ ಬಾಯಿ ತಪ್ಪಿ ಹೇಳಿದ್ದರೆ ಕ್ಷಮೆ ಯಾಚಿಸಲು ಸಿದ್ಧ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಸ್ಪಷ್ಟಪಡಿಸಿದ್ದಾರೆ.

'ನ್ಯಾಯಾಲಯದ ಬಗ್ಗೆ ನನಗೆ ಅಪಾರ ಗೌರವವಿದೆ. ನ್ಯಾಯಾಲಯದ ತೀರ್ಪಿಗೆ ಎಲ್ಲರೂ ತಲೆಬಾಗಿದ್ದೇವೆ. ಹೈಕೋರ್ಟ್ ತೀರ್ಪು ಬಂದ ನಂತರ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತಿವೆ. ತೀರ್ಪನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿವೆ ಎಂಬುದು ನನ್ನ ಅಭಿಪ್ರಾಯ ಆಗಿತ್ತು' ಎಂದಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ತನಿಖೆಯಾಗಲಿ, ಕಾನೂನು ಹೋರಾಟ ಎದುರಿಸುತ್ತೇನೆ ಎಂದಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್, ಶಾಸಕರು, ಸಚಿವರು ಮುಖ್ಯಮಂತ್ರಿಯ ಜೊತೆಗಿದ್ದು, ಅವರು ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದೂ ಹೇಳಿದ್ದೆ. ಅದನ್ನು ಹೊರತುಪಡಿಸಿ, ನ್ಯಾಯಾಲಯದ ತೀರ್ಪಿನ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ರಾಜಕೀಯಪ್ರೇರಿತ ಆರೋಪ ಇದಾಗಿದೆ ಎಂಬುದೇ ನನ್ನ ವಾದ ಆಗಿತ್ತು' ಎಂದಿದ್ದಾರೆ.

ಜಮೀರ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ: ಟಿ.ಜೆ. ಅಬ್ರಹಾಂ



ಉಡುಪಿ: 'ಸಚಿವ ಜಮೀರ್ ಅಹ್ಮದ್ ಖಾನ್ ಅವರು ಹೈಕೋರ್ಟ್ ತೀರ್ಪನ್ನು 'ರಾಜಕೀಯ ಆದೇಶ' ಎಂದು ಹೇಳಿರುವುದು ಸರಿಯಲ್ಲ. ಅವರ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸುತ್ತೇನೆ' ಎಂದು ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹೈಕೋರ್ಟ್ ತೀರ್ಪು ಬಗ್ಗೆ ಮಾತನಾಡುವುದು ಅಂದರೆ ಹುಡುಗಾಟನಾ. ರಾಜಕಾರಣದಲ್ಲಿ ಭಾಷಣ ಮಾಡಿದ ಹಾಗೆ ಮಾತನಾಡಿದರೆ ಆಗುತ್ತಾ. ನ್ಯಾಯಾಲಯದ ಬಗ್ಗೆ ಭಯ, ಭಕ್ತಿ ಬೇಡವಾ? ಯಾರ ಬಗ್ಗೆ ಮಾತನಾಡುತ್ತಿದ್ದೀರಿ ಗೊತ್ತಿದೆಯಾ?' ಎಂದರು.

'ಜಮೀರ್ ಅವರು ಸಾರಿಗೆ ಸಿಬ್ಬಂದಿ ಹತ್ತಿರ ಮಾತನಾಡಿದ ಹಾಗೆ ಮಾತನಾಡಿದ್ದಾರೆ. ನನ್ನ ಬಗ್ಗೆ ಮಾತನಾಡಲಿ ಪರವಾಗಿಲ್ಲ. ನ್ಯಾಯಾಲಯದ ಬಗ್ಗೆ ಈ ರೀತಿ ಮಾತನಾಡಬಾರದು' ಎಂದು ಹೇಳಿದರು.

'ಈಶ್ವರಪ್ಪ ಮನೆಯಲ್ಲಿ ನಡೆದಿದ್ದು 'ಪ್ರೇಮ ಸಲ್ಲಾಪ'ವೇ?'

ಬೆಂಗಳೂರು: 'ಉಚ್ಚಾಟಿತ ಬಿಜೆಪಿ ನಾಯಕ ಈಶ್ವರಪ್ಪನವರ ಮನೆಯಲ್ಲಿಯೇ ಕುಳಿತು ಆ ಪಕ್ಷದ ಭಿನ್ನಮತೀಯ ಶಾಸಕರು ಸಭೆ ನಡೆಸಿದ್ದಾರೆ. ಅದನ್ನು ಅಂತರ್‌ಕಲಹ ಎಂದು ಕರೆಯದೆ, 'ಪ್ರೇಮ ಸಲ್ಲಾಪ' ಎನ್ನೋಣವೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಹರಿಯಾಣ ಚುನಾವಣಾ ಪ್ರಚಾರದ ವೇಳೆ ತಮ್ಮ ಸರ್ಕಾರವನ್ನು ಟೀಕಿಸಿದ್ದ ಪ್ರಧಾನಿ ನರೇಂದ್ರ ಮೋದಿಗೆ ಅವರು ಪ್ರತಿಕ್ರಿಯೆ ನೀಡಿದ್ದಾರೆ.

'ಕರ್ನಾಟಕದ ಕಾಂಗ್ರೆಸ್‌ನಲ್ಲಿ ಅಂತರ್‌ಕಲಹ ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗಾಳಿಯಲ್ಲಿ ಗುಂಡು ಹೊಡೆದಿದ್ದಾರೆ. ಬಹುಶಃ ಪ್ರಧಾನಿಯವರು ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳಲ್ಲಿರುವ ಪಕ್ಷಗಳ ಹೆಸರಲ್ಲಿ ಗೊಂದಲ ಮಾಡಿಕೊಂಡು, ಬಿಜೆಪಿ ಬದಲಿಗೆ ಕಾಂಗ್ರೆಸ್ ಎಂದು ತಿಳಿದು ಈ ಅಭಿಪ್ರಾಯ ವ್ಯಕ್ತಪಡಿಸಿರಬಹುದು. ಈ ಗೊಂದಲ ನಿವಾರಣೆಗೆ ಅವರು ತಕ್ಷಣ ಸ್ಪಷ್ಟೀಕರಣ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ನಮ್ಮ ಪಕ್ಷದ ಅಂತರ್‌ಕಲಹದ ಬಗ್ಗೆ ಮೋದಿ ಭಾಷಣ ಮಾಡುವ ವೇಳೆಯಲ್ಲಿಯೇ, ಬಿಜೆಪಿಯ ಬಂಡಾಯ ನಾಯಕರು ಕುಮಾರ ಬಂಗಾರಪ್ಪನವರ ಮನೆಯಲ್ಲಿ ಸಭೆ ಸೇರಿ, ವಿಜಯೇಂದ್ರ ಅವರ ಪದಚ್ಯುತಿಗೆ ತಂತ್ರ ರೂಪಿಸುತ್ತಿದ್ದುದು ವಿಪರ್ಯಾಸ. ಬಿಜೆಪಿಯ ರಕ್ತದಲ್ಲಿ ಹೇಗೆ ಕೋಮುವಾದ ಸೇರಿಕೊಂಡಿದೆಯೊ, ಅದೇ ರೀತಿ ಅಂತರ್‌ಕಲಹವೂ ಸೇರಿಕೊಂಡಿದೆ' ಎಂದಿದ್ದಾರೆ.

'ಮೋದಿಯವರೇ, ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯಲು ಹೋಗಬೇಡಿ. ನಮ್ಮ ಪಕ್ಷದ ಅಂತರ್‌ಕಲಹದ ಬಗ್ಗೆ ಚಿಂತೆ ಮಾಡಬೇಡಿ. ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗೆಲ್ಲ ಪೂರ್ಣಾವಧಿ ಮುಗಿಸಿದ್ದೇವೆ. ನಮ್ಮ ಒಳಗೆ ಜಗಳ ಹುಟ್ಟುಹಾಕುವ ನಿಮ್ಮೆಲ್ಲರ ನಿರಂತರ ಪ್ರಯತ್ನದ ಹೊರತಾಗಿಯೂ ನಾವೆಲ್ಲ ಒಗ್ಗಟ್ಟಾಗಿದ್ದೇವೆ' ಎಂದಿದ್ದಾರೆ.

ರಾಜ್ಯಪಾಲರಿಗೆ ಮತ್ತೆ ಸಡ್ಡು

ಒಂದನೇ ಪುಟದಿಂದ...

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, 'ರಾಜಭವನದ ಸರಣಿ ಪತ್ರ' ಕುರಿತು ಚರ್ಚೆ ನಡೆಯಿತು. 'ರಾಜಭವನದಿಂದ ಬರುವ ಪತ್ರಗಳ ವಿಷಯಗಳ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಬೇಕು. ಅಲ್ಲಿ ತೆಗೆದುಕೊಳ್ಳುವ ತೀರ್ಮಾನವನ್ನಷ್ಟೇ ರಾಜ್ಯಪಾಲರಿಗೆ ಉತ್ತರವಾಗಿ ನೀಡಬೇಕು' ಎಂಬ ನಿರ್ಣಯವನ್ನು ಸಚಿವ ಸಂಪುಟ ಸಭೆ ತೆಗೆದುಕೊಂಡಿತು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಈ ಕುರಿತು ವಿವರ ನೀಡಿದರು.

'ಪತ್ರ ಬರೆದು ನಾಳೆಯೇ ಉತ್ತರ ಕೊಡಿ, ನಾಳಿದ್ದು ಕೊಡಿ ಎನ್ನುತ್ತಿದ್ದಾರೆ. ಇವೆಲ್ಲವನ್ನು ಸಭೆಯಲ್ಲಿ ಚರ್ಚಿಸಿ ಈ ತೀರ್ಮಾನಕ್ಕೆ ಬಂದಿದ್ದೇವೆ. ಇಲ್ಲಿಯವರೆಗೆ ರಾಜ್ಯಪಾಲರಿಂದ ಬರುತ್ತಿದ್ದ ಪತ್ರಗಳಿಗೆ ಮುಖ್ಯ ಕಾರ್ಯದರ್ಶಿ ಅಥವಾ ಸಂಬಂಧಪಟ್ಟ ಅಧಿಕಾರಿಗಳು ನೇರವಾಗಿ ಉತ್ತರಿಸುತ್ತಿದ್ದರು. ಇನ್ನು ಮುಂದೆ ಅಧಿಕಾರಿಗಳು ನೇರವಾಗಿ ಉತ್ತರಿಸುವಂತಿಲ್ಲ' ಎಂದು ಹೇಳಿದರು.

'ಎಚ್.ಡಿ.ಕುಮಾರಸ್ವಾಮಿ, ಮುರುಗೇಶ ನಿರಾಣಿ, ಶಶಿಕಲಾ ಜೊಲ್ಲೆ ಮತ್ತು ಜನಾರ್ದನ ರೆಡ್ಡಿ ಅವರ ವಿರುದ್ಧದ ಪ್ರಕರಣಗಳಿಗೆ ಅಭಿಯೋಜನೆ ನೀಡುವುದಕ್ಕೆ ಸಂಬಂಧಿಸಿದ ಕಾಗದ ಪತ್ರಗಳ ಮಾಹಿತಿ ಸೋರಿಕೆ ಮಾಡಿದ್ದು ಯಾರು ಎಂದು ರಾಜ್ಯಪಾಲರು ಪ್ರಶ್ನಿಸಿದ್ದರು. ಅಲ್ಲದೇ, ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದು ತನಿಖೆ ನಡೆಸುವಂತೆಯೂ ಸೂಚಿಸಿದ್ದರು' ಎಂದು ಹೇಳಿದರು.

'ಈ ಪ್ರಕರಣದ ಬಗ್ಗೆ ವಿಶೇಷ ತನಿಖಾ ದಳದ ಪೊಲೀಸ್ ಮಹಾ ನಿರ್ದೇಶಕರು ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ಅದರ ಪ್ರಕಾರ, ಅಭಿಯೋಜನೆಗೆ ಕೋರಿ ಸಲ್ಲಿಕೆಯಾಗಿದ್ದ ಕಾಗದ ಪತ್ರಗಳು ಎಂಟು ತಿಂಗಳವರೆಗೆ ರಾಜಭವನದ ವಶದಲ್ಲೇ ಇವೆ. ಆ ರೀತಿ ಕಾಗದ ಪತ್ರಗಳನ್ನು ಉಳಿಸಿಕೊಳ್ಳುವುದು ಭ್ರಷ್ಟಾಚಾರ ಕಾಯ್ದೆಯ ಉಲ್ಲಂಘನೆ. ರಾಜಭವನದಿಂದಲೇ ಕಾಯ್ದೆಯ ಉಲ್ಲಂಘನೆ ಆಗಿದೆ' ಎಂದು ಹೇಳಿದರು.

'ಈ ಮಾಹಿತಿ ಮಾಧ್ಯಮವೊಂದಕ್ಕೆ ಸೋರಿಕೆ ಆಗಿದ್ದೇ ರಾಜಭವನದಿಂದ ಎಂಬುದು ತನಿಖೆಯಿಂದ ಗೊತ್ತಾಗಿದೆ. ರಾಜಭವನದ ಸಚಿವಾಲಯಕ್ಕೆ ಸಂಬಂಧಪಟ್ಟಂತೆ ಯಾವ ಹಂತದಲ್ಲಿ ಮಾಹಿತಿ ಸೋರಿಕೆ ಆಗಿದೆ ಮತ್ತು ದಾಖಲೆ ಬಹಿರಂಗಗೊಂಡಿವೆ ಎಂಬ ಬಗ್ಗೆ ಇನ್ನಷ್ಟು ತನಿಖೆ ನಡೆಸಲು ತಮಗೆ ಅನುಮತಿ ನೀಡಬೇಕೆಂದು ಪೊಲೀಸ್ ಮಹಾ ನಿರ್ದೇಶಕರು ಕೋರಿದ್ದಾರೆ' ಎಂದು ಅವರು ವಿವರಿಸಿದರು.

'ರಾಜ್ಯಪಾಲರು ಮೇಲಿಂದ ಮೇಲೆ ಸರ್ಕಾರವೇ ಮಾಹಿತಿ ಸೋರಿಕೆ ಮಾಡಿದ್ದು ಎಂಬಂತೆ ಹೇಳಿದ್ದಾರೆ. ಕಾನೂನುಬಾಹಿರವಾಗಿ ಕಾಗದ ಪತ್ರಗಳನ್ನು ಇಟ್ಟುಕೊಂಡಿದ್ದು ಅಲ್ಲದೇ, ಸಿದ್ದರಾಮಯ್ಯ ಅವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿದ್ದಾರೆ' ಎಂದು ಹೇಳಿದರು.

> **ರಾಜ್ಯಪಾಲರು ಪದೇ ಪದೇ ಪತ್ರ ಬರೆದು ಮಾಹಿತಿ ಮತ್ತು ವಿವರಣೆಗಳನ್ನು ಕೇಳುವ ಮೂಲಕ ಅಸಹನೆಯ ವರ್ತನೆ ತೋರಿಸುತ್ತಿದ್ದಾರೆ**
> **ಎಚ್.ಕೆ. ಪಾಟೀಲ**
> ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ರಾಜಭವನ ಅಧಿಕಾರಿಗಳ ವಿಚಾರಣೆಗೆ ಅನುಮತಿ ಕೋರಿಕೆ

ಒಂದನೇ ಪುಟದಿಂದ...

'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಪ್ರಕಾರ, ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿದ ಪ್ರಸ್ತಾವಗಳನ್ನು ನಾಲ್ಕು ತಿಂಗಳೊಳಗೆ ವಿಲೇವಾರಿ ಮಾಡಬೇಕಿದೆ. ರಾಜ್ಯಪಾಲರ ಸಚಿವಾಲಯವು ಕಡತವನ್ನು ಎಂಟು ತಿಂಗಳಿಗೂ ಹೆಚ್ಚು ಬಾಕಿ ಇರಿಸಿಕೊಂಡಿದ್ದು ಕಾಯ್ದೆಯ ಉಲ್ಲಂಘನೆ. ಎಂಟು ತಿಂಗಳಿನಿಂದ ರಾಜಭವನದ ಸಚಿವಾಲಯದಲ್ಲಿ ಇದ್ದ ಕಡತದ ಮಾಹಿತಿ ಹೇಗೆ ಸೋರಿಕೆ ಆಗಿದೆ ಎಂಬುದನ್ನು ತನಿಖೆ ನಡೆಸುವ ಅಗತ್ಯವಿದೆ' ಎಂದು ಉಲ್ಲೇಖಿಸಿದ್ದಾರೆ.

'ರಾಜಭವನ ಮತ್ತು ಎಸ್‌ಐಟಿ ಕಚೇರಿ ಎರಡೂ ಬೆಂಗಳೂರಿನಲ್ಲೇ ಇವೆ. ರಾಜಭವನದ ಸಚಿವಾಲಯದಿಂದ ಜುಲೈ 29ರಂದು ಬರೆದ ಪತ್ರವು ಆಗಸ್ಟ್ 8ರಂದು ಎಸ್‌ಐಟಿ ಕಚೇರಿಗೆ ತಲುಪಿದೆ. ಬೆಂಗಳೂರಿನಲ್ಲೇ ಪತ್ರ ವಿಲೇವಾರಿಗೆ ಹತ್ತು ದಿನ ಆಗಿದೆ. ಈ ಬಗ್ಗೆಯೂ ಸ್ಪಷ್ಟತೆ ಪಡೆಯಬೇಕಿದೆ. ಮಾಹಿತಿ ಸೋರಿಕೆಯ ಮೂಲವನ್ನು ಪತ್ತೆಹಚ್ಚಲು ರಾಜಭವನದ ಸಚಿವಾಲಯದಲ್ಲಿ ತನಿಖೆ ನಡೆಸಬೇಕಿದೆ. ತನಿಖೆಗೆ ಅನುಮತಿ ನೀಡಬೇಕು' ಎಂದು ಎಸ್‌ಐಟಿ ಐಜಿಪಿ ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರನ್ನು ಕೋರಿದ್ದಾರೆ.

ಜ್ಞಾನ, ಆರೋಗ್ಯ, ನಾವೀನ್ಯ ಮತ್ತು ಸಂಶೋಧನಾ ವಲಯಗಳ ನೆಲೆ

5,800 ಎಕರೆ 'ಕ್ವಿನ್ ಸಿಟಿ' ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಬಸ್‌ಪೇಟೆ-ದೊಡ್ಡಬಳ್ಳಾಪುರ ನಡುವೆ ಸ್ಯಾಟಲೈಟ್ ಟೌನ್ ವರ್ತುಲ ರಸ್ತೆಗೆ ಹೊಂದಿಕೊಂಡಂತೆ, ಜ್ಞಾನ, ಆರೋಗ್ಯ ಮತ್ತು ಸಂಶೋಧನಾ ನಗರ (ಕ್ವಿನ್ ಸಿಟಿ) ನಿರ್ಮಾಣ ಕಾರ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಚಾಲನೆ ನೀಡಿದರು. 5,800 ಎಕರೆ ವ್ಯಾಪ್ತಿಯಲ್ಲಿ ಈ ನಗರ ತಲೆ ಎತ್ತಲಿದ್ದು, ಮೊದಲ ಹಂತದಲ್ಲಿ ಎರಡು ಸಾವಿರ ಎಕರೆಯಲ್ಲಿ ಸಾಕಾರಗೊಳ್ಳಲಿದೆ. ಐದು ಲಕ್ಷ ಜನವಸತಿ ನೆಲೆಗೊಳಿಸುವ ಗುರಿಯೊಂದಿಗೆ ಆರಂಭವಾಗುತ್ತಿರುವ ಈ ಪ್ರದೇಶದಲ್ಲಿ ಶೇ 40ರಷ್ಟು ಜಾಗವನ್ನು ಉದ್ಯಾನಗಳಿಗೆ ಮೀಸಲಿಡಲಾಗುತ್ತಿದೆ.

465 ಎಕರೆಯಲ್ಲಿ 0.69 ಮೆಗಾವಾಟ್ ಸಾಮರ್ಥ್ಯದ ಸೌರವಿದ್ಯುತ್ ಘಟಕ ಸ್ಥಾಪನೆಯಾಗಲಿದೆ. 200 ಎಕರೆಯಲ್ಲಿ ವರ್ಷಕ್ಕೆ ಏಳು ಸಾವಿರ ಟನ್ ಹಣ್ಣು-ತರಕಾರಿ ಬೆಳೆಯಲಾಗುತ್ತದೆ. ಶೇಕಡ 50ರಿಂದ 70ರಷ್ಟು ಜಲ ಮರುಪೂರಣ ವ್ಯವಸ್ಥೆಯನ್ನು ನಗರ ಒಳಗೊಂಡಿರುತ್ತದೆ. ಒಟ್ಟು ₹40 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ 'ಕ್ವಿನ್ ಸಿಟಿ' ನಿರ್ಮಾಣಕ್ಕೆ ವಿಧಾನಸೌಧದಲ್ಲಿ ಗುರುವಾರ ಚಾಲನೆ ನೀಡಿದರು. ಸಚಿವರಾದ ಪ್ರಿಯಾಂಕ್ ಖರ್ಗೆ, ಎಂ.ಬಿ. ಪಾಟೀಲ, ಎಚ್‌.ಕೆ. ಪಾಟೀಲ, ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್‌.ವಿ. ದೇಶಪಾಂಡೆ, ಸಚಿವರಾದ ಜಮೀರ್ ಅಹಮದ್ ಖಾನ್, ಎಂ.ಸಿ. ಸುಧಾಕರ್, ಆರ್‌.ಬಿ. ತಿಮ್ಮಾಪೂರ ಭಾಗವಹಿಸಿದ್ದರು

> **'ಕ್ವಿನ್ ಸಿಟಿ' ಭಾರತದ ಪಾಲಿಗೆ ಹೊಸ ಭಾಷ್ಯ ಬರೆಯಲಿದೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು, ಸುಸ್ಥಿರ ಬೆಳವಣಿಗೆ ಸಾಧಿಸಲಾಗುತ್ತದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಬೆಂಗಳೂರು ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರಗತಿಗೆ ಅವಕಾಶಗಳಿವೆ. ಸಂಚಾರ ಸಮಸ್ಯೆಗೆ ಪರಿಹಾರ ಕಂಡುಕೊಂಡರೆ ಎಲ್ಲವೂ ಸುಸೂತ್ರ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

> **ಯೋಜನೆಗೆ ₹40 ಸಾವಿರ ಕೋಟಿ ಹೂಡಿಕೆ ಮಾಡುವ ಜತೆಗೆ, ಒಂದು ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯನ್ನೂ ಹೊಂದಲಾಗಿದೆ**
> **ಎಂ.ಬಿ. ಪಾಟೀಲ,** ಕೈಗಾರಿಕಾ ಸಚಿವ

ಹೀಗಿರಲಿದೆ 'ಕ್ವಿನ್ ಸಿಟಿ'

'ಕ್ವಿನ್ ಸಿಟಿ' ಎಂದರೆ ಜ್ಞಾನ, ಆರೋಗ್ಯ, ನಾವೀನ್ಯ ಮತ್ತು ಸಂಶೋಧನೆ ನಡುವಣ ಸಮನ್ವಯ. ಆರ್ಥಿಕ ಬೆಳವಣಿಗೆ ಉತ್ತೇಜಿಸುವುದರ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಮುನ್ನಡೆಸುವುದು. ಅತ್ಯಾಧುನಿಕ ತಂತ್ರಜ್ಞಾನ ಸಂಯೋಜಿಸುವ ಮೂಲಕ ಪರಿಸರ ಸ್ನೇಹಿ ಮೂಲಸೌಲಭ್ಯಗಳ ನೆರವಿನಿಂದ ಸುಸ್ಥಿರ ಜೀವನಶೈಲಿ ಒದಗಿಸುವುದು.

ಭವಿಷ್ಯದ ಅಗತ್ಯಗಳನ್ನು ಪೂರೈಸಲು ವಿಶೇಷ ವಿನ್ಯಾಸ ಮಾಡಿರುವ ಈ ನಗರದ ನೀಲನಕ್ಷೆಯನ್ನು 'ಸ್ಮಾರ್ಟ್ ಲಿವಿಂಗ್' ಪರಿಕಲ್ಪನೆಗೆ ಅನುಗುಣವಾಗಿ ರೂಪಿಸಲಾಗಿದೆ.

ಜ್ಞಾನ ವಲಯ: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡ ಪ್ರಧಾನ ಶಿಕ್ಷಣ ಕೇಂದ್ರ ಸ್ಥಾಪಿಸಲಾಗುತ್ತದೆ. ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಾವಳಿಗಳ ಆಧಾರದಲ್ಲಿ ಕ್ಯಾಂಪಸ್‌ಗಳನ್ನು ನಿರ್ವಹಿಸಲು 500 ಉನ್ನತ ವಿದೇಶಿ ಶಿಕ್ಷಣ ಸಂಸ್ಥೆಗಳನ್ನು ಆಕರ್ಷಿಸಲಾಗುತ್ತದೆ.

ಆರೋಗ್ಯ ವಲಯ: ಜೀವ ವಿಜ್ಞಾನದ (ಲೈಫ್ ಸೈನ್ಸಸ್) ಪಾರ್ಕ್ ಒಳಗೊಂಡಿರುತ್ತದೆ. ಏಷ್ಯಾದ ಪ್ರಮುಖ ಶೈಕ್ಷಣಿಕ ವೈದ್ಯಕೀಯ ಕೇಂದ್ರವಾಗಲಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯಮಟ್ಟದ ಆಸ್ಪತ್ರೆಗಳು ನೆಲೆಗೊಳ್ಳಲಿವೆ.

ನಾವೀನ್ಯತಾ ವಲಯ: ಜೀವ ವಿಜ್ಞಾನ, ಭವಿಷ್ಯದ ಸಂಚಾರ, ಸೆಮಿಕಂಡಕ್ಟರ್, ಸುಧಾರಿತ ಪರಿಕರ, ಆಧುನಿಕ ತಯಾರಿಕೆ, ವೈಮಾಂತರಿಕ್ಷ ಮತ್ತು ರಕ್ಷಣೆ, ಬಾಹ್ಯಾಕಾಶ ತಂತ್ರಜ್ಞಾನದಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ಉದ್ಯಮ ವಲಯಗಳ ನೆಲೆಯಾಗುತ್ತದೆ.

ಸಂಶೋಧನಾ ವಲಯ: ಜೈವಿಕ ಔಷಧ ಮತ್ತು ವೈಜ್ಞಾನಿಕ ಸಂಶೋಧನೆ ಅಗತ್ಯವಾದ ಪ್ರಯೋಗ ಕೇಂದ್ರಗಳು ಮತ್ತು ಸಂಶೋಧನಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತದೆ. ಜಾಗತಿಕ ಜ್ಞಾನ ಆಧಾರಿತ ಆರ್ಥಿಕತೆ, ಸಂಶೋಧನೆಗಳಿಗೆ ಒತ್ತು ನೀಡಲಾಗುತ್ತದೆ.

ಸೇತುವೆ ಕುಸಿತಕ್ಕೆ ದೋಷಪೂರಿತ ಡಿಪಿಆರ್ ಕಾರಣ: ನಿತಿನ್ ಗಡ್ಕರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ವಿವಿಧೆಡೆ ಸೇತುವೆಗಳು ಕುಸಿದ ಹಲವು ಪ್ರಕರಣಗಳಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದ ಸಿಬ್ಬಂದಿಯಿಂದ ಲೋಪವಾಗಿದ್ದು, ಕಾರಣ' ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದರು.

ರಾಜ್ಯ ಲೋಕೋಪಯೋಗಿ ಇಲಾಖೆ, ಇಂಡಿಯನ್ ರೋಡ್ ಕಾಂಗ್ರೆಸ್, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ಅಂತರ ರಾಷ್ಟ್ರೀಯ ರೋಡ್ ಕಾಂಗ್ರೆಸ್ ಜಂಟಿಯಾಗಿ ನಗರದಲ್ಲಿ ಏರ್ಪಡಿಸಿದ್ದ 'ಸೇತುವೆ ಸುರಕ್ಷತೆ' ಕುರಿತ ಅಂತರ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, 'ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಸೇತುವೆಗಳನ್ನು ತಪಾಸಣೆ ಮತ್ತು ನಿರ್ವಹಣೆ ಮಾಡುವ ವ್ಯವಸ್ಥೆ ಇಲ್ಲ' ಎಂದರು. ಇಂಡಿಯನ್ ರೋಡ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಡಿ.ಸಾರಂಗಿ, 'ಮೂರು ವರ್ಷದಲ್ಲಿ ದೇಶದಾದ್ಯಂತ ನಿರ್ಮಾಣ ಹಂತದ 11 ಸೇತುವೆ ಕುಸಿದಿವೆ. ವಿನ್ಯಾಸ ಮತ್ತು ನಿರ್ಮಾಣ ಹಂತದ ಲೋಪವೇ ಇದಕ್ಕೆ ಕಾರಣ' ಎಂದರು.

ಈ ಇಬ್ಬರ ಮಾತುಗಳಿಗೆ ನಿತಿನ್ ಗಡ್ಕರಿ, 'ಡಿಪಿಆರ್ ಸಿದ್ಧಪಡಿಸುವಾಗ ವಿನ್ಯಾಸ, ಬಳಸಬೇಕಿರುವ ಸಾಮಗ್ರಿಗಳ ಗುಣಮಟ್ಟ ನಿರ್ಧಾರ, ವಿನ್ಯಾಸ ಪರಿಷ್ಕರಣೆ, ಅವುಗಳ ಆಧಾರದಲ್ಲಿ ಯೋಜನಾ ವೆಚ್ಚ ನಿರ್ಧರಿಸುವ ಹಂತಗಳಲ್ಲಿ ಲೋಪಗಳಾಗಿವೆ. ಸಂಬಂಧಿತ ಅಧಿಕಾರಿಗಳು, ಡಿಪಿಆರ್ ಸಿದ್ಧಪಡಿಸುವಲ್ಲಿ ನೆರವಾದ ಕಂಪನಿಗಳನ್ನೇ ಹೊಣೆಗಾರಿಕೆ ಮಾಡಬೇಕಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

'ಸೇತುವೆ, ಹೆದ್ದಾರಿ ನಿರ್ಮಾಣದಲ್ಲಿ ಅಂತಹ ಸಾಮಗ್ರಿ ಬಳಸಬಹುದು, ಇಂತಹ ಸಾಮಗ್ರಿ ಬಳಸಬಹುದು ಎಂದು ಅಧಿಕಾರಿಗಳು ನನ್ನ ಬಳಿ ಹೇಳುತ್ತಾರೆ. ನಾನು ಎಂಜಿನಿಯರ್ ಅಲ್ಲ, ಅಧಿಕಾರಿಗಳು ಹೇಳಿದ್ದನ್ನು ನಂಬಿ ಒಪ್ಪಿಗೆ ನೀಡಿ ಬಿಟ್ಟಿರುತ್ತೇನೆ. ಈ ಹಿಂದೆ ಸಚಿವನಾಗಿದ್ದಾಗ ಅಂತಹ ತಪ್ಪು ಮಾಡಿದ್ದೆ. ಅಧಿಕಾರಿಗಳು ಹೇಳಿದರೆಂದು, ಕರಾವಳಿ ಪ್ರದೇಶದಲ್ಲಿ ನಿರ್ಮಿಸಿದ ಸೇತುವೆಗಳಲ್ಲಿ ಹಸಿರು ಲೇಪನ ಇದ್ದ ಕಬ್ಬಿಣವನ್ನು ಬಳಸಲು ಒಪ್ಪಿಗೆ ನೀಡಿದ್ದೆ. ಆ ಸೇತುವೆಗಳು ಬಿದ್ದಿವೆ' ಎಂದರು.

'ಹಳೆಯ ಟೈರ್, ರಬ್ಬರ್, ಪ್ಲಾಸ್ಟಿಕ್ ತ್ಯಾಜ್ಯ ಬಳಸಿ ರೂಪಿಸಿದ ಡಾಂಬರು ಬಳಸಲಾಗುತ್ತಿದೆ. ಸೇತುವೆಗಳ ಗುಣಮಟ್ಟ, ವಿನ್ಯಾಸಕ್ಕೆ ಜಾಗತಿಕ ಮಟ್ಟದ ಸಂಹಿತೆ ರೂಪಿಸಬೇಕಿದೆ' ಎಂದರು.

‘ಧರ್ಮಾತೀತವಾಗಿ ಕಾಯ್ದೆ ಅನ್ವಯ’

ಒಂದನೇ ಪುಟದಿಂದ...

ಪ್ರಕರಣ: ಅರ್ಜಿದಾರ ಮಹಿಳೆ, ‘ಕೌಟುಂಬಿಕ ಹಿಂಸೆಯಿಂದ ಮಹಿಳೆ ಸಂರಕ್ಷಣೆ ಕಾಯ್ದೆ’ಯ ಸೆಕ್ಷನ್ 12ರಡಿ 2015ರ ಫೆಬ್ರುವರಿಯಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮಾನ್ಯ ಮಾಡಿ, ಆಕೆಗೆ ₹ 1 ಲಕ್ಷ ಪರಿಹಾರ ಹಾಗೂ ಮಾಸಿಕ ₹12 ಸಾವಿರ ಜೀವನಾಂಶ ನೀಡುವಂತೆ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಪತಿ ಮೇಲ್ಮನವಿ ಸಲ್ಲಿಸಿದ್ದರು. ಆದರೆ, ನ್ಯಾಯಾಲಯ ಆ ಅರ್ಜಿಯನ್ನು ವಜಾಗೊಳಿಸಿತ್ತು. ಪತಿಯು ಬಹಳ ತಡವಾಗಿ ಮೇಲ್ಮನವಿ ಸಲ್ಲಿಸಿದ್ದರಿಂದ, ಅದನ್ನು ನ್ಯಾಯಾಲಯ ವಜಾಗೊಳಿಸಿತ್ತು ಎಂಬ ಅಂಶವನ್ನು ಸುಪ್ರೀಂ ಕೋರ್ಟ್ ಗಮನಿಸಿದೆ.

ನಂತರ, ಇದೇ ಕಾಯ್ದೆಯ ಸೆಕ್ಷನ್ 25ರಡಿ ಪತಿ ಮತ್ತೊಂದು ಅರ್ಜಿ ಸಲ್ಲಿಸಿದ್ದರು. ಆದೇಶದಲ್ಲಿ ಮಾರ್ಪಾಡು ಕೋರಲು ಈ ಸೆಕ್ಷನ್ ಅವಕಾಶ ನೀಡುತ್ತದೆ. ಆದರೆ, ಈ ಅರ್ಜಿಯನ್ನು ಕೂಡ ಮ್ಯಾಜಿಸ್ಟ್ರೇಟ್ ವಜಾಗೊಳಿಸಿದ್ದರು. ಇದನ್ನು ಪ್ರಶ್ನಿಸಿ ಪತಿ, ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ಮೇಲ್ಮನವಿ ನ್ಯಾಯಾಲಯ, ‘ಪತಿಯ ಅರ್ಜಿಯನ್ನು ಪರಿಗಣಿಸಬೇಕು. ಪತಿ ಮತ್ತು ಪತ್ನಿ ಇಬ್ಬರಿಗೂ ಮತ್ತೊಮ್ಮೆ ಸಾಕ್ಷ್ಯಗಳನ್ನು ಮಂಡಿಸಲು ಅವಕಾಶ ನೀಡಬೇಕು’ ಎಂದು ಮ್ಯಾಜಿಸ್ಟ್ರೇಟ್ ಅವರಿಗೆ ನಿರ್ದೇಶನ ನೀಡಿತ್ತು.

ನ್ಯಾಯಾಲಯದ ಈ ನಿರ್ದೇಶನದ ಬಗ್ಗೆ ತೀವ್ರ ಅಸಮಾಧಾನಗೊಂಡಿದ್ದ ಮಹಿಳೆ, ಇದನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮಹಿಳೆಯ ಅರ್ಜಿಯನ್ನು ಕಳೆದ ವರ್ಷ ಏಪ್ರಿಲ್‌ನಲ್ಲಿ ವಜಾಗೊಳಿಸಿದ್ದ ಹೈಕೋರ್ಟ್, ಕಾಯ್ದೆಯ ಸೆಕ್ಷನ್ 25ರಡಿ ಮಹಿಳೆಯ ಪತಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸುವಂತೆ ಮ್ಯಾಜಿಸ್ಟ್ರೇಟ್ ಅವರಿಗೆ ನಿರ್ದೇಶನ ನೀಡಿತ್ತು.

ಬಿಲ್ಕಿಸ್ ಬಾನು ಪ್ರಕರಣ: ಬಹಿರಂಗ ವಿಚಾರಣೆಗೆ ಸುಪ್ರೀಂ ಕೋರ್ಟ್ ನಕಾರ

ಗುಜರಾತ್ ಸರ್ಕಾರದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಲ್ಕಿಸ್ ಬಾನು ಪ್ರಕರಣದ 11 ಮಂದಿ ಅಪರಾಧಿಗಳನ್ನು ಅವಧಿಗೆ ಮೊದಲೇ ಬಿಡುಗಡೆ ಮಾಡಿದ್ದನ್ನು ರದ್ದುಪಡಿಸಿದ ತೀರ್ಪಿನಲ್ಲಿ ‘ತೀರಾ ಅನಗತ್ಯವಾದ’ ಹಾಗೂ ‘ಕಟುವಾದ’ ಮಾತುಗಳನ್ನು ಕೋರ್ಟ್ ಆಡಿತ್ತು ಎಂಬ ತಕರಾರಿನೊಂದಿಗೆ ಗುಜರಾತ್ ಸರ್ಕಾರ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

11 ಮಂದಿ ಅಪರಾಧಿಗಳನ್ನು ಅವಧಿಗೆ ಮೊದಲೇ ಬಿಡುಗಡೆ ಮಾಡಿದ್ದು ಸರಿಯಲ್ಲ ಎಂಬ ತೀರ್ಪನ್ನು ಸುಪ್ರೀಂ ಕೋರ್ಟ್ ಈ ವರ್ಷದ ಜನವರಿ 8ರಂದು ನೀಡಿತ್ತು.



ತೀರ್ಪಿನ ಮರುಪರಿಶೀಲನೆ ಕೋರಿ ಅಪರಾಧಿ ರಮೇಶ್ ರೂಪಾಭಾಯ್ ಚಂದನಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ವಲ್ ಭುಯಾನ್ ಅವರು ಇದ್ದ ವಿಭಾಗೀಯ ಪೀಠವು ವಜಾಗೊಳಿಸಿದೆ. ಅಲ್ಲದೆ, ಅರ್ಜಿಯ ವಿಚಾರಣೆ ಬಹಿರಂಗವಾಗಿ ನಡೆಯಬೇಕು ಎಂಬ ಕೋರಿಕೆಯನ್ನೂ ಪೀಠವು ತಿರಸ್ಕರಿಸಿದೆ.

ಸುಪ್ರೀಂ ಕೋರ್ಟ್‌ನ ನಿಯಮಗಳ ಪ್ರಕಾರ, ಪುನರ್ ಪರಿಶೀಲನಾ ಅರ್ಜಿಗಳನ್ನು ನ್ಯಾಯಮೂರ್ತಿಗಳ ಕೊಠಡಿಯಲ್ಲಿ ಪರಿಶೀಲಿಸಲಾಗುತ್ತದೆ. ಈ ಸಂದರ್ಭದಲ್ಲಿ ವಕೀಲರ ಉಪಸ್ಥಿತಿ ಇರುವುದಿಲ್ಲ.

‘ಪುನರ್ ಪರಿಶೀಲನಾ ಅರ್ಜಿಗಳನ್ನು, ಪ್ರಶ್ನಿಸಲಾಗಿರುವ ತೀರ್ಪನ್ನು ಹಾಗೂ ಅರ್ಜಿಗಳ ಜೊತೆ ಅಡಕವಾಗಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ, ಎದ್ದುಕಾಣುವಂತಹ ತಪ್ಪು ಆಗಿಲ್ಲ, ಪುನರ್ ಪರಿಶೀಲನಾ ಅರ್ಜಿಗಳಲ್ಲಿ ತಥ್ಯವಿಲ್ಲ, ತೀರ್ಪನ್ನು ಮತ್ತೆ ಪರಿಶೀಲಿಸಬೇಕಾದ ಅಗತ್ಯ ಇಲ್ಲ ಎಂಬುದು ನಮಗೆ ಮನವರಿಕೆ ಆಗಿದೆ’ ಎಂದು ಪೀಠವು ಹೇಳಿದೆ.

‘ಗುಜರಾತ್ ಸರ್ಕಾರವು ಆರೋಪಿಗಳ ಜೊತೆ ಶಾಮೀಲಾಗಿತ್ತು’ ಎಂದು ಕೋರ್ಟ್ ಹೇಳಿದ್ದು ತನ್ನ ಬಗ್ಗೆ ಗಂಭೀರ ಪೂರ್ವಗ್ರಹ ಮೂಡುವಂತೆ ಮಾಡಿದೆ ಎಂದು ಸರ್ಕಾರವು ಹೇಳಿತ್ತು.

ತೀರ್ಪಿನಲ್ಲಿ ಹಲವು ದೋಷಗಳು ಇವೆ ಎಂದು ಗುಜರಾತ್ ಸರ್ಕಾರವು ತನ್ನ ಅರ್ಜಿಯಲ್ಲಿ ವಾದಿಸಿತ್ತು. ಗುಜರಾತ್ ಸರ್ಕಾರವು ತನ್ನಲ್ಲಿ ಇಲ್ಲದ ಅಧಿಕಾರವನ್ನು ಬೇರೊಬ್ಬರಿಂದ ಕಿತ್ತುಕೊಳ್ಳುವ ಕೆಲಸ ಮಾಡಿದೆ, ವಿವೇಚನಾ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದ್ದನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.

ಆರೋಪಿಯನ್ನು ಜೈಲಿನಲ್ಲಿರಿಸಲು ಕಠಿಣ ಷರತ್ತು ಬಳಸಲು ಅವಕಾಶ ಇಲ್ಲ: ‘ಸುಪ್ರೀಂ’

ನವದೆಹಲಿ: ವಿಚಾರಣೆ ಇಲ್ಲದೆ ಆರೋಪಿಯೊಬ್ಬನನ್ನು ಸೆರೆವಾಸದಲ್ಲಿಯೇ ಇರಿಸುವುದಕ್ಕಾಗಿ ಜಾರಿ ನಿರ್ದೇಶನಾಲಯ(ಇ.ಡಿ) ಜಾಮೀನಿಗೆ ಸಂಬಂಧಿಸಿ ಕಠಿಣ ಷರತ್ತುಗಳನ್ನು ಒಂದು ತಂತ್ರವಾಗಿ ಬಳಸಿಕೊಳ್ಳುವುದಕ್ಕೆ ಸಾಂವಿಧಾನಿಕ ನ್ಯಾಯಾಲಯಗಳು ಅವಕಾಶ ನೀಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮಿಳುನಾಡು ಮಾಜಿ ಸಚಿವ ಹಾಗೂ ಡಿಎಂಕೆ ನಾಯಕ ಸೆಂಥಿಲ್ ಬಾಲಾಜಿ ಅವರಿಗೆ ಜಾಮೀನು ಮಂಜೂರು ಮಾಡಿ ಆದೇಶಿಸಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಜಾಮೀನು ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರು ಇದ್ದ ನ್ಯಾಯಪೀಠ, ಸೆಂಥಿಲ್ ಬಾಲಾಜಿ ಅವರನ್ನು ಬಿಡುಗಡೆ ಮಾಡುವಂತೆ ಆದೇಶಿಸಿದೆ.

₹25 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಇಬ್ಬರ ಶ್ಯೂರಿಟಿ ಒದಗಿಸಬೇಕು, ಸಂತ್ರಸ್ತರನ್ನು ನೇರವಾಗಿ ಇಲ್ಲವೇ ಪರೋಕ್ಷವಾಗಿ ಸಂಪರ್ಕಿಸಬಾರದು ಎಂಬ ಷರತ್ತು ವಿಧಿಸಿದೆ.



ವಿ.ಸೆಂಥಿಲ್ ಬಾಲಾಜಿ

ನೌಕರಿಗಾಗಿ ಹಣ ಹಗರಣದ ಜೊತೆ ನಂಟಿನ ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಕಳೆದ ವರ್ಷ ಜೂನ್ 14ರಂದು ಬಂಧಿಸಿತ್ತು.

‘ಸೆಂಥಿಲ್ ಬಾಲಾಜಿ ಅವರ ಸೆರೆವಾಸ ಮುಂದುವರಿದಲ್ಲಿ, ಅದು ಸಂವಿಧಾನದ 21ನೇ ವಿಧಿ ಅನ್ವಯ ಅವರು ಹೊಂದಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ’ ಎಂದು ನ್ಯಾಯಪೀಠ ಹೇಳಿದೆ. ‘ಇಂತಹ ಪ್ರಕರಣಗಳಲ್ಲಿ, ಸಾಂವಿಧಾನಿಕ ನ್ಯಾಯಾಲಯಗಳು ತಮ್ಮ ಅಧಿಕಾರವನ್ನು ಚಲಾಯಿಸದಿದ್ದಲ್ಲಿ, ಸಂವಿಧಾನದ 21ನೇ ವಿಧಿ ಅಡಿ ವಿಚಾರಣಾಧೀನ ಕೈದಿಗಳು ಹೊಂದಿರುವ ಹಕ್ಕುಗಳನ್ನು ಮೊಟಕುಗೊಳಿಸಿದಂತಾಗುತ್ತದೆ’ ಎಂದೂ ಅಭಿಪ್ರಾಯಪಟ್ಟಿದೆ.

‘ಪ್ರಕರಣಕ್ಕೆ ಸಂಬಂಧಿಸಿ 2 ಸಾವಿರಕ್ಕೂ ಅಧಿಕ ಆರೋಪಿಗಳಿದ್ದು, 600ಕ್ಕೂ ಹೆಚ್ಚು ಜನ ಸಾಕ್ಷಿಗಳಿದ್ದಾರೆ. ಹೀಗಾಗಿ, ಪ್ರಕರಣದ ವಿಚಾರಣೆ ಪೂರ್ಣಗೊಳ್ಳಲು 3–4 ವರ್ಷಗಳು ಅಥವಾ ಇನ್ನೂ ಹೆಚ್ಚು ಸಮಯ ಬೇಕು. ಇನ್ನೊಂದೆಡೆ ಜಾಮೀನು ನಿರಾಕರಿಸುವುದಕ್ಕೂ ಒಂದು ಮಿತಿ ಇದೆ’ ಎಂದು ಪೀಠ ಹೇಳಿದೆ.

ಸ್ವಾಗತ: ಸೆಂಥಿಲ್ ಬಾಲಾಜಿ ಅವರಿಗೆ ಜಾಮೀನು ನೀಡಿರುವುದನ್ನು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸ್ವಾಗತಿಸಿದ್ದಾರೆ.

‘ಬಾಲಾಜಿ ಅವರನ್ನು ಜೈಲಿನಲ್ಲಿಯೇ ಇರಿಸುವ ಮೂಲಕ ಅವರನ್ನು ತುಳಿಯುವ ಯತ್ನಗಳು ನಡೆದಿದ್ದವು. ಆದರೆ, ಈಗ ಅವರು ಹಿಂದಿಗಿಂತಲೂ ಹೆಚ್ಚು ಬಲಿಷ್ಠರಾಗಿ ಹೊರಹೊಮ್ಮಿದ್ದಾರೆ’ ಎಂದು ಹೇಳಿದ್ದಾರೆ.

‘ತುರ್ತು ಪರಿಸ್ಥಿತಿ ಸಂದರ್ಭದಲ್ಲಿಯೂ ಇಷ್ಟೊಂದು ದೀರ್ಘ ಅವಧಿಗೆ ಯಾರಿಗೂ ಸೆರೆವಾಸ ವಿಧಿಸಿರಲಿಲ್ಲ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಾನಹಾನಿ ಪ್ರಕರಣ ಸಂಜಯ್ ರಾವುತ್‌ಗೆ ಸಜೆ

ಪ್ರಜಾವಾಣಿ ವಾರ್ತೆ


ಮುಂಬೈ: ರಾಜ್ಯಸಭೆ ಸದಸ್ಯ, ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ಆಪ್ತ ಸಂಜಯ್ ರಾವುತ್ ಅವರಿಗೆ ಮಾನಹಾನಿ ಪ್ರಕರಣದ ಸಂಬಂಧ ಸ್ಥಳೀಯ ಕೋರ್ಟ್ 15 ದಿನ ಸಾದಾ ಸಜೆ, ₹ 25 ಸಾವಿರ ದಂಡ ವಿಧಿಸಿದೆ.

ಲೋಕಸಭೆಯ ಮಾಜಿ ಸದಸ್ಯ, ಬಿಜೆಪಿ ನಾಯಕ ಡಾ. ಕಿರೀಟ್ ಸೋಮಯ್ಯ ಅವರ ಪತ್ನಿ ಪ್ರೊ. ಮೇಧಾ ಅವರು ರಾವುತ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಮಜಗಾಂವ್‌ನ ಜೆಎಂಎಫ್‌ಸಿ ಕೋರ್ಟ್‌ನ ನ್ಯಾಯಾಧೀಶರಾದ ಆರತಿ ಕುಲಕರ್ಣಿ ಅವರು ಭಾರತೀಯ ದಂಡ ಸಂಹಿತೆ ಸೆಕ್ಷನ್ 500ರ ಅನ್ವಯ ಸಾದಾ ಶಿಕ್ಷೆ ವಿಧಿಸಿ ಆದೇಶಿಸಿದರು.

ಹಿಂದೆಯೇ ರಾವುತ್ ಪರ ವಕೀಲರು ಆದೇಶವನ್ನು ಅಮಾನತಿನಲ್ಲಿ ಇರಿಸಬೇಕು ಹಾಗೂ ಜಾಮೀನು ನೀಡಬೇಕು ಎಂದು ಕೋರುವ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಕೋರ್ಟ್ ಇವುಗಳನ್ನು ಮಾನ್ಯ ಮಾಡಿತು.

ಆ ಪ್ರಕಾರ, ಸಾದಾ ಶಿಕ್ಷೆ ವಿಧಿಸಿರುವ ಆದೇಶವನ್ನು 30 ದಿನ ಅಮಾನತಿನಲ್ಲಿ ಇರಿಸಲಾಗಿದೆ. ‘ಈ ಆದೇಶ ಪ್ರಶ್ನಿಸಿ ಮುಂಬೈ ಸೆಷನ್ಸ್ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿದ್ದೇವೆ’ ಎಂದು ರಾವುತ್ ಪರ ವಕೀಲರು ತಿಳಿಸಿದರು.



ಸಂಜಯ್ ರಾವುತ್

ಏಪ್ರಿಲ್ 2022ರಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರವಿದ್ದಾಗ ರಾವುತ್ ಅವರು, ‘₹ 100 ಕೋಟಿ ಮೊತ್ತದ ಶೌಚಾಲಯ ಹಗರಣದಲ್ಲಿ ಸೋಮಯ್ಯ ಮತ್ತವರ ಕುಟುಂಬ ಭಾಗಿಯಾಗಿದೆ’ ಎಂದು ಆರೋಪಿಸಿದ್ದರು.

ಸೋಮಯ್ಯ ಕುಟುಂಬ ನಡೆಸುತ್ತಿರುವ ‘ಯುವ ಪ್ರತಿಷ್ಠಾನ’ ಸರ್ಕಾರೇತರ ಸಂಘಟನೆ, ಮೀರಾ–ಭಯೆಂದರ್ ನಗರಪಾಲಿಕೆಯಲ್ಲಿನ ಈ ಹಗರಣದಲ್ಲಿ ಭಾಗಿಯಾಗಿದೆ ಎಂದು ದೂರಿದ್ದರು.

ಸೋಮಯ್ಯ ಕುಟುಂಬವನ್ನು ಪ್ರತಿನಿಧಿಸಿದ್ದ ವಕೀಲ ವಿವೇಕಾನಂದ ಗುಪ್ತಾ ಅವರು, ‘ರಾವುತ್ ಅವರ ಹೇಳಿಕೆ ಆಧಾರರಹಿತವಾಗಿದ್ದು, ಕಕ್ಷಿದಾರರ ವಿರುದ್ಧದ ಮಾನಹಾನಿ ಹೇಳಿಕೆಯಾಗಿತ್ತು’ ಎಂದರು.

‘ರಾವುತ್ ಒಬ್ಬ ಹೋರಾಟಗಾರ, ಅವರು ಹೋರಾಟ ಮುಂದುವರಿಸಲಿದ್ದಾರೆ’ ಎಂದು ಶಿವಸೇನಾ ಮುಖ್ಯಸ್ಥ, ಶಾಸಕ ಆದಿತ್ಯ ಠಾಕ್ರೆ ಅವರು ಪ್ರತಿಕ್ರಿಯಿಸಿದರು.

ಎಮರ್ಜೆನ್ಸಿ: ಕೆಲ ಭಾಗ ತೆಗೆದರೆ ಪ್ರಮಾಣಪತ್ರ

ಮುಂಬೈ (ಪಿಟಿಐ): ಪರಿಷ್ಕರಣಾ ಸಮಿತಿ ಶಿಫಾರಸು ಮಾಡಿದಂತೆ ‘ಎಮರ್ಜೆನ್ಸಿ’ ಸಿನಿಮಾದಲ್ಲಿ ಕೆಲ ಭಾಗಗಳನ್ನು ಕಡಿತ ಮಾಡಿದರೆ, ಪ್ರಮಾಣಪತ್ರ ನೀಡಲಾಗುವುದು ಎಂದು ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ಗುರುವಾರ ಬಾಂಬೆ ಹೈಕೋರ್ಟ್‌ಗೆ ತಿಳಿಸಿದೆ.

ನಟ ಕಂಗನಾ ರನೌತ್ ಈ ಸಿನಿಮಾದಲ್ಲಿ ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿ ಪಾತ್ರದಲ್ಲಿ ನಟಿಸಿದ್ದಾರೆ. ಅವರು ಈ ಸಿನಿಮಾದ ನಿರ್ದೇಶನವನ್ನೂ ಮಾಡಿದ್ದಾರೆ. ಸೆಪ್ಟೆಂಬರ್ 6ರಂದು ತೆರೆ ಕಾಣಬೇಕಿದ್ದ ಸಿನಿಮಾ, ಪ್ರಮಾಣಪತ್ರ ಸಿಗದ ಕಾರಣ ಮಂಡಳಿಯೊಂದಿಗೆ ಕಾನೂನು ಹೋರಾಟ ನಡೆಸುತ್ತಿದೆ.

ಈ ಸಿನಿಮಾದಲ್ಲಿ ಸಿಖ್ ಸಮುದಾಯವನ್ನು ತಪ್ಪಾಗಿ ನಿರೂಪಿಸಲಾಗಿದ್ದು, ಐತಿಹಾಸಿಕ ಸಂಗತಿಗಳನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಶಿರೋಮಣಿ ಅಕಾಲಿ ದಳ ಸೇರಿದಂತೆ ಕೆಲ ಸಿಖ್ ಸಂಘಟನೆಗಳು ಸಿನಿಮಾ ಬಿಡುಗಡೆಗೆ ಆಕ್ಷೇಪ ವ್ಯಕ್ತಪಡಿಸಿವೆ.



ಚಲನಚಿತ್ರಕ್ಕೆ ಪ್ರಮಾಣಪತ್ರ ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳದ ಮಂಡಳಿಯನ್ನು ಕಳೆದ ವಾರ ನ್ಯಾಯಮೂರ್ತಿಗಳಾದ ಬಿ.ಪಿ. ಕೊಲಾಬಾವಾಲಾ ಮತ್ತು ಫಿರ್ದೋಷ್ ಪೂನಿವಾಲಾ ಅವರಿದ್ದ ವಿಭಾಗೀಯ ಪೀಠ ತರಾಟೆಗೆ ತೆಗೆದುಕೊಂಡಿತ್ತು. ಸೆ. 25ರೊಳಗೆ ನಿರ್ಧಾರ ತೆಗೆದುಕೊಳ್ಳುವಂತೆ ಮಂಡಳಿಗೆ ನ್ಯಾಯಾಲಯ ಸೂಚಿಸಿತ್ತು.

ಸಿನಿಮಾಗೆ ಪ್ರಮಾಣಪತ್ರ ನೀಡಲು ಮಂಡಳಿಗೆ ನಿರ್ದೇಶನ ನೀಡುವಂತೆ ಈ ಸಿನಿಮಾದ ಸಹ ನಿರ್ಮಾಪಕ ಸಂಸ್ಥೆಯಾದ ಝೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಪೀಠವು ಈ ಕುರಿತ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

ಬಾಲಕಿಗೆ ಅನಾರೋಗ್ಯ ವಿಮಾನ ತುರ್ತು ಭೂಸ್ಪರ್ಶ

ಕೋಲ್ಕತ್ತ (ಪಿಟಿಐ): ವಿಮಾನದಲ್ಲಿ ಬಾಲಕಿಯೊಬ್ಬರು ಅನಾರೋಗ್ಯಕ್ಕೆ ಒಳಗಾದ್ದರಿಂದ, ಬಾಗ್ದಾದ್‌ನಿಂದ ಚೀನಾದ ಗೌಂಗ್‌ಝೌನತ್ತ ತೆರಳುತ್ತಿದ್ದ ಇರಾಕ್‌ನ ವಿಮಾನವೊಂದು ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಬುಧವಾರ ರಾತ್ರಿ ತುರ್ತು ಭೂಸ್ಪರ್ಶ ಮಾಡಿತು.

ವಿಮಾನ ಇಳಿದ ತಕ್ಷಣವೇ ಇರಾಕ್‌ನ ಬಾಲಕಿಯನ್ನು ನಗರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆ ವೇಳೆಗಾಗಲೇ, ಬಾಲಕಿಯು ಮೃತಪಟ್ಟಿದ್ದಳು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ‘ಮೃತರು, ಇರಾಕ್‌ನ ರಾಜಧಾನಿ ಬಾಗ್ದಾದ್‌ನ ಚರ್ ಚಿನಾರ್ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಎಂದು ಗುರುತಿಸಲಾಗಿದೆ’ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

50 ಔಷಧಕ್ಕೆ ಗುಣಮಟ್ಟ ಇಲ್ಲ

ನವದೆಹಲಿ(ಪಿಟಿಐ): ಪ್ಯಾರಾಸಿಟಮೋಲ್, ಪ್ಯಾನ್ ಡಿ, ಮಧುಮೇಹ ನಿಯಂತ್ರಣಕ್ಕೆ ಬಳಸುವ ಮಾತ್ರೆಗಳು ಸೇರಿದಂತೆ 50ಕ್ಕೂ ಹೆಚ್ಚು ಔಷಧಗಳ ಮಾದರಿಗಳ ಪಟ್ಟಿ ಸಿದ್ಧಪಡಿಸಿರುವ ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ (ಸಿಡಿಎಸ್‌ಸಿಒ), ಈ ಮಾದರಿಗಳು ‘ಪ್ರಮಾಣಿತ ಗುಣಮಟ್ಟ’ ಹೊಂದಿಲ್ಲ ಎಂದು ಹೇಳಿದೆ.

ಔಷಧಗಳ ಕುರಿತು ಆಗಸ್ಟ್ ತಿಂಗಳಿಗೆ ಸಂಬಂಧಿಸಿದ ವರದಿಯನ್ನು ಸಿಡಿಎಸ್‌ಸಿಒ ಬಿಡುಗಡೆ ಮಾಡಿದ್ದು, ಈ ಔಷಧಗಳ ಬಗ್ಗೆ ಎಚ್ಚರಿಕೆ ಅಗತ್ಯ ಎಂದು ಹೇಳಿದೆ.

ಔಷಧಗಳ ಗುಣಮಟ್ಟಕ್ಕೆ ಸಂಬಂಧಿಸಿ ಸಿಡಿಎಸ್‌ಸಿಒ, ಪ್ರತಿ ತಿಂಗಳು ವರದಿ ಬಿಡುಗಡೆ ಮಾಡುತ್ತದೆ.

ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ3 ಮಾತ್ರೆಗಳ ಮಾದರಿಗಳು ಕೂಡ ಪ್ರಮಾಣಿತ ಗುಣಮಟ್ಟ ಹೊಂದಿಲ್ಲ. ಅಲ್ಕೆಮ್ ಲ್ಯಾಬರೋಟರೀಸ್, ಹಿಂದೂಸ್ತಾನ ಆ್ಯಂಟಿಬಯೋಟಿಕ್ಸ್ ಲಿಮಿಟೆಡ್, ಹೆಟರೊ ಲ್ಯಾಬ್ಸ್ ಲಿಮಿಟೆಡ್, ಕರ್ನಾಟಕ ಆ್ಯಂಟಿಬಯೋಟಿಕ್ಸ್ ಅಂಡ್ ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್, ಮೆಸ್ಟ್ರ ಫಾರ್ಮಾಸ್ಯೂಟಿಕಲ್ಸ್ ಲಿ., ಪ್ರಿಯಾ ಫಾರ್ಮಾಸ್ಯೂಟಿಕಲ್ಸ್ ಹಾಗೂ ಸ್ಕಾಟ್‌–ಎಡಿಲ್ ಫಾರ್ಮಾಸಿಯಾ ಲಿಮಿಟೆಡ್ ಕಂಪನಿಗಳು ಉತ್ಪಾದಿಸುವ ಔಷಧಗಳ ಕುರಿತು ಈ ವರದಿಯಲ್ಲಿ ಎಚ್ಚರಿಕೆ ನೀಡಲಾಗಿದೆ.

ವರದಿಯಲ್ಲಿನ ಪ್ರಮುಖ ಅಂಶಗಳು

- ಅಧಿಕ ರಕ್ತದೊತ್ತಡ ಚಿಕಿತ್ಸೆಗೆ ಬಳಸುವ ಟೆಲ್ಮಿಸರ್ಟಾನ್ ಮತ್ತು ಅಟ್ರೊಪೈನ್ ಸಲ್ಫೇಟ್, ಆ್ಯಂಟಿಬಯೋಟಿಕ್ ಮಾತ್ರೆಗಳಾದ ಅಮಾಕ್ಸಿಲಿನ್ ಮತ್ತು ಪೊಟ್ಯಾಶಿಯಂ ಕ್ಲಾವುಲನೇಟ್ ಮಾತ್ರೆಗಳು ‘ಪ್ರಮಾಣಿತ ಗುಣಮಟ್ಟ’ ಹೊಂದಿಲ್ಲ
- ಶೆಲ್‌ಕಾಲ್, ವಿಟಮಿನ್ ಸಿ ಸಾಫ್ಟ್‌ಜೆಲ್‌ನೊಂದಿಗಿನ ವಿಟಮಿನ್ ಬಿ ಕಾಂಪ್ಲೆಕ್ಸ್, ವಿಟಮಿನ್ ಸಿ ಮತ್ತು ಡಿ3, ಸಿಪ್ರೊಫ್ಲಾಕ್ಸಾಸಿನ್ ಮಾತ್ರೆಗಳ ಮಾದರಿಗಳು ಸಹ ‘ಪ್ರಮಾಣಿತ ಗುಣಮಟ್ಟ’ ಹೊಂದಿಲ್ಲ
- ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸಗಢ, ಗೋವಾ, ಗುಜರಾತ್, ತಮಿಳುನಾಡು ಸೇರಿ 25 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ‘ಪ್ರಮಾಣಿತ ಗುಣಮಟ್ಟ’ ಹೊಂದಿರದ ಔಷಧಗಳ ಕುರಿತು ಮಾಹಿತಿ ಸಲ್ಲಿಸಿಲ್ಲ



ಮಥುರಾ: ದೇಗುಲಗಳಲ್ಲಿ ‘ಸಾತ್ವಿಕ ಪ್ರಸಾದ’

ಮಥುರಾ (ಪಿಟಿಐ): ಹಣ್ಣು, ಹೂವು, ಪಂಚಮೇವ, ಏಲಕ್ಕಿ, ಸಕ್ಕರೆ ಬಳಸಿ ತಯಾರಿಸಿದ ‘ಪ್ರಾಚೀನ ಶೈಲಿ ಪ್ರಸಾದ’ವನ್ನೇ ಸ್ಥಳೀಯ ದೇವಸ್ಥಾನಗಳಲ್ಲಿ ಭಕ್ತರಿಗೆ ನೀಡಲು ಸ್ಥಳೀಯ ಧಾರ್ಮಿಕ ಸಂಘಟನೆ ನಿರ್ಧರಿಸಿದೆ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಸಿದ್ಧ ಸಿಹಿ ತಿನಿಸುಗಳನ್ನು ಪ್ರಸಾದವಾಗಿ ವಿತರಿಸುವ ಕ್ರಮವನ್ನು ಕೈಬಿಟ್ಟಿದೆ. ಆಂಧ್ರದ ತಿರುಪತಿ ದೇವಸ್ಥಾನದ ಲಡ್ಡು ಕಲಬೆರಕೆ ವಿವಾದದ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ.


ವೃಂದಾವನದಲ್ಲಿ ಬುಧವಾರ ನಡೆದ ಸಭೆಯಲ್ಲಿ ಧರ್ಮ ರಕ್ಷಾ ಸಂಘದ ರಾಷ್ಟ್ರೀಯ ಅಧ್ಯಕ್ಷ ಸೌರಭ್ ಗೌರ್, ‘ದೇಶವ್ಯಾಪಿ ಎಲ್ಲ ದೇಗುಲಗಳಲ್ಲಿ ‘ಪ್ರಸಾದ’ದ ಸ್ವರೂಪದಲ್ಲಿ ಸುಧಾರಣೆ ತರುವ ಅಗತ್ಯವಿದೆ’ ಎಂದರು.

ಶುದ್ಧ, ಸಾತ್ವಿಕ ಪ್ರಸಾದವನ್ನೇ ವಿತರಿಸಲು ಸಭೆ ತೀರ್ಮಾನಿಸಿತು. ದೇಶದ ವಿವಿಧೆಡೆಯೂ ಎಲ್ಲ ಧಾರ್ಮಿಕ ಸಂಘಟನಗಳು ಇಂತಹದೇ ನಿಲುವು ಕೈಗೊಳ್ಳುವುದಕ್ಕೆ ಉತ್ತೇಜನ ನೀಡಲಿದೆ ಎಂದು ಹೇಳೀದರು.

‘ಮಾಜಿ ಸಿ.ಎಂ ಜಗನ್‌ಗೂ ಶಾಪ ತಟ್ಟುತ್ತೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ತಿರುಪತಿಯ ಹಾಗೂ ಹಿಂದೂಗಳ ಶಾಪದಿಂದ ವೈ.ಎಸ್. ರಾಜಶೇಖರ ರೆಡ್ಡಿ ಅವರು ಎಲುಬು ಕೂಡ ಸಿಗದಂತೆ ಸಾವಿಗೀಡಾದರು. ಜಗನ್‌ಮೋಹನ್ ರೆಡ್ಡಿಗೂ ಆ ಶಾಪ ತಟ್ಟುತ್ತದೆ’ ಎಂದು ಶ್ರೀರಾಮ ಸೇನೆ ಸಂಘಟನೆಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಹೇಳಿದರು.



‘ತಿರುಪತಿಯ ಏಳು ಗುಡ್ಡಗಳ ಪೈಕಿ ಐದನ್ನು ವೈ.ಎಸ್. ರಾಜಶೇಖರ ರೆಡ್ಡಿ ಅವರು ಕ್ರೈಸ್ತರಿಗೆ ನೀಡಿದ್ದರು. ಲಾಡು ತಯಾರಿಸಲು ಅವರಿಗೇ ಗುತ್ತಿಗೆ ಕೊಟ್ಟಿದ್ದರು’ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಜಗನ್‌ಮೋಹನ್ ರೆಡ್ಡಿಗೆ ಅಧಿಕಾರ ಕೈತಪ್ಪಿದ್ದು ಇದೇ ಶಾಪ ದಿಂದ. ಪವಿತ್ರ ಪ್ರಸಾದವನ್ನು ಅಪವಿತ್ರಗೊಳಿಸಿದ್ದು ಅಕ್ಷಮ್ಯ. ಮುಂದೆ ಇಂತಹ ಪ್ರಮಾದ ಆಗದಂತೆ ಕೇಂದ್ರ ಹಾಗೂ ಆಂಧ್ರಪ್ರದೇಶ ಸರ್ಕಾರ ಕ್ರಮ ವಹಿಸಬೇಕು’ ಎಂದರು.

‘ದೇವರಿಗೆ ಡ್ರೈಫ್ರೂಟ್ಸ್, ಹಣ್ಣು ಮಾತ್ರ ಅರ್ಪಿಸಿ’

ಪ್ರಯಾಗ್‌ರಾಜ್ (ಪಿಟಿಐ): ‘ಭಕ್ತರು ಇನ್ನು ದೇವರಿಗೆ ಹೊರಗಿನಿಂದ ಖರೀದಿಸಿದ ಸಿಹಿತಿನಿಸು ಬದಲು ತೆಂಗಿನ ಕಾಯಿ, ಹಣ್ಣುಗಳು ಹಾಗೂ ಡ್ರೈಫ್ರುಟ್ಸ್‌ಗಳನ್ನು ಮಾತ್ರ ಅರ್ಪಿಸಬೇಕು’ ಎಂದು ಉತ್ತರ ಪ್ರದೇಶದ ಹಲವು ದೇವಸ್ಥಾನ ಆಡಳಿತ ಮಂಡಳಿಗಳು ಸೂಚಿಸಿವೆ.

ಮಾರಾಟಗಾರರ ವಿವರ ಪ್ರಕಟ ನಿರ್ಧಾರ ಕೈ ಬಿಟ್ಟ ಹಿಮಾಚಲ

ಶಿಮ್ಲಾ (ಪಿಟಿಐ): ‘ರಾಜ್ಯದಲ್ಲಿ ಆಹಾರ, ತಿನಿಸು ಮಾರಾಟಗಾರರು ಅಂಗಡಿಗಳ ಎದುರು ಕಡ್ಡಾಯವಾಗಿ ಗುರುತು ವಿವರ ಪ್ರಕಟಿಸಬೇಕು ಎಂದು ತೀರ್ಮಾನಿಸಿಲ್ಲ’ ಎಂದು ಹಿಮಾಚಲ ಪ್ರದೇಶ ಸರ್ಕಾರ ಪ್ರಕಟಿಸಿದೆ.

ಲೋಕೋಪಯೋಗಿ ಸಚಿವ ವಿಕ್ರಮಾದಿತ್ಯ ಸಿಂಗ್ ಅವರು ಬುಧವಾರ ಈ ಬಗ್ಗೆ ಹೇಳಿಕೆ ನೀಡಿದ್ದರು. ಇದಕ್ಕೆ ವಿರೋಧಪಕ್ಷಗಳಿಂದ ತೀವ್ರ ಆಕ್ಷೇಪ ವ್ಯಕ್ತವಾದ ಹಿಂದೆಯೇ ಸರ್ಕಾರ ಈ ಸ್ಪಷ್ಟನೆ ನೀಡಿದೆ.

‘ಬೀದಿ ಬದಿಯ ಮಾರಾಟಗಾರರು ಮುಖ್ಯವಾಗಿ ಆಹಾರ, ತಿನಿಸುಗಳನ್ನು ಮಾರುವವರು ತಮ್ಮ ಗುರುತು, ವಿವರಗಳಿರುವ ಫಲಕವನ್ನು ಅಂಗಡಿ ಎದುರು ಪ್ರಕಟಿಸುವುದು ಕಡ್ಡಾಯ’ ಎಂದು ಸಿಂಗ್ ಹೇಳಿದ್ದರು.

ಉತ್ತರ ಪ್ರದೇಶದ ಸರ್ಕಾರವು ಕೈಗೊಂಡಿರುವ ನಿರ್ಧಾರದ ರೀತಿಯಲ್ಲಿಯೇ ರಾಜ್ಯದಲ್ಲಿಯೂ ಈ ನಿಯಮ ಜಾರಿಗೊಳಿಸಲು ತೀರ್ಮಾನಿಸಲಾಗಿದೆ ಎಂದು ಸಚಿವರು ಹೇಳಿದ್ದರು.

ಸಚಿವರು ತಮ್ಮ ನಿಲುವನ್ನು ಫೇಸ್‌ಬುಕ್ ಖಾತೆಯಲ್ಲಿ ಪ್ರಕಟಿಸಿದ್ದ ಬಳಿಕ ‘ಇಂಡಿಯಾ’ ಮೈತ್ರಿಕೂಟದ ಹಲವು ಮುಖಂಡರು ತೀವ್ರವಾಗಿ ವಿರೋಧಿಸಿದ್ದರು.

ಆದರೆ, ರಾಜ್ಯದ ವಿರೋಧಪಕ್ಷದ ನಾಯಕ, ಬಿಜೆಪಿ ಮುಖಂಡ ಜೈರಾಮ್ ಠಾಕೂರ್ ಅವರು, ‘ಸಚಿವ ಸಿಂಗ್ ಅವರು ತಮ್ಮ ನಿಲುವಿಗೆ ಬದ್ಧರಾಗಿರಬೇಕು’ ಎಂದು ಒತ್ತಾಯಿಸಿದ್ದರು.

ಬೀದಿ ಬದಿ ಮಾರಾಟಗಾರರಿಗೆ ಅನ್ವಯಿಸುವಂತೆ ನೀತಿ ರೂಪಿಸಲು ಕಳೆದ ವಾರ ವಿಧಾನಸಭೆ ಸ್ಪೀಕರ್ ಕುಲದೀಪ್ ಸಿಂಗ್ ಪಥಾನಿಯ ಅವರು, ಕೈಗಾರಿಕ ಸಚಿವರ ನೇತೃತ್ವದಲ್ಲಿ ಏಳು ಸದಸ್ಯರ ಸಮಿತಿ ರಚಿಸಿದ್ದರು.

ಕಳೆದ ವಾರ ಮಸೀದಿಯೊಂದರ ಅನಧಿಕೃತ ನಿರ್ಮಾಣದ ಭಾಗದ ನೆಲಸಮ ಕಾರ್ಯಾಚರಣೆ ವೇಳೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಆಗ, ಹೊರಗಿನ ಕಾರ್ಮಿಕರ ವಿವರ ನೋಂದಣಿಗೆ ತೀರ್ಮಾನಿಸಲಾಗಿತ್ತು.

ಉತ್ತರ ಪ್ರದೇಶದಲ್ಲಿ ಆಹಾರಗಳಿಗೆ ಉಗುಳುವ, ಮೂತ್ರ ಮಿಶ್ರಣ ಮಾಡಿದ್ದ ಕೆಲ ನಿದರ್ಶನಗಳನ್ನು ಉಲ್ಲೇಖಿಸಿ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ‘ಆಹಾರ ತಿನಿಸುಗಳ ಮಾರಾಟಗಾರರು, ಮಾಲೀಕರು, ವ್ಯವಸ್ಥಾಪಕರು ಅಂಗಡಿ ಎದುರು ಕಡ್ಡಾಯವಾಗಿ ತಮ್ಮ ವಿವರ ಪ್ರಕಟಿಸಬೇಕು’ ಎಂದು ಆದೇಶಿಸಿದ್ದರು.

ಸಚಿವರಿಗೆ ಹೈಕಮಾಂಡ್ ತರಾಟೆ

ನವದೆಹಲಿ: ಅಂಗಡಿಗಳ ಎದುರು ಮಾರಾಟಗಾರರ ವಿವರ ಪ್ರಕಟಿಸಬೇಕು ಎಂಬ ತೀರ್ಮಾನ ಕುರಿತಂತೆ ಕಾಂಗ್ರೆಸ್ ಹೈಕಮಾಂಡ್, ಹಿಮಾಚಲ ಪ್ರದೇಶದ ಸಚಿವರನ್ನು ತರಾಟೆಗೆ ತೆಗೆದುಕೊಂಡಿದೆ.



‘ಇಂಥ ಕ್ರಮ ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾದುದು. ಇಂಥ ಪ್ರಕಟಣೆ ಹೊರಡಿಸಬಾರದು’ ಎಂದು ಸಚಿವ ವಿಕ್ರಮಾದಿತ್ಯ ಸಿಂಗ್ ಅವರನ್ನು ದೆಹಲಿಗೆ ಕರೆಸಿಕೊಂಡು ತಾಕೀತು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಸಚಿವರು ತಮ್ಮ ನಿಲುವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ ಬಳಿಕ ಹಲವು ಮುಖಂಡರು ಹೈಕಮಾಂಡ್‌ಗೆ ದೂರು ನೀಡಿದ್ದರು. ಸಚಿವರ ಹೇಳಿಕೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ ಅವರೂ ಬೇಸರ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕೆಲಸ ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಆರಂಭದಿಂದಲೂ ಶ್ರದ್ಧೆಯಿಂದ, ಸಂಪೂರ್ಣ ಶ್ರಮವಹಿಸಿ ಮಾಡಬೇಕು.

—ಚಾಣಕ್ಯ

ಪೋಕ್ಸೊ ಕಾಯ್ದೆ ಕುರಿತ ತೀರ್ಪು ಆಶಯ ಸ್ಪಷ್ಟಪಡಿಸಿದ ಕೋರ್ಟ್

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ವ್ಯಾಪ್ತಿಯನ್ನು ಸ್ಪಷ್ಟಪಡಿಸುವ ಮೂಲಕ ಸುಪ್ರೀಂ ಕೋರ್ಟ್ ಬಹಳ ಅಗತ್ಯವಾದ ಕೆಲಸ ಮಾಡಿದೆ. ಮಕ್ಕಳ ಲೈಂಗಿಕ ಚಿತ್ರ, ದೃಶ್ಯಗಳನ್ನು ವೀಕ್ಷಿಸುವುದು, ಅಂಥವುಗಳನ್ನು ಹೊಂದಿರುವುದು ಹಾಗೂ ಅವುಗಳನ್ನು ಹೊಂದಿರುವುದರ ಬಗ್ಗೆ ಸಂಬಂಧಪಟ್ಟವರಿಗೆ ವರದಿ ಮಾಡದೇ ಇರುವುದು ಅಪರಾಧ ಎಂಬುದನ್ನು ಕೋರ್ಟ್ ಸ್ಪಷ್ಟಪಡಿಸಿದೆ. ಮಕ್ಕಳ ಲೈಂಗಿಕ ದೃಶ್ಯಗಳನ್ನು ತನ್ನ ಫೋನ್‌ಗೆ ಡೌನ್‌ಲೋಡ್ ಮಾಡಿಕೊಂಡಿದ್ದ 28 ವರ್ಷ ವಯಸ್ಸಿನ ಯುವಕನ ವಿರುದ್ಧದ ಪ್ರಕರಣವನ್ನು ರದ್ದುಮಾಡುವ ಸಂದರ್ಭದಲ್ಲಿ ಮದ್ರಾಸ್ ಹೈಕೋರ್ಟ್, ಅಂತಹ ದೃಶ್ಯಗಳನ್ನು, ಚಿತ್ರಗಳನ್ನು ಡೌನ್‌ಲೋಡ್ ಮಾಡಿ ಇಟ್ಟುಕೊಂಡ ಮಾತ್ರಕ್ಕೆ ಅದು ಅಪರಾಧ ಆಗುವುದಿಲ್ಲ ಎಂದು ಹೇಳಿತ್ತು. ಮದ್ರಾಸ್ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಪೋಕ್ಸೊ ಕಾಯ್ದೆಯ ಸೆಕ್ಷನ್ 15 ಅನ್ನು ಇಡೀ ಕಾಯ್ದೆಯ ಒಟ್ಟಾರೆ ಆಶಯದೊಂದಿಗೆ ಜೋಡಿಸುವ ಕೆಲಸವನ್ನು ಸುಪ್ರೀಂ ಕೋರ್ಟ್ ಮಾಡಿದೆ. ಅಂದರೆ, ಈ ಸೆಕ್ಷನ್‌ನ ವ್ಯಾಪ್ತಿ ದೊಡ್ಡದಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಕಾಯ್ದೆಯ ಸೆಕ್ಷನ್ 15 ಈ ಮೊದಲು, ಮಕ್ಕಳ ಲೈಂಗಿಕ ಚಿತ್ರ, ದೃಶ್ಯಗಳನ್ನು 'ವಾಣಿಜ್ಯ ಉದ್ದೇಶಗಳಿಗೆ ಇರಿಸಿಕೊಳ್ಳುವುದಕ್ಕೆ' ಸೀಮಿತವಾಗಿತ್ತು. ನಂತರ ಅದನ್ನು ವಿಸ್ತರಿಸಿ, ಅಂತಹ ಚಿತ್ರ, ದೃಶ್ಯಗಳ ಬಗ್ಗೆ ಸಂಬಂಧಪಟ್ಟವರಿಗೆ ವರದಿ ಮಾಡದೇ ಇರುವುದು ಹಾಗೂ ಅಂಥವುಗಳನ್ನು ಹಂಚಿಕೊಳ್ಳುವ ಉದ್ದೇಶ ಹೊಂದಿರುವುದನ್ನೂ ಅಪರಾಧದ ವ್ಯಾಪ್ತಿಗೆ ತರಲಾಯಿತು. ಈಗ ಸುಪ್ರೀಂ ಕೋರ್ಟ್, 'ಇಂಟರ್ನೆಟ್ ಮೂಲಕ ವೀಕ್ಷಿಸುವಾಗ ವ್ಯಕ್ತಿಗೆ ಅಂತಹ ವಸ್ತು-ವಿಷಯಗಳ ಮೇಲೆ 'ನಿರಂತರವಾದ ನಿಯಂತ್ರಣ ಇತ್ತು' ಎಂದಾದರೆ, ಅದು ಕೂಡ ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಹೇಳಿರುವ 'ಹೊಂದಿರುವಿಕೆ'ಯೇ ಆಗುತ್ತದೆ ಎಂದು ಸ್ಪಷ್ಟಪಡಿಸಿದೆ.



ಮಕ್ಕಳನ್ನು ರಕ್ಷಿಸುವುದು ಪಾಲಕರ ಹೊಣೆ ಮಾತ್ರವೇ ಅಲ್ಲ, ಅದು ಸಮಾಜ ಹಾಗೂ ಸರ್ಕಾರದ ಕರ್ತವ್ಯ ಕೂಡ ಆಗಿದೆ

ಪೋಕ್ಸೊ ಕಾಯ್ದೆಯ ಅಡಿಯಲ್ಲಿ ಹೇಳಿರುವ ಅಪರಾಧಗಳ ಬಗ್ಗೆ ಸ್ಪಷ್ಟವಾದ ವ್ಯಾಖ್ಯಾನ ನೀಡುವುದಕ್ಕಾಗಿ ಮಾತ್ರವೇ ಅಲ್ಲದೆ, ಮಕ್ಕಳ ಲೈಂಗಿಕ ದೃಶ್ಯ, ಚಿತ್ರಗಳಿಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸುವುದಕ್ಕಾಗಿ ಈ ತೀರ್ಪು ಮುಖ್ಯವಾಗುತ್ತದೆ. ರಾಜ್ಯಸಭೆಯ ಸಮಿತಿಯೊಂದು ಶಿಫಾರಸು ಮಾಡಿರುವಂತೆ, ತಾಂತ್ರಿಕ ಹಾಗೂ ಸಾಂಸ್ಥಿಕ ಕ್ರಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕು ಎಂದೂ ಕೋರ್ಟ್ ಹೇಳಿದೆ. ಅಲ್ಲದೆ, ಕ್ರಮಗಳನ್ನು ಬಹಳ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ಕೂಡ ತಾಕೀತು ಮಾಡಿದೆ. ಹಲವು ಪ್ರಕರಣಗಳಲ್ಲಿ ಕಾನೂನಿನ ಅಡಿಯಲ್ಲಿ, 'ಪ್ರತ್ಯಕ್ಷವಾಗಿ ಕಾಣುವ ಕೃತ್ಯ'ಗಳಿಗೆ ಮಾತ್ರ ಶಿಕ್ಷೆ ವಿಧಿಸಲಾಗುತ್ತಿದೆ, 'ಅಪರಾಧ ಎಸಗುವ ಆಲೋಚನೆ ಮಾಡಿದ್ದಕ್ಕೆ' ಶಿಕ್ಷೆ ವಿಧಿಸುವುದಿಲ್ಲ ಎಂದು ಕೋರ್ಟ್ ಗುರುತಿಸಿದೆ. ಮಕ್ಕಳ ಲೈಂಗಿಕ ಚಿತ್ರ, ದೃಶ್ಯಗಳನ್ನು ವ್ಯಕ್ತಿಯು ಅಳಿಸಿ ಹಾಕದಿದ್ದರೆ, ನಾಶಪಡಿಸದಿದ್ದರೆ ಅಥವಾ ಅಂಥವುಗಳ ಬಗ್ಗೆ ಸಂಬಂಧಪಟ್ಟವರಿಗೆ ವರದಿ ಮಾಡದಿದ್ದರೆ, ಆ ವ್ಯಕ್ತಿಗೆ ಆ ವಸ್ತು-ವಿಷಯಗಳನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳುವ ಉದ್ದೇಶ ಇತ್ತು ಎಂಬ ತೀರ್ಮಾನಕ್ಕೆ ಬರಲು ಅದು ಆಧಾರವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ. ಪೋಕ್ಸೊ ಕಾಯ್ದೆಯ ಒಟ್ಟಾರೆ ಆಶಯಕ್ಕೆ ಸೋಲಾಗಬಾರದು ಎಂಬ ಉದ್ದೇಶದೊಂದಿಗೆ ಸುಪ್ರೀಂ ಕೋರ್ಟ್, ಕಾಯ್ದೆಯ ಸೆಕ್ಷನ್‌ಗಳನ್ನು ಬಹಳ ವಿಸ್ತೃತ ವ್ಯಾಖ್ಯಾನಕ್ಕೆ ಒಳಪಡಿಸಿದೆ. ಮಕ್ಕಳನ್ನು ಗುರಿಯಾಗಿಸಿಕೊಂಡ ನಡೆಯುವ ಸೈಬರ್ ಅಪರಾಧಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಂಶಗಳನ್ನು ಬಳಸಬೇಕು ಎಂದು ಕೋರ್ಟ್ ಹೇಳಿದೆ. 'ಮಕ್ಕಳ ಲೈಂಗಿಕ ಚಿತ್ರ, ದೃಶ್ಯ' ಎಂಬ ಪದಗಳನ್ನು ಬಳಸುವ ಬದಲು, ಪೋಕ್ಸೊ ಕಾಯ್ದೆಯಲ್ಲಿ 'ಮಕ್ಕಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಮತ್ತು ದೌರ್ಜನ್ಯ ನಡೆಸಿದ ವಸ್ತು-ವಿಷಯ' ಎಂಬ ವಿವರಣೆಯನ್ನು ಬಳಸುವಂತೆ ಸೂಕ್ತ ತಿದ್ದುಪಡಿ ತರಬೇಕು ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ.

ಮಕ್ಕಳ ಲೈಂಗಿಕ ದೃಶ್ಯ, ಚಿತ್ರಗಳ ವಿಚಾರವಾಗಿ ವಿವಿಧ ವೇದಿಕೆಗಳು ಹೆಚ್ಚಿನ ಜಾಗರೂಕತೆ ವಹಿಸಬೇಕು ಮತ್ತು ಎದುರಾದಾಗ ಪೊಲೀಸರಿಗೆ ವರದಿ ಮಾಡಬೇಕು ಎಂದು ಸೂಚಿಸಿದೆ. ಸಮಗ್ರವಾದ ಲೈಂಗಿಕ ಶಿಕ್ಷಣ ಯೋಜನೆಯನ್ನು ಜಾರಿಗೆ ತರುವಂತೆ ಅದು ಸರ್ಕಾರಕ್ಕೆ ಸೂಚನೆ ನೀಡಿದೆ. ಮಕ್ಕಳನ್ನು ಗುರಿಯಾಗಿಸಿಕೊಂಡ ಲೈಂಗಿಕ ದೌರ್ಜನ್ಯದ ಪ್ರಕರಣಗಳು ವರದಿಯಾಗುವುದು ಈಚಿನ ವರ್ಷಗಳಲ್ಲಿ ಹೆಚ್ಚಳ ಕಂಡಿದೆ. ಹಲವು ಪ್ರಕರಣಗಳು ವರದಿಯಾಗುತ್ತಿಲ್ಲ ಎಂಬುದೂ ನಿಜ. ಇಂತಹ ದೌರ್ಜನ್ಯಗಳ ಪರಿಣಾಮವಾಗಿ ಮಕ್ಕಳು ಜೀವನಪರ್ಯಂತ ಮಾನಸಿಕ ಯಾತನೆ ಅನುಭವಿಸಬೇಕಾಗುತ್ತದೆ. ಮಕ್ಕಳ ವಿದ್ಯಾಭ್ಯಾಸ, ಇತರರ ಜೊತೆಗಿನ ಅವರ ಸಂಬಂಧಗಳು ಹಾಗೂ ಅವರ ವ್ಯಕ್ತಿತ್ವದ ಮೇಲೆ ಪರಿಣಾಮ ಉಂಟಾಗುತ್ತದೆ. ಪ್ರಕರಣಗಳು ವರದಿಯಾದಾಗ, ಸೂಕ್ತವಾದ ಕ್ರಮಕ್ಕೆ ಮುಂದಾಗಲು ಪಾಲಕರು, ಶಿಕ್ಷಣ ಕ್ಷೇತ್ರದವರು ಹಾಗೂ ಕಾನೂನು ಜಾರಿ ಸಂಸ್ಥೆಗಳಿಗೆ ಸುಪ್ರೀಂ ಕೋರ್ಟ್‌ನ ಮಾತುಗಳು ಪ್ರೇರಣೆ ನೀಡಬೇಕು. ಮಕ್ಕಳನ್ನು ರಕ್ಷಿಸುವುದು ಪಾಲಕರ ಹೊಣೆ ಮಾತ್ರವೇ ಅಲ್ಲ, ಅದು ಸಮಾಜ ಹಾಗೂ ಸರ್ಕಾರದ ಕರ್ತವ್ಯ ಕೂಡ.

ಅಭಿವ್ಯಕ್ತಿ ಸ್ವಾತಂತ್ರ್ಯವು ವಿಶ್ವಮಟ್ಟದಲ್ಲಿ ಹಲವು ಬಗೆಯ ಕಂಟಕಗಳನ್ನು ಎದುರಿಸುತ್ತಿದೆ

ಪ್ರಜಾಪ್ರಭುತ್ವದ ಬಲವರ್ಧನೆಯ ಅಗತ್ಯ...



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಇತ್ತೀಚೆಗಷ್ಟೇ ಆಚರಿಸಿದ್ದೇವೆ. ಜಾಗತಿಕವಾಗಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಜಾಪ್ರಭುತ್ವದ ಸ್ಥಿತಿಗತಿಯನ್ನು ವಸ್ತುನಿಷ್ಠವಾಗಿ ಅವಲೋಕಿಸುವ ಮತ್ತು ಅದನ್ನು ಇನ್ನಷ್ಟು ಬಲಪಡಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ರೂಪಿಸುವ ಅವಕಾಶವನ್ನು ಈ ಸಂದರ್ಭವು ನಮಗೆ ಒದಗಿಸುತ್ತದೆ. ಪ್ರಜಾಪ್ರಭುತ್ವವು ಸ್ವಚ್ಛ, ನ್ಯಾಯಯುತ, ಪಾರದರ್ಶಕ, ಉತ್ತರದಾಯಿತ್ವ ಮತ್ತು ಭ್ರಷ್ಟಾಚಾರರಹಿತ ಆಡಳಿತ ವ್ಯವಸ್ಥೆ, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ತಾರತಮ್ಯರಹಿತ ಸಮ ಸಮಾಜವನ್ನು ಕಟ್ಟಿಕೊಡುವ ಗುರಿಯನ್ನು ಹೊಂದಿದೆ.

ಪ್ರಜಾಪ್ರಭುತ್ವದ ಆದರ್ಶ ಮತ್ತು ಉದಾತ್ತ ಗುರಿಗಳನ್ನು ಸಾಕಾರಗೊಳಿಸಲು ಅಂತರರಾಷ್ಟ್ರೀಯ ಸಮುದಾಯ, ರಾಷ್ಟ್ರೀಯ ಆಡಳಿತ ವ್ಯವಸ್ಥೆಗಳು, ಸ್ಥಳೀಯ ಸರ್ಕಾರಗಳು, ನಾಗರಿಕ ಸಮಾಜ ಮತ್ತು ವ್ಯಕ್ತಿಗಳ ಸಂಪೂರ್ಣ ಭಾಗವಹಿಸುವಿಕೆಯು ಒಂದು ಅಪೇಕ್ಷಿತ ಅಗತ್ಯವಾಗಿದೆ. ಪ್ರಜಾಪ್ರಭುತ್ವದ ಬಲವರ್ಧನೆಯ ಭಾಗವಾಗಿ ಸರ್ಕಾರಗಳು ಜನರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವ, ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದ ನಡೆ ಹಾಗೂ ಕ್ರಿಯೆಗಳನ್ನು ವಿರೋಧಿಸುವ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವು ಮಾನವನ ಮೂಲಭೂತ ಹಕ್ಕಾಗಿದೆ. ಮಾನವ ಹಕ್ಕುಗಳ ಮೊದಲ ಸಾರ್ವತ್ರಿಕ ಘೋಷಣೆಯ ವಿಧಿ 19ರ ಅನ್ವಯ ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿದೆ. ಈ ಹಕ್ಕು ಯಾವುದೇ ಬಗೆಯ ಹಸ್ತಕ್ಷೇಪವಿಲ್ಲದೆ ಅಭಿಪ್ರಾಯಗಳನ್ನು ಹೊಂದುವ ಮತ್ತು ಭೌಗೋಳಿಕ ಗಡಿಗಳನ್ನು ಲೆಕ್ಕಿಸದೆ ಯಾವುದೇ ಮಾಧ್ಯಮದ ಮೂಲಕ ಮಾಹಿತಿ ಮತ್ತು ಅಭಿಪ್ರಾಯವನ್ನು ಶೋಧಿಸುವ, ಪಡೆಯುವ ಮತ್ತು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಒಳಗೊಂಡಿದೆ.

ಇದೇ ರೀತಿ, ನಮ್ಮ ಭಾರತ ಸಂವಿಧಾನದ ವಿಧಿ 19ರ ಅನ್ವಯ ಎಲ್ಲ ನಾಗರಿಕರಿಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಶಸ್ತ್ರಾಸ್ತ್ರಗಳಿಲ್ಲದೆ ಶಾಂತಿಯುತವಾಗಿ ಒಂದೆಡೆ ಸೇರುವ ಸ್ವಾತಂತ್ರ್ಯ, ಸಂಘ-ಸಂಸ್ಥೆ, ಒಕ್ಕೂಟಗಳು ಅಥವಾ ಸಹಕಾರ ಸಂಘಗಳನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ, ಭಾರತದ ಭೂಪ್ರದೇಶದಾದ್ಯಂತ ಮುಕ್ತವಾಗಿ ಓಡಾಡುವ, ಯಾವುದೇ ಭಾಗದಲ್ಲಿ ವಾಸಿಸುವ ಮತ್ತು ನೆಲಸುವ, ಯಾವುದೇ ವೃತ್ತಿ ಅಥವಾ ಯಾವುದೇ ಉದ್ಯೋಗ ಮಾಡುವ ಅಥವಾ ವ್ಯಾಪಾರವನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಆದರೆ, ಭಾರತವನ್ನೂ ಒಳಗೊಂಡಂತೆ ಪ್ರಪಂಚದಾದ್ಯಂತ ಇಂದು ಸರ್ಕಾರಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಅಧಿಕಾರವನ್ನು ಬಳಸಿ ನಾಗರಿಕ ಸ್ವಾತಂತ್ರ್ಯಗಳನ್ನು ಅದರಲ್ಲೂ ವಿಶೇಷವಾಗಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಗೊಳಿಸುವ ಕೆಲಸವನ್ನು ಅವ್ಯಾಹತವಾಗಿ ಮಾಡುತ್ತಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳು ಜನವಿರೋಧಿ ಅಥವಾ ಪ್ರಜಾಪ್ರಭುತ್ವ ವಿರೋಧಿ ತೀರ್ಮಾನಗಳನ್ನು ಕೈಗೊಂಡಾಗ, ಜನ ತಮ್ಮ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ಸಂಘಟಿತರಾಗಿ ಶಾಂತಿಯುತ ಪ್ರತಿಭಟನೆ ನಡೆಸುವ ಮೂಲಭೂತ ಹಕ್ಕನ್ನು ಸರ್ಕಾರಗಳು ಒಂದಲ್ಲ ಒಂದು ಬಗೆಯಲ್ಲಿ ದಮನಗೊಳಿಸುವ ಕೆಲಸವನ್ನು ಮಾಡುತ್ತಿವೆ.

ಅಭಿಪ್ರಾಯಭೇದವನ್ನು ಒಪ್ಪುವುದು ಹಾಗೂ ಭಿನ್ನಾಭಿಪ್ರಾಯವನ್ನು ದಾಖಲಿಸುವುದು ಪ್ರಜಾಪ್ರಭುತ್ವದ ಜೀವಾಳ. ಭಿನ್ನಾಭಿಪ್ರಾಯ ಹೊಂದುವುದು ಮಾನವನ ಮೂಲಭೂತ ಲಕ್ಷಣ. ಎಲ್ಲವನ್ನೂ ಒಪ್ಪುವ ವ್ಯಕ್ತಿ ಮಾನವ ಇತಿಹಾಸದಲ್ಲಿ ವಿರಳ. ತತ್ವಶಾಸ್ತ್ರಜ್ಞರು ಹೇಳುವಂತೆ, ಒಂದು ಮಗು ಕೂಡ ಬೇಕು- ಬೇಡ ಎಂದು ಹೇಳುವ ಮೂಲಕ ಅಭಿಪ್ರಾಯ ಅಥವಾ ಭಿನ್ನಾಭಿಪ್ರಾಯವನ್ನು ದಾಖಲಿಸಲು ಪ್ರಾರಂಭಿಸುತ್ತದೆ. ಅಂದರೆ, ಪ್ರಾಥಮಿಕವಾಗಿ ನಾವು 'ವ್ಯಕ್ತಿ' ಎನಿಸಿಕೊಳ್ಳುವುದು ನಮ್ಮ ಅಭಿಪ್ರಾಯ ಅಥವಾ ಭಿನ್ನಾಭಿಪ್ರಾಯವನ್ನು ದಾಖಲಿಸುವ ಮೂಲಕ. ನಿಜ ಹೇಳಬೇಕೆಂದರೆ, ಭಿನ್ನಾಭಿಪ್ರಾಯವಿಲ್ಲದ ಕುಟುಂಬ, ಸಮಾಜ, ದೇಶ ಅಥವಾ ಜಗತ್ತು ಇರಲು ಸಾಧ್ಯವಿಲ್ಲ. ಯಾವುದೇ ಬಗೆಯ ಭಿನ್ನಾಭಿಪ್ರಾಯವನ್ನು ತಳ್ಳಿಹಾಕುವ ಬದಲು ಅದನ್ನು ಅರ್ಥಮಾಡಿಕೊಂಡು ನಿಭಾಯಿಸಲು ಕಲಿಯುವುದು ಶಾಂತಿ, ಸಾಮರಸ್ಯ, ಸಹಬಾಳ್ವೆ ಮತ್ತು ನೆಮ್ಮದಿಗೆ ರಹದಾರಿಯಾಗುತ್ತದೆ. ಆಗ ಕುಟುಂಬ, ದೇಶ ಮತ್ತು ಜಗತ್ತು ಶಾಂತಿ- ಸಾಮರಸ್ಯದ ತೋಟಗಳಾಗುತ್ತವೆ.

ತಜ್ಞರು ಪ್ರತಿಪಾದಿಸುವಂತೆ, ಕಾರ್ಯನಿರತ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯವು ನಿರ್ಣಾಯಕ ಪಾತ್ರ ವಹಿಸುತ್ತದೆ. ಒಪ್ಪದಿರುವ, ಚರ್ಚಿಸುವ, ಸಂವಾದಿಸುವ ಮತ್ತು ಮಂಥನ ನಡೆಸುವ ಪ್ರಜಾಸತ್ತಾತ್ಮಕ ಕ್ರಿಯೆಯು ಸಹಮತವನ್ನು ಮೂಡಿಸುವ ಬಲಿಷ್ಠ ಸಾಧನವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಭಿನ್ನಾಭಿಪ್ರಾಯಗಳು ಸಹಜ ಹಾಗೂ ಅಗತ್ಯ. ಅದರಲ್ಲೂ ರಾಜಕೀಯ ಭಿನ್ನಾಭಿಪ್ರಾಯಗಳಂತೂ ಸರ್ವೇ ಸಾಮಾನ್ಯ. ಇದು ವಿರೋಧ ಪಕ್ಷಗಳಿಗೆ ಸರ್ಕಾರದ ನೀತಿ, ನಿರ್ಧಾರ, ಕಾರ್ಯಕ್ರಮ ಮತ್ತು ಕಾನೂನುಗಳನ್ನು ಟೀಕಿಸುವ ಹಕ್ಕನ್ನು ಒದಗಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಮೌಲ್ಯಾಧಾರಿತ ತಾತ್ವಿಕ ಭಿನ್ನಾಭಿಪ್ರಾಯವು ಉತ್ತಮ ಆಡಳಿತ ಒದಗಿಸುವುದರ ಜೊತೆಗೆ ಸರ್ಕಾರವನ್ನು ನಿಯಂತ್ರಣದಲ್ಲಿಡಲು ಸಹಕಾರಿಯಾಗಿದೆ. ಜೊತೆಗೆ ಸಾಮಾಜಿಕ, ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಉಲ್ಲಂಘಿಸುವಂತಹ ಸರ್ಕಾರದ ಕ್ರಮಗಳನ್ನು ಪ್ರಶ್ನಿಸಲು ಮತ್ತು ಶಾಂತಿಯುತವಾಗಿ ಪ್ರತಿಭಟಿಸಲು ಎಲ್ಲಾ ನಾಗರಿಕರಿಗೆ ಅನುವು ಮಾಡಿಕೊಡುತ್ತದೆ. ಶಾಂತಿಯುತ ಪ್ರತಿಭಟನೆಗಳು ಮತ್ತು ಚರ್ಚೆಗಳು ಸಾರ್ವಜನಿಕ ಜಾಗೃತಿ ಮೂಡಿಸಲು ಸಹಾಯ ಮಾಡುತ್ತವೆ ಮತ್ತು ಸರ್ಕಾರ ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ಒದಗಿಸುತ್ತವೆ.



'ವಿಶ್ವದಲ್ಲಿ ಪ್ರಜಾಪ್ರಭುತ್ವ- 2024' ವರದಿಯ ಪ್ರಕಾರ, ವಿಶ್ವದಲ್ಲಿ ಸಾಧಾರಣ ವ್ಯಕ್ತಿ ಅನುಭವಿಸುವ ಪ್ರಜಾಪ್ರಭುತ್ವದ ಮಟ್ಟವು 1985ರಲ್ಲಿದ್ದ ಮಟ್ಟಕ್ಕೆ ಇಳಿದಿದೆ. ಅಂದರೆ, ಸುಮಾರು 40 ವರ್ಷಗಳಷ್ಟು ಹಿಂದಕ್ಕೆ ಸರಿದಿದೆ. ದೇಶಗಳನ್ನು ಆಧರಿಸಿದ ಸರಾಸರಿಯ ಪ್ರಕಾರ ಇದು 1998ರ ಮಟ್ಟಕ್ಕೆ ಇಳಿದಿದೆ. ಈ ಬಗೆಯ ಕುಸಿತವು ಪೂರ್ವ ಯುರೋಪ್, ದಕ್ಷಿಣ ಮತ್ತು ಮಧ್ಯ ಏಷ್ಯಾದಲ್ಲಿ ಎದ್ದುಕಾಣುತ್ತಿದೆ. ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ರಾಷ್ಟ್ರಗಳ ಸ್ಥಿತಿಯು ಜಾಗತಿಕವಾದ ಈ ಪ್ರವೃತ್ತಿಗೆ ವಿರುದ್ಧವಾಗಿದ್ದು, ಪ್ರಜಾಪ್ರಭುತ್ವದ ಮಟ್ಟ ಹೆಚ್ಚಿದೆ. ಚಿಕ್ಕ ದೇಶಗಳಿಗಿಂತ ದೊಡ್ಡ ದೇಶಗಳು ಹೆಚ್ಚಿನ ಮಟ್ಟಿಗೆ ಅರ್ಥಪೂರ್ಣ ಪ್ರಜಾಪ್ರಭುತ್ವವನ್ನು ಹೊಂದಿವೆ.

ಈ ವರದಿಯ ಮತ್ತೊಂದು ಪ್ರಮುಖ ಅಂಶವೆಂದರೆ, ಪ್ರಪಂಚವು ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವಗಳ ನಡುವೆ ಬಹುಮಟ್ಟಿಗೆ ಸಮನಾಗಿ ಹಂಚಿಹೋಗಿದೆ. ವಿಶ್ವದ ಜನಸಂಖ್ಯೆಯ ಶೇಕಡ 71ರಷ್ಟು, ಅಂದರೆ 570 ಕೋಟಿಯಷ್ಟು ಜನರು ನಿರಂಕುಶ ಪ್ರಭುತ್ವದ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ಪ್ರಮಾಣವು ಹತ್ತು ವರ್ಷಗಳಷ್ಟು ಹಿಂದಿನ ಸ್ಥಿತಿಗೆ ಹೋಲಿಸಿದರೆ ಶೇಕಡ 48ರಷ್ಟು ಹೆಚ್ಚಾಗಿದೆ. ಜಾಗತಿಕವಾಗಿ ಹಾಗೂ ರಾಷ್ಟ್ರಗಳ ಮಟ್ಟದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಮುಕ್ತ ಹಾಗೂ ಪಾರದರ್ಶಕ ಚುನಾವಣೆಗಳನ್ನು ನಡೆಸುವ ಪರಿಸ್ಥಿತಿಯು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಈ ಅವಧಿಯಲ್ಲಿ, ಹೆಚ್ಚು ದೇಶಗಳಲ್ಲಿ ಪ್ರಜಾಪ್ರಭುತ್ವದ ಬಹುತೇಕ ಸಾಂಸ್ಥಿಕ ಸಂಸ್ಥೆಗಳು ಮತ್ತು ಘಟಕಗಳು ಬಲವರ್ಧನೆಗೊಂಡು ಉತ್ತಮವಾಗುವ ಬದಲು ದುರ್ಬಲಗೊಂಡಿವೆ.

ಪ್ರಜಾಪ್ರಭುತ್ವವನ್ನು ಹೊಂದಿರುವ ದೇಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವು ಅತ್ಯಂತ ಕೆಟ್ಟ ಸ್ಥಿತಿಯನ್ನು ಎದುರಿಸುತ್ತಿದೆ. 2023ರಲ್ಲಿ ವರದಿಯಾದಂತೆ, ಸುಮಾರು 35 ದೇಶಗಳಲ್ಲಿ ಇದು ಹದಗೆಟ್ಟಿದೆ. ಮುಕ್ತ ಹಾಗೂ ಪಾರದರ್ಶಕ ಚುನಾವಣೆಗಳು ಕೆಟ್ಟ ಸ್ಥಿತಿಯಲ್ಲಿರುವ ವ್ಯವಸ್ಥೆಯ ಪಟ್ಟಿಯಲ್ಲಿ ಎರಡನೇ ಸಾಲಿನಲ್ಲಿವೆ. 23 ದೇಶಗಳಲ್ಲಿ ಪರಿಸ್ಥಿತಿ ಹದಗೆಟ್ಟಿದ್ದರೆ, 12 ದೇಶಗಳಲ್ಲಿ ಸುಧಾರಿಸುತ್ತಿದೆ. ಸಂಘ-ಸಂಸ್ಥೆಗಳನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯ ಕೂಡ ಮೊಟಕಾಗಿದೆ. ಸುಮಾರು 20 ದೇಶಗಳು ಈ ಹಕ್ಕನ್ನು ನಿರ್ಬಂಧಿಸಿವೆ. ಜಗತ್ತು ನಿರಂಕುಶ ಪ್ರಭುತ್ವದ ಕಡೆಗೆ ಸಾಗುತ್ತಿರುವ ಅಲೆಯು ಗಮನಾರ್ಹವಾಗಿ ಹೆಚ್ಚುತ್ತಿದೆ.

ಪ್ರಪಂಚದ 42 ದೇಶಗಳು ನಿರಂಕುಶಾಧಿಕಾರ ಅಥವಾ ನಿರಂಕುಶ ಪ್ರಭುತ್ವಕ್ಕೆ ಒಳಪಟ್ಟಿವೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಎನಿಸಿಕೊಂಡಿರುವ ಮತ್ತು ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 18ರಷ್ಟು ಜನಸಂಖ್ಯೆಯನ್ನು ಹೊಂದಿರುವ ಭಾರತದ ಸ್ಥಿತಿ ಕೂಡ ಉತ್ತಮವಾಗಿಲ್ಲ ಎಂದು ವರದಿ ತಿಳಿಸುತ್ತದೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಪ್ರಜಾಪ್ರಭುತ್ವದ ಮೂಲ ಲಕ್ಷಣಗಳಾದ ಬಹುತ್ವ, ಬಹುಸಂಸ್ಕೃತಿ, ಬಹುಭಾಷೆ, ವೈವಿಧ್ಯದ ನೆಲೆಯಲ್ಲಿ ವಿವಿಧ ಅಭಿಪ್ರಾಯ ಅಥವಾ ಭಿನ್ನಾಭಿಪ್ರಾಯಗಳ ಮೂಲಕ ಟೀಕೆ ಮಾಡುವ ಸ್ವಾತಂತ್ರ್ಯವನ್ನು ಕಾನೂನುಬದ್ಧವಾಗಿ ರಕ್ಷಿಸುವ ಕೆಲಸ ಮಾಡಿದಾಗ ಮಾತ್ರ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆ. ಈ ಕೆಲಸ ತುರ್ತಾಗಿ ಆಗಬೇಕಿದೆ.

ಚುರುಮುರಿ



ಆಫ್ ದ ರೆಕಾರ್ಡ್!

• ಬಿ.ಎನ್.ಮಲ್ಲೇಶ್

'ಹಲೋ... ಏನಲೆ ಇದೂ, ಜಡ್ಜ್‌ಮೆಂಟ್ ಹಿಂಗಾಗೋಯ್ತು?'

'ಅದೇ ನಂಗೂ ಆಶ್ಚರ್ಯ, ಮುಂದೆ ಏನಾಕ್ಕತೋ ಏನೋ'.

'ರಾಜೀನಾಮೆ ಕೊಡ್ತಾರೆ ಅಂತೀಯ?'

'ಏನೋಪ್ಪ, ಎಫ್‌ಐಆರ್ ಬೇರೆ ಹಾಕ್ತಾರಂತೆ. ಹೈಕಮಾಂಡ್ ಏನಂತತೋ ಗೊತ್ತಿಲ್ಲ'.

'ಅಲ್ಲ, ಸಾಹೇಬ್ರು ಬಾಳ ಟೆನ್ಷನ್‌ನಲ್ಲಿದ್ರು. ಟಿ.ವಿ.ಯೋರು ಬೇರೆ ಅವ್ರ ಮುಖಾನೇ ಜೂಮ್ ಮಾಡಿ ತೋರಿಸ್ತಾ ಇದ್ರು'.

'ಮತ್ತೆ ಟೆನ್ಷನ್ ಆಗದೇ ಇರುತ್ತಾ? ಕುರ್ಚಿ ವಿಷ್ಯ ಅಂದ್ರೆ ಸುಮ್ನೇನಾ?'

'ಅಲ್ಲ, ಬಾಳ ಜನ ಕುರ್ಚಿ ಮೇಲೆ ಕಣ್ಣಿಟ್ಟಿದ್ರು. ಎಲ್ಲೆಲ್ಲೋ ಹೋಗಿ ಟವೆಲ್ ಹಾಕಿ ಬಂದಿದ್ರು. ಪ್ರಮಾಣವಚನಕ್ಕೆ ಬಟ್ಟೆ ಪಟ್ಟೆ ಹೊಲಿಸ್ಕಂಡಿದ್ರು. ಅವ್ರೆಲ್ಲ ಸುಮ್ನಿರ್ತಾರಾ?'

'ಟಿ.ವಿಯೋರ ಮುಂದೆ 'ಯಾವ ಕಾರಣಕ್ಕೂ ರಾಜೀನಾಮೆ ಕೊಡ್ಸಲ್ಲ' ಅಂತಾರೆ, ಒಳಗೊಳಗೆ ನಾನೇ ಸೀನಿಯರ್ ಅಂತ ಕುರ್ಚಿ ಮೇಲೆ ಟವೆಲ್ ಹಾಕಿರ್ತಾರೆ'.

'ಒಬ್ರಂತೂ 'ರಾಜೀನಾಮೆ ಮಾತೇ ಇಲ್ಲ, ಹೋರಾಡ್ತೀವಿ, ನಮ್ಮನ್ನು ಯಾರೂ ಅಲ್ಲಾಡ್ಸಕ್ಕಾಗಲ್ಲ' ಅಂತಿದ್ರಪ್ಪ'.

'ಅವರೇ ಮೊದ್ಲು ಟವೆಲ್ ಹಾಕಿರೋದು'.

'ಹೌದಾ? ಆಮೇಲೆ ವಿರೋಧ ಪಕ್ಷದೋರು ಬಾಳ ಖುಷೀಲಿದಾರಂತೆ? ಆಪರೇಷನ್ ಮಾಡಾಕೆ ಕತ್ತಿ ಪತ್ತಿ ಮಸೀತಿರಬೋದು'.

'ಏನೋಪ್ಪ, ಇದು ಕೇಜ್ರಿವಾಲ್- 2 ಕತಿ ಆಗುತ್ತಾ ಅಂತ'.

'ಅಲ್ಲ, ಹಂಗೇನರೆ ಅಕಸ್ಮಾತ್ ರಾಜೀನಾಮೆ ಕೊಟ್ರೆ ನಿನ್ ಬೋರ್ಡ್ ಅಧ್ಯಕ್ಷ ಸ್ಥಾನ ಉಳೀತತಾ?'

'ನನ್ ಬೋರ್ಡ್‌ದು ಹಂಗಿರ್ಲಿ, ಎಲ್ಲ ಗಬ್ಬೆದ್ದು ಹೋಗ್ತತಿ'.

'ಆದ್ರೂ ನೀನು ಪಾಕಡ ಬಿಡಲೆ, ಅಂದರಿಕಿ ಮಂಚಿವಾಳ್ಳು. ಯಾರೇ ಕುರ್ಚಿ ಹಿಡಿದ್ರೂ ಅವರ ಮುಂದೆ ಬಕೆಟ್ ಹಿಡ್ಕಂಡ್ ನಿಂತಿರ್ತೀಯ'.

'ಇದು ರಾಜಕೀಯ ಕಣಲೆ, ಮತ್ತೆ ಬದುಕಬೇಕಲ್ಲ. ಅದಿರ್ಲಿ, ನನ್ ಮಾತು ರೆಕಾರ್ಡ್ ಮಾಡ್ಕಂತಿದೀಯೋ ಹೆಂಗೆ?'

'ಏಯ್, ದೇವ್ರಾಣೆ ಇಲ್ಲಪ್ಪ'.

'ಈಗಿನ ಕಾಲದಾಗೆ ಯಾರನ್ನೂ ನಂಬಕ್ಕಾಗಲ್ಲ, ಅದ್ಕೆ ಕೇಳಿದೆ. ಸರಿ, ಇಡು ಫೋನು'.

ದಿನದ ಟ್ವೀಟ್

ಕಾಲು ಹಾಕುವ ಮುನ್ನ...



ನಮ್ಮ ಕುಟುಂಬದ ಸದಸ್ಯರೊಬ್ಬರಿಗೆ ಶ್ವಾಸಕೋಶದಲ್ಲಿ ತೊಂದರೆ ಕಾಣಿಸಿಕೊಂಡ ಬಳಿಕ ನಮ್ಮ ಬಾಲ್ಕನಿಗೆ ಪಾರಿವಾಳದ ಬಲೆಯನ್ನು ಅಳವಡಿಸಿದ್ದೇವೆ. 'ನಿಮ್ಮ ಮನೆಯ ಬಾಲ್ಕನಿಗೆ ಪಾರಿವಾಳಗಳು ಬರುತ್ತವೆಯೇ?' ಎಂದು ಎದೆರೋಗ ತಜ್ಞರು ಮೊದಲಿಗೇ ನಮ್ಮನ್ನು ಕೇಳಿದರು. ಶ್ವಾಸಕೋಶದ ಆರೋಗ್ಯಕ್ಕೆ ಪಾರಿವಾಳಗಳು ಗಂಭೀರವಾದ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಈ ಪಿಡುಗಿನ ಬಗ್ಗೆ ನಾವು ಎಚ್ಚರದಿಂದ ಇರಬೇಕು.

ಪ್ರಮೋದ್ ಕುಮಾರ್ ಸಿಂಗ್, ಪತ್ರಕರ್ತ

ಕಿಡಿನುಡಿ

ಈ ಕ್ಯಾಮೆರಾಗಳು ಬಹಳಷ್ಟು ಕೆಲಸಗಳನ್ನು ಮಾಡಬಹುದು. ಆದರೆ ಇವು ಕೊಡುವ ಅಂಕಿ-ಅಂಶಗಳನ್ನು ಇಟ್ಟುಕೊಂಡು ನೀವು ಏನು ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳಿಗೆ ಅಥವಾ ಇತರ ಅಧಿಕಾರಿಗಳಿಗೆ ಕೇಳಬೇಕಾಗಿದೆ.

(ಬೆಂಗಳೂರು ಸಂಚಾರ ಪೊಲೀಸರ ಎ.ಐ. (ಕೃತಕ ಬುದ್ಧಿಮತ್ತೆ) ಕ್ಯಾಮೆರಾಗಳು ಸದ್ಯದಲ್ಲೇ ನಗರದ ತ್ಯಾಜ್ಯ, ರಸ್ತೆಗುಂಡಿ, ಹಾನಿಗೊಳಗಾದ ಮೂಲಸೌಕರ್ಯ, ನೀರು ನಿಂತ ರಸ್ತೆಗಳ ಜೊತೆಗೆ ವಾಹನಗಳು ಉಗುಳುವ ಮಾಲಿನ್ಯವನ್ನೂ ಪತ್ತೆ ಹಚ್ಚಲಿವೆ ಎಂಬ ವರದಿಗೆ ಪ್ರತಿಕ್ರಿಯೆ)

ಸುಮಂತ್

25 ವರ್ಷಗಳ ಹಿಂದೆ

ಸೋಮವಾರ, 27-9-1999

• ಪರಾರಿಯಾದ ಒಬ್ಬ ಡಕಾಯಿತನ ಆತ್ಮಹತ್ಯೆ- ಇನ್ನೊಬ್ಬನ ಬಂಧನ

ಲಿಂಗಸುಗೂರು, ಸೆ. 26– ಇಲ್ಲಿನ ಉಪ ಜೈಲಿನಿಂದ ತಪ್ಪಿಸಿಕೊಂಡಿದ್ದ ಆರು ಜನ ಡಕಾಯಿತರ ಪೈಕಿ ಬಲಭೀಮ ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದು, ನಯೀಂ ಪಾಷ ಎಂಬಾತನನ್ನು ಬಂಧಿಸಲಾಗಿದೆ.

ನಿನ್ನೆ ಬೆಳಿಗ್ಗೆ ಜೈಲಿನಿಂದ ತಪ್ಪಿಸಿಕೊಂಡು ಗುಡ್ಡಬೆಟ್ಟ ಅಲೆದ ಬಲಭೀಮ ಸಂಜೆ ಗುಂಡಸಾಗರ ಗ್ರಾಮ ತಲುಪಿ, ಅಲ್ಲಿ ಹೊಲದ ಕೆಲಸ ಮಾಡುತ್ತಿದ್ದವರೊಬ್ಬರಿಂದ ರೊಟ್ಟಿ ಬೇಡಿಕೊಂಡು ತಿಂದ. ಅವರು ಕೆಲಸಕ್ಕೆ ತೆರಳಿದಾಗ ಅವರ ಬಟ್ಟೆ ಕದ್ದು ಅಲ್ಲಿಂದ ಕಾಲು ಕಿತ್ತ. ಆದರೆ, ರಾತ್ರಿ ಗುಂಡಸಾಗರ ಹಾಗೂ ಕೈರವಾಡಗಿ ಸೀಮೆ ನಡುವಿನ ರಸ್ತೆ ಪಕ್ಕದ ಮರವೊಂದಕ್ಕೆ ತಾನುಟ್ಟಿದ್ದ ಲುಂಗಿಯನ್ನೇ ನೇಣಾಗಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಎನ್ನಲಾಗಿದೆ.

• ಚೆನ್ನೈ: ಲಾರಿ ಹರಿದು ಒಂಬತ್ತು ಸಾವು

ಚೆನ್ನೈ, ಸೆ. 26 (ಪಿಟಿಐ)– ರಸ್ತೆಬದಿಯಲ್ಲಿ ಮಲಗಿದ್ದವರ ಮೇಲೆ ಲಾರಿ ಹರಿದು ಹದಿನೆಂಟು ತಿಂಗಳ ಮಗು ಮತ್ತು ಮಹಿಳೆಯರಿಬ್ಬರು ಸೇರಿ ಒಂಬತ್ತು ಮಂದಿ ಮೃತಪಟ್ಟ ದುರ್ಘಟನೆ ಇಲ್ಲಿನ ಅಶೋಕ ನಗರದಲ್ಲಿ ಇಂದು ಬೆಳಗಿನ ಜಾವ ನಡೆದಿದೆ.

ಸತ್ತವರೆಲ್ಲರೂ ಕಟ್ಟಡ ಹಾಗೂ ರಸ್ತೆ ನಿರ್ಮಾಣ ಕೆಲಸದ ಕಾರ್ಮಿಕರಾಗಿದ್ದು, ಸೇಲಂ ನಗರಕ್ಕೆ ಸೇರಿದವರು. ಏಳು ಮಂದಿ ಸ್ಥಳದಲ್ಲೇ ಮೃತಪಟ್ಟರು. ಉಳಿದವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

50 ವರ್ಷಗಳ ಹಿಂದೆ

ಶುಕ್ರವಾರ, 27-9-1974

• ಯೂಸುಫ್ ಪಟೇಲ್, ಲಲ್ಲು, ಧೋಲಾಕಿಯಾ ಪೊಲೀಸರಿಗೆ ಶರಣು

ಮುಂಬಯಿ, ಸೆ. 26– ಕಳ್ಳಸಾಗಣೆ ಪ್ರಪಂಚದ ಮೂವರು 'ದೊರೆ'ಗಳಲ್ಲಿ ಒಬ್ಬನಾದ ಯೂಸುಫ್ ಪಟೇಲ್, ಹಾಜಿ ಮಿರ್ಜಾ ಮಸ್ತಾನನ ಸಹಚರನೆಂದು ಹೇಳಲಾದ ಲೀಲಾಧರಂ ಧೋಲಾಕಿಯಾ ಮುಂಬಯಿಯಲ್ಲಿ ಇಂದು ಪೊಲೀಸರಿಗೆ ಶರಣಾದರೆ, ಮತ್ತೊಬ್ಬ ಖದೀಮ ಲಲ್ಲುಜೋಗಿ ಗುಜರಾತಿನ ಬಲ್ಸಾರಿನಲ್ಲಿ ಶರಣಾಗತನಾದ.

ಇನ್ನೂ ಮೂವತ್ತನ್ನೂ ಮೀರದ ಪಟೇಲ್, ನಗರ ಗೂಢಚರ್ಯೆ ಇಲಾಖೆ ಕಚೇರಿಯೊಳಕ್ಕೆ ತನ್ನ ವಕೀಲರ ಜತೆಗೂಡಿ ಬಂದು ಪೊಲೀಸರ ಮುಂದೆ ನಿಂತು 'ಇಗೋ ನಾನಿಲ್ಲಿದ್ದೇನೆ' ಎಂದ. ಬಂಧಿತರಾದ ಕಳ್ಳಸಾಗಣೆ ಖದೀಮರ ಸಂಖ್ಯೆ ಹದಿನಾಲ್ಕಕ್ಕೇರಿದೆ.

• ನಗರದಲ್ಲಿ ಆರು ಜನ ಖದೀಮರ ಬಂಧನ

ಬೆಂಗಳೂರು, ಸೆ. 26– ಭಾರತದಾದ್ಯಂತ ನಡೆಯುತ್ತಿರುವ ಕ್ರಮವನ್ನನುಸರಿಸಿ ನಗರದ ಪೊಲೀಸರು ಇಂದು ಬೆಂಗಳೂರಿನ ಕುಪ್ರಸಿದ್ಧ ಕಳ್ಳಸಾಗಾಣಿಕೆದಾರರು ಹಾಗೂ ವ್ಯಾಪಾರಿಗಳು ಎನ್ನಲಾದ 6 ಮಂದಿಯನ್ನು ಬಂಧಿಸಿದ್ದಾರೆ.

ಚಿನ್ನ, ಕೈಗಡಿಯಾರ, ಜರತಾರಿಗಳಲ್ಲಿ ಕಳ್ಳಸಾಗಾಣಿಕೆ ಹಾಗೂ ವ್ಯಾಪಾರದಲ್ಲಿ ನಿರತರಾಗಿದ್ದರೆಂಬ ಆಪಾದನೆಗಳ ಮೇಲೆ ಇವರುಗಳನ್ನು ದಸ್ತಗಿರಿ ಮಾಡಲಾಗಿದೆ. ಇವರುಗಳನ್ನು ಸಂಜೆ ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು.

ಸಂಗತ

ವಲಸೆ ನೀತಿ, ತಾಯ್ನೆಲದ ಪ್ರೀತಿ

ವಲಸಿಗರ ಮಾನವ ಹಕ್ಕುಗಳನ್ನು ರಕ್ಷಿಸಬೇಕಾದುದು ಅತ್ಯಂತ ಮುಖ್ಯವಾದ ಕಾರ್ಯ

• ಮಲ್ಲಿಕಾರ್ಜುನ ಹೆಗ್ಗಳಗಿ

'ವಲಸೆಹೋದ ಕನ್ನಡಿಗನ ಕತೆ'- ಇದು, ಸಮಾಜ ವಿಜ್ಞಾನಿ ಹಿರೇಮಲ್ಲೂರ ಈಶ್ವರನ್ ಅವರ ಪ್ರಸಿದ್ಧ ಆತ್ಮಕಥೆ. ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಹಿರೇಮಲ್ಲೂರ ಗ್ರಾಮದವರಾದ ಅವರು, ಹಾಲೆಂಡ್‌ನ ವಿಶ್ವವಿದ್ಯಾಲಯವೊಂದರಲ್ಲಿ ಪಿಎಚ್.ಡಿ ಪಡೆದು, ಅಲ್ಲಿ ಮತ್ತು ಕೆನಡಾದ ವಿಶ್ವವಿದ್ಯಾಲಯವೊಂದರಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಹಾಲೆಂಡ್ ಯುವತಿ ಓಬೆನ್ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ಮಡದಿ, ಮಕ್ಕಳೊಂದಿಗೆ ದೀರ್ಘಕಾಲ ವಿದೇಶದಲ್ಲಿಯೇ ವಾಸವಾಗಿದ್ದರು. ವೃದ್ಧಾಪ್ಯದಲ್ಲಿ ಅವರಿಗೆ ತಾಯ್ನಾಡಿನ ನೆನಪು ಕಾಡತೊಡಗಿತು. ಧಾರವಾಡಕ್ಕೆ ಮರಳಿ ಬಡಮಕ್ಕಳ ಶಿಕ್ಷಣಕ್ಕೆ ನೆರವು ನೀಡಿದರು. ಅವರ ಇಚ್ಛೆಯಂತೆ ಧಾರವಾಡದಲ್ಲಿಯೇ ಅವರ ಅಂತ್ಯಕ್ರಿಯೆ ನಡೆಯಿತು. ಭಾರತದಲ್ಲಿಯೇ ವಲಸೆ ಅತಿ ಹೆಚ್ಚು ಎಂಬ 'ಆಳ- ಅಗಲ'ದ (ಪ್ರ.ವಾ., ಸೆ. 16) ವರದಿ ಓದಿದಾಗ, ಈಶ್ವರನ್ ಅವರ ಆತ್ಮಕಥೆ ನೆನಪಾಯಿತು.

ವಲಸೆಯು ಸಾಮಾಜಿಕ ಬದಲಾವಣೆಯ ಕುರುಹು. ಕೈಗಾರಿಕೆ, ವಾಣಿಜ್ಯ, ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆಯು ವಲಸೆಯ ಬಲವನ್ನು ಅವಲಂಬಿಸಿರುತ್ತವೆ. ಆದರೆ ಹುಟ್ಟಿದ ಸ್ಥಳವನ್ನು ತೊರೆದು ದೂರ ಹೋಗುವುದು ಸುಲಭದ ಕೆಲಸವಲ್ಲ. ಹುಟ್ಟಿದ ಮನೆ, ಊರಿನೊಂದಿಗೆ ಭಾವನಾತ್ಮಕ ಸಂಬಂಧ ಬೆಸೆದಿರುತ್ತದೆ. ಇದನ್ನು ದಾಟಿ ಶಿಕ್ಷಣ, ಉದ್ಯೋಗ, ಕೌಟುಂಬಿಕ ಕಾರಣಗಳಿಗಾಗಿ ಹಳ್ಳಿಯಿಂದ ನಗರಕ್ಕೆ, ನಗರದಿಂದ ನಗರಕ್ಕೆ, ದೇಶದಿಂದ ದೇಶಕ್ಕೆ ವಲಸೆ ನಿರಂತರವಾಗಿ ನಡೆಯುತ್ತಿರುತ್ತದೆ.

ಅವಕಾಶ ಹುಡುಕಿಕೊಂಡು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವಲಸೆ ಹೋಗುವವರು ಮತ್ತು ಅವರ ಕುಟುಂಬಗಳ ಮಾನವ ಹಕ್ಕುಗಳ ರಕ್ಷಣೆ ಅತ್ಯಂತ ಮುಖ್ಯವಾದುದು. ವಲಸೆ ಹೋದವರು ತಮ್ಮ ಆತಿಥೇಯ ದೇಶದಲ್ಲಿ ಸಾಮಾನ್ಯವಾಗಿ ಪ್ರತ್ಯೇಕತಾ ಭಾವನೆ ಅನುಭವಿಸುತ್ತಾರೆ ಮತ್ತು ಶೋಷಣೆಯನ್ನು ಎದುರಿಸುತ್ತಾರೆ. ತಾರತಮ್ಯ ಮಾಡದಿರುವುದು, ಸಂಚಾರ ಸ್ವಾತಂತ್ರ್ಯ, ಕೆಲಸದ ವಿಚಾರದಲ್ಲಿ ನ್ಯಾಯಯುತ ಕ್ರಮಗಳ ಜೊತೆಗೆ ಸಾಮಾಜಿಕ ಭದ್ರತೆಯನ್ನು ವಲಸಿಗರಿಗೆ ಒದಗಿಸಬೇಕು. ಅವರ ಮಕ್ಕಳಿಗೆ ಸೂಕ್ತ ಶಿಕ್ಷಣ ವ್ಯವಸ್ಥೆ ಕೂಡ ಅವಶ್ಯ.

ಪ್ರಸ್ತುತ 28 ಕೋಟಿ ಜನ ಸ್ವಂತದ್ದಲ್ಲದ ದೇಶಗಳಲ್ಲಿ ವಾಸಿಸುತ್ತಿದ್ದಾರೆ ಎಂಬ ವರದಿಗಳಿವೆ. ಉಕ್ರೇನ್‌ನಲ್ಲಿ ವೈದ್ಯಕೀಯ ಪದವಿ ಓದುತ್ತಿದ್ದ ಭಾರತದ ವಿದ್ಯಾರ್ಥಿಗಳು ರಷ್ಯಾ ಮತ್ತು ಉಕ್ರೇನ್ ಯುದ್ಧದಿಂದಾಗಿ ಅನುಭವಿಸಿದ ಸಂಕಟ ಅಷ್ಟಿಷ್ಟಲ್ಲ.

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಎರಡು ವರ್ಷಕ್ಕೆ ಒಮ್ಮೆ ಸಭೆ ನಡೆಸುತ್ತದೆ. ಈ ಸಭೆಯು ಪ್ರತಿ ವರ್ಷ ನಡೆಯುವಂತೆ ಆಗಬೇಕು. ಇದರಿಂದ ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಅನುಕೂಲವಾಗುತ್ತದೆ.

ವಿಶ್ವ ಬಂಡವಾಳ ಹೂಡಿಕೆ ಸಮಾವೇಶ ನಡೆಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಈ ಸಂದರ್ಭದಲ್ಲಿ ಬಂಡವಾಳ ಮಾತ್ರ ಬರುವುದಿಲ್ಲ, ಅದರೊಂದಿಗೆ ತಂತ್ರಜ್ಞರು, ಕುಶಲಕರ್ಮಿಗಳು, ಕೈಗಾರಿಕೆಗಳ ಆಡಳಿತ ಪರಿಣತರು ಸಹ ವಿದೇಶಗಳಿಂದ ಬರುತ್ತಾರೆ. ಇದು ಬಂಡವಾಳದೊಂದಿಗೆ ವಲಸಿಗರನ್ನೂ ಸ್ವಾಗತಿಸುವ ಕ್ರಿಯೆಯಾಗಿದೆ.

ಹುಟ್ಟೂರನ್ನು ತೊರೆದು ಬೇರೆಡೆ ಹೋಗಿ ನೆಲಸಿದ ಕಾರ್ಮಿಕರಲ್ಲಿ ಸಹಜವಾಗಿ ದುಡಿಯುವ ಮನೋಭಾವ ಹೆಚ್ಚಾಗಿರುತ್ತದೆ. ಈ ಕಾರಣಕ್ಕೆ ಕೈಗಾರಿಕೋದ್ಯಮಿಗಳು ವಲಸೆ ಕಾರ್ಮಿಕರಿಗೆ ಆದ್ಯತೆ ಕೊಡುತ್ತಾರೆ. ವಿದೇಶಾಂಗ ವ್ಯವಹಾರ ಸಚಿವಾಲಯವು ಸಾಗರೋತ್ತರ ಉದ್ಯೋಗಕ್ಕೆ ಪೂರಕವಾಗುವಂತೆ 'ಭಾರತೀಯ ವಲಸೆ ಕೇಂದ್ರ'ವನ್ನು ಪ್ರಾರಂಭಿಸಿದೆ. ಅಂತರರಾಷ್ಟ್ರೀಯ ವಲಸೆ ಮತ್ತು ಚಲನಶೀಲ ಸಂಸ್ಕೃತಿಯ ಬಗ್ಗೆ ಸಂಶೋಧನೆ, ವಿಶ್ಲೇಷಣೆ, ಕಾರ್ಯಾಗಾರವನ್ನು ನಿರಂತರವಾಗಿ ನಡೆಸುತ್ತಿದೆ. ವಿದೇಶದಲ್ಲಿ ಉದ್ಯೋಗ ಕೊಡಿಸುವ ಆಮಿಷ ಒಡ್ಡಿ ವಂಚಿಸುವುದನ್ನು ತಪ್ಪಿಸುವುದರಲ್ಲಿ ಈ ಕೇಂದ್ರ ಮಹತ್ವದ ಪಾತ್ರ ವಹಿಸುತ್ತಿದೆ.

ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ 1970- 80ರ ದಶಕದಲ್ಲಿ ಅಮೆರಿಕದಲ್ಲಿ ಉದ್ಯೋಗದಲ್ಲಿದ್ದರು. 1975ರಲ್ಲಿ ಭಾರತದಲ್ಲಿ ಹೇರಲಾಗಿದ್ದ ತುರ್ತು ಪರಿಸ್ಥಿತಿಯ ವಿರುದ್ಧ ವಿದೇಶಗಳಲ್ಲಿ ನೆಲಸಿದ್ದ ಭಾರತೀಯರನ್ನು ಸಂಘಟಿಸಿ ಅವರು ಹೋರಾಟ ನಡೆಸಿದ್ದು ಒಂದು ಅಪೂರ್ವ ಪ್ರಕರಣ. ಅಲ್ಲಿ ಅವರು 'ಇಂಡಿಯನ್ಸ್ ಫಾರ್ ಡೆಮಾಕ್ರಸಿ' ಎಂಬ ವೇದಿಕೆಯನ್ನು ಹುಟ್ಟುಹಾಕಿದರು. 6,000ಕ್ಕೂ ಹೆಚ್ಚು ಭಾರತೀಯರು ಇದರ ಸದಸ್ಯರಾದರು. ಇವರೆಲ್ಲ ಪ್ರತಿಭಟನೆ, ಮೆರವಣಿಗೆ, ಪತ್ರಿಕಾ ಬರವಣಿಗೆ ಹಾಗೂ ಸಭೆಗಳ ಮೂಲಕ ತುರ್ತು ಪರಿಸ್ಥಿತಿಯ ಕರಾಳ ಸ್ಥಿತಿಯನ್ನು ಧೈರ್ಯವಾಗಿ ಜಗತ್ತಿಗೆ ಪರಿಚಯಿಸಿದರು. ಹೋರಾಟಕ್ಕೆ ಹೊರದೇಶಗಳಲ್ಲಿ ದೊಡ್ಡ ಮಟ್ಟದ ಬೆಂಬಲ ದೊರೆಯಿತು.



ಇತ್ತ ಭಾರತದಲ್ಲಿಯೂ ತುರ್ತು ಪರಿಸ್ಥಿತಿ ವಿರೋಧಿಸಿ ತೀವ್ರ ಹೋರಾಟ ನಡೆದಿತ್ತು. ಪ್ರಧಾನಿ ಇಂದಿರಾ ಗಾಂಧಿ ಅವರು ಕೊನೆಗೂ ಲೋಕಸಭಾ ಚುನಾವಣೆ ಘೋಷಣೆ ಮಾಡಿದರು. ಕಾಂಗ್ರೆಸ್ ಸೋಲನುಭವಿಸಿತು. ಜನತಾ ಪಕ್ಷದ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸಲಾಯಿತು. ವಲಸೆ ತೆರಳಿದವರು ಸ್ವದೇಶದ ರಾಜಕೀಯ ಚಟುವಟಿಕೆಗಳಿಗೂ ಹೇಗೆ ಸ್ಪಂದಿಸಬಹುದು ಎಂಬುದಕ್ಕೆ ಇದೊಂದು ಉದಾಹರಣೆ.

'ಮನೆಯನೆಂದು ಕಟ್ಟದಿರು...' ಎಂದು ಕುವೆಂಪು ಬರೆದಿದ್ದಾರೆ. ಚಲನಶೀಲರಾಗಿರಬೇಕು ಎಂಬುದು ಇದರ ತಾತ್ಪರ್ಯ. ವಲಸೆ ಹೋದವರಿಗೆ ತಾಯ್ನಾಡಿನ ಪ್ರೀತಿ ಸದಾ ಸೆಳೆಯುತ್ತಿರುತ್ತದೆ. ಜಗತ್ತಿನ ಯಾವುದೇ ಭಾಗದಲ್ಲಿ ಹೋಗಿ ನೆಲಸಲಿ, ಎಂಥ ಎತ್ತರಕ್ಕೇ ಬೆಳೆಯಲಿ ಹುಟ್ಟಿದೂರಿನ ಸೆಳೆತ ಕಾಡುತ್ತಲೇ ಇರುತ್ತದೆ.

ವಾಚಕರ ವಾಣಿ

ನ್ಯಾಯಾಂಗದ ಪ್ರಬುದ್ಧ ನಡೆ

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಇತ್ತೀಚೆಗೆ ಕೆಲವು ಸೂಕ್ಷ್ಮ ಸಂಗತಿಗಳ ಕುರಿತು ನ್ಯಾಯಾಲಯದಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯಗಳ ಬಗ್ಗೆ ಸುಪ್ರೀಂ ಕೋರ್ಟ್ ಬಹಳ ಗಂಭೀರವಾಗಿ ಪ್ರತಿಕ್ರಿಯಿಸಿತ್ತಲ್ಲದೆ, ಸಂವೇದನಾಶೀಲತೆಗೆ ಸಂಬಂಧಿಸಿದಂತೆ ಪ್ರಕರಣ ತೀವ್ರ ಚರ್ಚೆಯನ್ನೂ ಹುಟ್ಟುಹಾಕಿತ್ತು. ಆದರೆ, ತಾವು ವ್ಯಕ್ತಿಗತವಾಗಿ ಟೀಕಿಸುವ ಉದ್ದೇಶ ಹೊಂದಿರಲಿಲ್ಲ ಎಂದು ಹೇಳಿದ ನ್ಯಾಯಮೂರ್ತಿ, ತಮ್ಮ ನಡೆನುಡಿಗಳಿಂದ ಯಾರಿಗಾದರೂ ನೋವಾಗಿದ್ದಲ್ಲಿ ವಿಷಾದ ವ್ಯಕ್ತಪಡಿಸುವುದಾಗಿ ಬಹಿರಂಗವಾಗಿ ಹೇಳಿದ್ದರು. ಇದನ್ನು ಗಮನಿಸಿದ ಸುಪ್ರೀಂ ಕೋರ್ಟ್ ಕೂಡ ಪ್ರಕರಣವನ್ನು ಹೆಚ್ಚು ಲಂಬಿಸದೆ, ಅನಗತ್ಯ ವಾದ-ವಿವಾದಗಳಿಗೆ ಆಸ್ಪದವಾಗದಂತೆ ಭವಿಷ್ಯದಲ್ಲಿ ಜಾಗರೂಕತೆಯಿಂದ ಅಭಿಪ್ರಾಯ ವ್ಯಕ್ತಪಡಿಸಲು ಸೂಚಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿರುವುದು ಪ್ರಬುದ್ಧ ನಡೆಯಾಗಿದೆ.

ಜೊತೆಗೆ ನ್ಯಾಯಾಲಯದ ನಡಾವಳಿಗಳನ್ನು ಜಾಲತಾಣಗಳ ಮೂಲಕ ನೇರ ಪ್ರಸಾರ ಮಾಡುವುದನ್ನು ನಿರ್ಬಂಧಿಸುವ ಮಾತುಗಳಿಗೂ ಕೋರ್ಟ್ ವಿರಾಮ ಹಾಕಿರುವುದು ಸಮಂಜಸವಾಗಿದೆ. ಎಲ್ಲವನ್ನೂ ಮುಚ್ಚಿಡುವುದು ಪರಿಹಾರವಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ನ್ಯಾಯಾಲಯಗಳ ಮೇಲಿನ ವಿಶ್ವಾಸ ವರ್ಧಿಸಲು ಜನಸಾಮಾನ್ಯರೂ ಕಲಾಪಗಳನ್ನು ವೀಕ್ಷಿಸಲಿ ಎಂದು ಕೋರ್ಟ್ ಹೇಳಿರುವುದು ಸರಿಯಾಗಿದೆ. ಈ ಬೆಳವಣಿಗೆಗಳು ನ್ಯಾಯಾಂಗದ ಬಗ್ಗೆ ಸಾಮಾನ್ಯರು ಇಟ್ಟಿರುವ ಭರವಸೆಗೆ ಪುಷ್ಟಿ ನೀಡುವಂತಿವೆ.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ನೈತಿಕತೆ ಮರೆಯಾದ ಸಂದರ್ಭದಲ್ಲಿ...

ಕುಶಾಲನಗರದ ಪಟ್ಟಣ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಬುಧವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಸದಸ್ಯರು ಕಾಂಗ್ರೆಸ್‌ಗೆ ಬೆಂಬಲ ನೀಡಿರುವುದನ್ನು ನೋಡಿದ ಮೇಲೆ, ರಾಜಕೀಯ ಪಕ್ಷಗಳಲ್ಲಿ ಈಗ ಯಾವುದೇ ಬಗೆಯ ನೈತಿಕತೆ ಉಳಿದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ರಾಜಕೀಯ ಮೇಲಾಟದಲ್ಲಿ ಯಾವ ಪಕ್ಷದ ಸದಸ್ಯರು ಯಾವ ಸಂದರ್ಭದಲ್ಲಿ ಯಾರ ಕೈಹಿಡಿಯುತ್ತಾರೋ ಯಾರಿಗೆ ಕೈಕೊಡುತ್ತಾರೋ ಯಾರಿಗೂ ಗೊತ್ತಿರುವುದಿಲ್ಲ. ಇಂತಹ ಮೇಲಾಟಗಳ ಮೂಲಕ, ನೈತಿಕತೆ ಇರುವ ಯಾರೂ ರಾಜಕೀಯಕ್ಕೆ ಬರಬಾರದು ಎನ್ನುವ ಸಂದೇಶವನ್ನು ಜನಪ್ರತಿನಿಧಿಗಳು ನೀಡುತ್ತಿರುತ್ತಾರೆ. ಇದನ್ನು ನೋಡಿದ ಮೇಲಾದರೂ ರಾಜಕಾರಣಿಗಳ ಬಗ್ಗೆ ಜನಸಾಮಾನ್ಯರು ಹುಷಾರಾಗಿ ಇರಬೇಕಾಗುತ್ತದೆ.

ಪ್ರಸನ್ನ ಗಣಪತಿ ಎ.ಎಚ್., ಬೆಂಗಳೂರು

ನಂದಿನಿ ಉತ್ಪನ್ನ: ರೈತರಿಗೆ ಫಲ ಸಿಗಲಿ

'ನಂದಿನಿ' ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತಿರುವುದು ಸಂತೋಷದ ಸಂಗತಿ. ಇಂತಹ ಸಂದರ್ಭದಲ್ಲಿ ಬೆಲೆ ನಿಗದಿ ಕುರಿತೂ ಸಂಸ್ಥೆ ಹೆಚ್ಚು ಎಚ್ಚರಿಕೆ ವಹಿಸಬೇಕು. ರೈತರು ಮತ್ತು ಗ್ರಾಹಕರು ಈ ಎರಡೂ ವರ್ಗಗಳ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಸೂಕ್ತ ರೀತಿಯಲ್ಲಿ ಬೆಲೆ ನಿಗದಿಪಡಿಸಬೇಕು. ಲಾಭಾಂಶದಲ್ಲಿ ಹೆಚ್ಚಿನ ಅಂಶವು ರೈತರಿಗೆ ತಲುಪುವ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು.

ಜಿ.ಪಿ.ದಯಾನಂದ, ಬೆಂಗಳೂರು

ಕನ್ನಡ ಮಾಧ್ಯಮ ಸುಭದ್ರಗೊಳಿಸುವ ಸವಾಲು

ಎಂಟು ದಶಕಗಳ ಹಿಂದೆ ಸ್ಥಾಪನೆಯಾದ ಬೆಂಗಳೂರಿನ ಬ್ಯಾಟರಾಯನಪುರದ 'ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ'ಯು ಹೈಟೆಕ್ ಆಗಿ ಪರಿವರ್ತನೆಗೊಂಡಿರುವ ಸುದ್ದಿಯು (ಪ್ರ.ವಾ., ಸೆ. 26) ಎಲ್ಲರ ಸಂತೋಷ ಹಾಗೂ ಪ್ರಶಂಸೆಗೆ ಅರ್ಹವಾದುದು. ಆದರೆ, 'ಈ ವರ್ಷ ಇಂಗ್ಲಿಷ್ ಮಾಧ್ಯಮ ಆರಂಭಿಸಲಾಗಿದ್ದು, 30 ಮಕ್ಕಳು ಕಲಿಯುತ್ತಿದ್ದಾರೆ. ಇಂಗ್ಲಿಷ್ ಮಾಧ್ಯಮ ಆರಂಭಿಸಿದ ಬಳಿಕ ಸ್ಥಳೀಯರೂ ಮಕ್ಕಳನ್ನು ಶಾಲೆಗೆ ಕಳುಹಿಸಲು ಮುಂದಾಗಿದ್ದಾರೆ' ಎಂಬ ಪ್ರಭಾರ ಮುಖ್ಯೋಪಾಧ್ಯಾಯರ ಮಾತು ಸ್ವಲ್ಪ ಅಸಮಾಧಾನವನ್ನು ಉಂಟುಮಾಡುತ್ತದೆ.

ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಸ್ಥಾಪಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳು ಇವೆ. ಸರ್ಕಾರಿ ಶಾಲೆಯನ್ನು ಸುಸಜ್ಜಿತಗೊಳಿಸಿ ಅಲ್ಲಿರುವ ಕನ್ನಡ ಮಾಧ್ಯಮದ ವ್ಯವಸ್ಥೆಯನ್ನು ಸುಭದ್ರಗೊಳಿಸುವುದು ಸವಾಲಿನ ಕೆಲಸವಾದರೂ ಶೈಕ್ಷಣಿಕ ದೃಷ್ಟಿಯಿಂದ ಇದು ಉತ್ತಮವಾದುದು ಮತ್ತು ಅಪೇಕ್ಷಣೀಯವಾದುದು. ಅದುಬಿಟ್ಟು ಇಂಗ್ಲಿಷ್ ಮಾಧ್ಯಮಕ್ಕೆ ಆದ್ಯತೆ ನೀಡುವುದು, ಮಗನನ್ನು ಚೆನ್ನಾಗಿ ಓದಿಸಿ ಶ್ರೀಮಂತರ 'ಮನೆ ಅಳಿಯ'ನನ್ನಾಗಿ ಮಾಡಿದ ಹಾಗೆ ಆಗುತ್ತದೆ. ಕಟ್ಟಡದ ಜೊತೆಗೆ ಅಗತ್ಯವಿರುವಷ್ಟು ಶಿಕ್ಷಕರ ನೇಮಕಾತಿ, ಶಿಕ್ಷಕರನ್ನು ಸಶಕ್ತರನ್ನಾಗಿಸುವುದು, ಆಟ, ಪಾಠ, ಪಠ್ಯೇತರ ಚಟುವಟಿಕೆಗಳಂತಹ ಸಮಗ್ರ ಯೋಜನೆಗಳೊಂದಿಗೆ ಆ ಸುಸಜ್ಜಿತ ಕಟ್ಟಡದಲ್ಲಿ ಕಲಿಕೆ ಪ್ರಧಾನವಾಗಬೇಕು. ಆಗ ಕನ್ನಡ ಮಾಧ್ಯಮ ತನಗೆ ತಾನೇ ಜನಾಕರ್ಷಣೀಯ ಆಗುತ್ತದೆ ಮತ್ತು ಶಿಕ್ಷಣದ ನಿಜವಾದ ಉದ್ದೇಶವೂ ಬಹುಪಾಲು ಈಡೇರುತ್ತದೆ.

ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾತೃಭಾಷಾ ಮಾಧ್ಯಮದಲ್ಲಿಯೇ ಇರಬೇಕು ಎಂಬ ಶಿಕ್ಷಣತಜ್ಞರ ಅಭಿಪ್ರಾಯವನ್ನು ಒಂದು ಸಮಾಜ ತನ್ನ ದೇಶದ ಸುಸ್ಥಿರ ಹಾಗೂ ಸುಕ್ಷೇಮ ಭವಿಷ್ಯದ ದೃಷ್ಟಿಯಿಂದ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಕಾವ್ಯ ರಸದೌತಣ!

ಈ ಬಾರಿಯ ದಸರಾದಲ್ಲಿ
ಮೊದಲ ಬಾರಿಗೆ ವಿದೇಶಿ
ಕವಿಗಳಿಗೆ ಆಹ್ವಾನವಂತೆ!
ಸಹೃದಯರಿಗೆ ಸಿಗಲಿ ಬಿಡಿ
ಬಗೆಬಗೆಯ ಕಾವ್ಯ ರಸದೌತಣ,
ಆದರೆ, ಹಿಂದೊಮ್ಮೆ
ಹೆಸರನ್ನೂ ಮುದ್ರಿಸಿ
ನೀಡಿಬಿಟ್ಟಿದ್ದರು ಆಯೋಜಕರು
ಸ್ವರ್ಗಸ್ಥ ಕವಿಗೂ
ಆತ್ಮೀಯ ಆಮಂತ್ರಣ!

ಮ.ಗು.ಬಸವಣ್ಣ
ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮೀಸಲಾತಿ ಪರ ಇರುವವರು ಒಳಮೀಸಲಾತಿಯನ್ನೂ ಬೆಂಬಲಿಸಬೇಕು

ಒಳ ಮೀಸಲಾತಿಯು 'ಅಂಬೇಡ್ಕರ್ ಸಿದ್ಧಾಂತ'ದ ಭಾಗವೇ ಆಗಿದೆ. ಇದರ ಜಾರಿಯಿಂದ ಯಾವ ದಲಿತ ಜಾತಿಯೂ ಮೀಸಲಾತಿಯನ್ನು ಕಳೆದುಕೊಳ್ಳುವುದಿಲ್ಲ. ಆದರೆ, ಜನಸಂಖ್ಯೆ ಮತ್ತು ಪ್ರಾತಿನಿಧ್ಯದ ಆಧಾರದಲ್ಲಿ ಮೀಸಲಾತಿ ಪ್ರಮಾಣ ಮರುವಿಂಗಡಣೆಯಷ್ಟೇ ಆಗುತ್ತದೆ. ಒಳ ಮೀಸಲಾತಿ ಜಾರಿಯಿಂದ ದಲಿತರ ಶಕ್ತಿ ಇನ್ನಷ್ಟು ಹೆಚ್ಚಾಗುತ್ತದೆ

• ವಿಕಾಸ್ ಆರ್. ಮೌರ್ಯ

ಅಸ್ಪೃಶ್ಯತೆ ಆಚರಣೆಯ ಮೂಲ ಜಾತಿ ಪದ್ಧತಿಯಲ್ಲಿದ್ದು, ಜಾತಿ ಪದ್ಧತಿಯ ಮೂಲ ಹಿಂದೂ ಧರ್ಮದ 'ಶ್ರೇಣೀಕೃತ' ಚಾತುರ್ವರ್ಣ ವ್ಯವಸ್ಥೆಯಲ್ಲಿದೆ. ಇದರ ಧಾರ್ಮಿಕ ಸಿದ್ಧಾಂತವು ಹುಟ್ಟಿನ ಆಧಾರದಲ್ಲಿ ವ್ಯಕ್ತಿಗಳ ಗುಣ, ಸ್ಥಾನಮಾನವನ್ನು ನಿರ್ಧರಿಸುವುದರಿಂದ ಸಮುದಾಯಗಳನ್ನು ಮೇಲ್ಜಾತಿ ಹಾಗೂ ಕೆಳಜಾತಿ ಎಂದು ಭೇದಿಸದೇ ಉಳಿಯಲಾರದು, ಬೆಳೆಯಲಾರದು. ಇದು, ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿರುವ ದಲಿತರನ್ನು ಶತಮಾನಗಳಿಂದಲೂ ಕಿತ್ತು ತಿಂದಿದೆ. ಭಾರತದ ಇತಿಹಾಸದಲ್ಲಿ ಅಸ್ಪೃಶ್ಯತೆಯೆಂಬ ಅಮಾನವೀಯ ಪದ್ಧತಿಯು ಸಾವಿರಾರು ವರ್ಷಗಳಿಂದಲೂ ದಲಿತೇತರರನ್ನು ಅಪರಾಧಿಗಳನ್ನಾಗಿಸುತ್ತಾ, ದಲಿತರನ್ನು ಸಂತ್ರಸ್ತರನ್ನಾಗಿಸುತ್ತಾ ಬಂದಿದೆ. ದಲಿತೇತರ ಮೇಲ್ಜಾತಿಗಳು ಈ ಅಪರಾಧಿತನವನ್ನು ಇಂದಿಗೂ 'ಆನಂದಿಸುತ್ತಿರುವುದು' ಚಿಂತೆಗೀಡು ಮಾಡುವ ಸಂಗತಿ.

ವಿಪರ್ಯಾಸವೆಂದರೆ, ಮೇಲಿನಿಂದ ಹರಿದು ಬಂದಿರುವ ಈ ಜಾತಿ ಪದ್ಧತಿ ಎಂಬ ಗಟಾರದ ನೀರು, ದಲಿತರೊಳಗೂ ಭೇದವನ್ನು ಸೃಷ್ಟಿಸಿದೆ. ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳಿಂದಾಗಿ ದಲಿತರಲ್ಲಿಯೂ ಶ್ರೇಣೀಕರಣವನ್ನು ಸ್ಥಾಪಿಸಿದೆ. ದಲಿತೇತರ ಜಾತಿಗಳು ದಲಿತರನ್ನು ಇಡಿಯಾಗಿ ಅಸ್ಪೃಶ್ಯರೆಂದು ಪರಿಗಣಿಸಿ, ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುವ ಕಾರಣದಿಂದ ದಲಿತರು 'ಏಕರೂಪಿ' ಸಮುದಾಯದಂತೆ ಕಂಡುಬಂದರೂ ಜಾತಿ ಪದ್ಧತಿಯು ಅವರನ್ನೂ ಛಿದ್ರಗೊಳಿಸಿದೆ; ಸಮಾನ ಶೋಷಿತರನ್ನು ಸದೆಬಡಿದಿದೆ.

1937ರಲ್ಲಿ ಇದರ ವಿರುದ್ಧ ಅಂಬೇಡ್ಕರರು ದಲಿತರಿಗೆ ಹೀಗೆ ಎಚ್ಚರಿಕೆ ನೀಡಿದ್ದರು: '... ಜಾತಿಭೇದದ ಮೂಲ ಹೊಣೆಗಾರಿಕೆಯನ್ನು ಹಿಂದೂ ಸಮಾಜವೇ ಹೊರಬೇಕು. (ಹಾಗೆಯೇ) ನಾವು ನಮ್ಮ ಜವಾಬ್ದಾರಿಯನ್ನು ಮರೆತುಬಿಡುವುದು ಆತ್ಮಹತ್ಯಾತ್ಮಕವಾಗುತ್ತದೆ. ನಮ್ಮೊಳಗಿನ ಜಾತಿಭೇದವನ್ನು ತೊಡೆದು ಹಾಕಬೇಕಾದದ್ದು ಹಾಗೂ ಜಾತಿ ತಾರತಮ್ಯ ಸಿದ್ಧಾಂತವನ್ನು ನಮ್ಮೊಳಗೆ ನುಸುಳದಂತೆ ತಡೆಗಟ್ಟಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇದನ್ನು ಸಾಧಿಸದೇ ನಾವು ಏಳಿಗೆ ಹೊಂದುವುದು ಅಸಾಧ್ಯ. ನಾವು ನಮ್ಮ ಜಾತಿಪ್ರತಿಷ್ಠೆಗಳಿಗೆ ಅಂಟಿಕೊಂಡರೆ ನಮ್ಮ ಮೇಲಿನ ಅನ್ಯಾಯಗಳ ವಿರುದ್ಧ ಹೋರಾಡುವುದು ಅಸಾಧ್ಯ'.

ಈ ದಿಸೆಯಲ್ಲಿ ಒಳ ಮೀಸಲಾತಿಯು 'ಅಂಬೇಡ್ಕರ್ ಸಿದ್ಧಾಂತ'ದ ಭಾಗವೇ ಆಗಿದೆ. ಒಳ ಮೀಸಲಾತಿ ಜಾರಿಯಿಂದ ಯಾವ ದಲಿತ ಜಾತಿಯೂ ಮೀಸಲಾತಿ ಕಳೆದುಕೊಳ್ಳುವುದಿಲ್ಲ. ಆದರೆ, ಜನಸಂಖ್ಯೆ ಮತ್ತು ಪ್ರಾತಿನಿಧ್ಯದ ಆಧಾರದಲ್ಲಿ ಮೀಸಲಾತಿ ಪ್ರಮಾಣದ ಮರುವಿಂಗಡಣೆಯಷ್ಟೇ ಆಗುತ್ತದೆ. ಹಾಗಾಗಿ ಮೀಸಲಾತಿಯ ಪರ ಇರುವವರು ಒಳಮೀಸಲಾತಿಯ ಪರವೂ ಇರಲೇಬೇಕು.

ಯಾವುದೇ ದೇಶದ ಇತಿಹಾಸದಲ್ಲಿಯೂ ಬೇಗ ನಗರೀಕರಣಗೊಂಡ ವ್ಯಕ್ತಿ, ಸಮುದಾಯಗಳು ತುಲನಾತ್ಮಕವಾಗಿ ಗ್ರಾಮೀಣರಿಗಿಂತ ಹೆಚ್ಚು ಶಿಕ್ಷಣ ಹಾಗೂ ಆರ್ಥಿಕ ಸೌಲಭ್ಯ ಪಡೆಯುತ್ತವೆ. ದಲಿತ ಜಾತಿಗಳೂ ಇದಕ್ಕೆ ಹೊರತಲ್ಲ. ಸಮುದ್ರ ತಟದ ಊರುಗಳಲ್ಲಿ ವಾಸವಿದ್ದ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮದೇ ಆದ ಕುಲಕಸುಬು ಹೊಂದಿಲ್ಲದೆ ಮೇಲ್ಜಾತಿಗಳ ಚಾಕರಿ ಮಾಡುವ ಜಾತಿಗಳು ಹಳ್ಳಿಗಳನ್ನು ಬಿಟ್ಟು ಬೇಗ ಶಿಕ್ಷಣ ಪಡೆದುಕೊಂಡವು. ಇದಕ್ಕೆ ಮುಖ್ಯ ಕಾರಣ, ಕ್ರೈಸ್ತ ಮಿಷನರಿಗಳು. ಇವುಗಳು ಮೊದಲು ಕಾಲಿಟ್ಟದ್ದು ಸಮುದ್ರ ತೀರದ ನಗರಗಳಿಗೆ. ಹಾಗಾಗಿ, ಆರಂಭಿಕ ಶಿಕ್ಷಣ ಪಡೆದು ನಗರೀಕರಣಗೊಂಡ ಚಮ್ಮಾರ್, ಮಹಾರ್ ಮುಂತಾದ ಜಾತಿಯ ವ್ಯಕ್ತಿಗಳು ಬ್ರಿಟಿಷ್ ಸೇನೆಯಲ್ಲಿ ಸೇರುವಂತಾಯಿತು. ರೈಲ್ವೆ, ಹಡಗು ನಿಲ್ದಾಣ, ರಸ್ತೆ-ಕಟ್ಟಡ ನಿರ್ಮಾಣಗಳಲ್ಲಿ ದೊರಕಿದ ಕೂಲಿ ಕೆಲಸಗಳು ಹಳ್ಳಿಯ ಕಸುಬಿನಿಂದ ಬಿಡುಗಡೆ ನೀಡಿದವು.

ಕರ್ನಾಟಕದಲ್ಲಿ ಮೈಸೂರು ಪ್ರಾಂತ್ಯದ ದಲಿತ ಜಾತಿಗಳು ಮುಂದುವರಿದಿದ್ದು, ನಿಜಾಮನ ಪ್ರಾಂತ್ಯದಲ್ಲಿದ್ದ ಹೈದರಾಬಾದ್ ಕರ್ನಾಟಕದ ದಲಿತರು ಹಿಂದುಳಿದಿರುವುದರಲ್ಲಿ ಪ್ರಾದೇಶಿಕ ಅಸಮಾನತೆಯೂ ಒಂದು ಕಾರಣವಾಗಿದೆ. ಈ ಬೆಳವಣಿಗೆಯು ಇತರೆ ದಲಿತ ಜಾತಿಗಳಿಗಿಂತಲೂ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಕೆಲವು ದಲಿತ ಜಾತಿಗಳನ್ನು ಮುಂದುವರಿಯುವಂತೆ ಮಾಡಿತು. ಈ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಜೀವನಕ್ಕಾಗಿ ಕುಲಕಸುಬನ್ನು ಆಧರಿಸಿದ್ದ ವಾಲ್ಮೀಕಿ, ಮಜಬಿ ಸಿಖ್, ಮಾಂಗ್, ಅರುಂದತಿಯಾರ್, ಮಾದಿಗ ಮುಂತಾದ ಜಾತಿಗಳು ತುಲನಾತ್ಮಕವಾಗಿ ಹಿಂದುಳಿಯಬೇಕಾಯಿತು. ಆನಂತರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ, ರೂಪಿಸಿದ ನೀತಿಗಳು, ಘನತೆಯನ್ನು ಮರಳಿ ಪಡೆಯಲು ನಡೆಸಿದ ಹೋರಾಟಗಳು ದಲಿತರ ಬದುಕಿನಲ್ಲಿ ಗಮನಾರ್ಹ ಬದಲಾವಣೆ ತಂದವು. ಇದರ ಫಲಿತವನ್ನು ಅವರೇ ಕೊನೆಗಾಲದಲ್ಲಿ ಭಾವಿಸಿದಂತೆ ಹೆಚ್ಚು ನಗರೀಕರಣಗೊಂಡ ವಿದ್ಯಾವಂತ ವರ್ಗಗಳು ಪಡೆದುಕೊಂಡವು. ಅವು, ತಮ್ಮ ಸಹೋದರ-ಸಹೋದರಿಯರ ಕೈಹಿಡಿದು ಮೇಲೆತ್ತುವುದನ್ನು ಮರೆತವು. ಈಗ ಒಳಮೀಸಲಾತಿಯನ್ನು ಸಾಂವಿಧಾನಿಕವಾಗಿ ಪಡೆಯುವ ಹಕ್ಕಿನ ವಿರುದ್ಧವೂ ಕೆಲವು ಮುಂದುವರಿದ ದಲಿತ ವರ್ಗ ದನಿ ಎತ್ತಿದೆ. ಇದು ಸಾಮಾಜಿಕ ನ್ಯಾಯದ ವಿರುದ್ಧದ ನಡೆ.

ದಲಿತರಲ್ಲಿಯೇ ಸಫಾಯಿ ಕರ್ಮಚಾರಿಗಳು ಅತಿ ತಳಸಮುದಾಯವಾಗಿದ್ದಾರೆ. ಬಿಹಾರ ಮತ್ತು ಮಧ್ಯಪ್ರದೇಶದ ಮುಸ್ಸಾಹರ್, ತೆಲಂಗಾಣ ಮತ್ತು ಕರ್ನಾಟಕದ ಮಾದಿಗರು, ದಕ್ಕಲಿಗರು, ಗೋಸಂಗಿಗಳು ಮತ್ತು ಉತ್ತರ ಭಾರತದ ವಾಲ್ಮೀಕಿಗಳು ದಲಿತರಲ್ಲಿ ದಲಿತರಾಗಿದ್ದಾರೆ. ಇತರೆ ದಲಿತರಿಂದ ತಾರತಮ್ಯಕ್ಕೆ ಒಳಗಾಗುತ್ತಾರೆ. ಹಾಗಾಗಿಯೇ ಮೀಸಲಾತಿ ಹಂಚಿಕೆಯಲ್ಲಿ ಕಡೆಯ ಫಲಾನುಭವಿಗಳಾಗಿರುತ್ತಾರೆ.

ಒಳಮೀಸಲಾತಿ ಆಗ್ರಹಕ್ಕೆ ಬಹುಮುಖ್ಯ ಕಾರಣ, ದಲಿತರೊಳಗಿನ ಜಾತಿಗಳಿಗೆ ಮೀಸಲಾತಿಯು ಅಸಮಾನವಾಗಿ ಹಂಚಿಕೆ ಆಗುತ್ತಿರುವುದಾಗಿದೆ. ದೇಶದಾದ್ಯಂತ ಹಲವು ರಾಜ್ಯಗಳು ಪ್ರಾತಿನಿಧ್ಯದ ಕೊರತೆ ಕುರಿತು ಅಧ್ಯಯನ ಮಾಡಲು ಆಯೋಗಗಳನ್ನು ರಚಿಸಿ ವರದಿ ಪಡೆದಿದ್ದು, ಅದರಿಂದ ಈ ತಾರತಮ್ಯ ಸಾಬೀತಾಗಿದೆ.

ಕರ್ನಾಟಕದಲ್ಲಿ 101 ದಲಿತ ಜಾತಿಗಳಿಗೆ (ಪರಿಶಿಷ್ಟ ಜಾತಿಗಳು) ಶೇ 15ರಷ್ಟು ಮೀಸಲಾತಿ (ಈಗ ಶೇ 17) ಕಲ್ಪಿಸಲಾಗಿದೆ. ದುರಂತವೆಂದರೆ, ಸಂವಿಧಾನ ಜಾರಿಯಾಗಿ 74 ವರ್ಷ ಕಳೆದ ನಂತರವೂ ಕೆ.ರತ್ನಪ್ರಭಾ ಸಮಿತಿಯ ಪ್ರಕಾರ, 2020ರಲ್ಲಿ ಪದವಿ ಕಾಲೇಜಿಗೆ ಪ್ರವೇಶ ಪಡೆದಿರುವ ದಲಿತ ಮಕ್ಕಳ ಸಂಖ್ಯೆ 1 ಲಕ್ಷವನ್ನೂ ಮೀರುವುದಿಲ್ಲ. ಉದ್ಯೋಗಕ್ಕೆ ಬಂದಾಗ 2016ರಲ್ಲಿನ ಒಟ್ಟಾರೆ ಸರ್ಕಾರಿ ನೌಕರರಲ್ಲಿ ದಲಿತರ ಪಾಲು ಕೇವಲ ಶೇ 10.65. ಇದರಲ್ಲಿ ಗ್ರೂಪ್ 'ಎ' ಶೇ 3.74, ಗ್ರೂಪ್ 'ಬಿ' ಶೇ 8.80. ಇಡೀ ದಲಿತ ಜಾತಿಗಳ ಜನಸಂಖ್ಯೆಗೆ ಹೋಲಿಸಿದಾಗ ಪ್ರತಿ ನೂರು ಜನರಲ್ಲಿ '5 ಜನ' (ಶೇ 4.51) ಮಾತ್ರ ಮೀಸಲಾತಿಯಿಂದಾಗಿ ಉದ್ಯೋಗ ಪಡೆದಿದ್ದಾರೆ. ಇದು ಇಂದಿಗೂ ದಲಿತರಿಗೆ ಸಾಂವಿಧಾನಿಕವಾಗಿ ಸಿಗಬೇಕಾದ ಮೀಸಲಾತಿ ಪ್ರಾತಿನಿಧ್ಯ ಸಿಕ್ಕಿಲ್ಲ ಎಂಬುದರ ಜೊತೆಗೆ ಮೀಸಲಾತಿಗಿರುವ ಮಿತಿಯನ್ನೂ ತಿಳಿಸುತ್ತದೆ.

ಇಡಿಯಾಗಿ ದಲಿತರಿಗೆ ಸಂಪೂರ್ಣ ಮೀಸಲಾತಿ ಪ್ರಮಾಣ ಸಿಕ್ಕಿಲ್ಲ ಎಂದಾದ ಮೇಲೆ ಮುಖ್ಯವಾಹಿನಿಯ ಮುಖ ನೋಡದ ಸಫಾಯಿ ಕರ್ಮಚಾರಿಗಳು, ದಕ್ಕಲರು, ದಾಸರಿ, ಮಾಸ್ತಿಕರು, ಸಿಂದ್ ಮಾದಿಗರು ಮುಂತಾದ ದಲಿತ ಜಾತಿಗಳಿಗೆ ಮೀಸಲಾತಿಯ 'ಗುಟುಕು' ಕೂಡ ದಕ್ಕಿರಲಾರದು. ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಅಧ್ಯಯನದ ಪ್ರಕಾರ, ಒಟ್ಟು ಸಫಾಯಿ ಕರ್ಮಚಾರಿಗಳಲ್ಲಿ ಮಾದಿಗರ ಪಾಲು ಬರೋಬ್ಬರಿ ಶೇ 86.30. ಇವರ ಬಳಿ ಯಾವುದೇ ಆಸ್ತಿ ಇಲ್ಲ. ಸಾಕ್ಷರತೆಯ ಮಟ್ಟ ಎಲ್ಲರಿಗಿಂತಲೂ ಕಡಿಮೆ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚು. ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಇಲ್ಲವೇ ಇಲ್ಲ. ಈ ಕಾರಣಗಳಿಂದ ಉದ್ಯೋಗ ಹಾಗೂ ಶೈಕ್ಷಣಿಕ ಮೀಸಲಾತಿ ಪಡೆದವರು ಬೆರಳೆಣಿಕೆ ಎಂದು ಖಚಿತವಾಗಿ ಹೇಳಬಹುದು. 2011ರ ಜನಗಣತಿ ಪ್ರಕಾರ, ಒಟ್ಟು ದಲಿತರ ಸಾಕ್ಷರತೆ ಶೇ 65.32ರಷ್ಟಿದೆ. ಆದರೆ, ಸಫಾಯಿ ಕರ್ಮಚಾರಿಗಳದ್ದು ಶೇ 55.10. ಇವರ ಪ್ರತಿ ನೂರು ಮಕ್ಕಳಲ್ಲಿ 30 ಮಕ್ಕಳು ಶಾಲೆ ಬಿಡುತ್ತಾರೆ. ದೇವದಾಸಿ ಪದ್ಧತಿಯಂತೂ ಹೊಲೆಮಾದಿಗರನ್ನು ಕಿತ್ತು ತಿಂದಿದೆ.

ಕರ್ನಾಟಕದ ದಲಿತರ 101 ಜಾತಿಗಳಲ್ಲಿ 50ಕ್ಕೂ ಹೆಚ್ಚು ಜಾತಿಗಳ ಜನಸಂಖ್ಯೆ ಕಡಿಮೆ ಇರುವ ಕಾರಣ ಮೀಸಲಾತಿ ಮುಟ್ಟೇ ಇಲ್ಲ. ಇವರ ವೃತ್ತಿ ಇಂದಿಗೂ ಭಿಕ್ಷೆ ಬೇಡುವುದು, ಛದ್ಮವೇಷ ತೊಡುವುದು, ಪ್ಲಾಸ್ಟಿಕ್ ಆಯುವುದು, ಮುಂತಾದ ಕುಲಕಸುಬುಗಳನ್ನು ಮಾಡುವುದಾಗಿದೆ. ಇವರು ಬಹುತೇಕ ಅಲೆಮಾರಿಗಳಾಗಿದ್ದು, ಇಂದಿಗೂ ಸ್ಮಶಾನದ ಬಳಿ, ರೈಲ್ವೆ ಹಳಿ, ನಗರದ ಮೋರಿಗಳ ಪಕ್ಕ ಟೆಂಟ್ ಅಥವಾ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಇವರ ಪಾಲಿಗೆ ಸ್ವಂತ ಮನೆ ಎಂಬುದು ಕನಸು.

ರಾಜ್ಯದ ಪರಿಶಿಷ್ಟ ಜಾತಿಗಳಲ್ಲಿ ಜಾತಿ ಪದ್ಧತಿಯ ಶ್ರೇಣಿಯಲ್ಲಿ ಹೊಲೆಯ-ಮಾದಿಗರಿಗಿಂತ ಮೇಲೆ ಗುರುತಿಸಿಕೊಳ್ಳುವ ಲಂಬಾಣಿ, ಭೋವಿ, ಕೊರಮ ಮತ್ತು ಕೊರಚ ಜಾತಿಗಳಿಗೆ ಅಸ್ಪೃಶ್ಯತೆಯ ಕಳಂಕ ಇಲ್ಲದ ಕಾರಣ ವ್ಯಾಪಾರ ವಹಿವಾಟು, ಭೂಹಿಡುವಳಿಯಲ್ಲಿ ಪ್ರಬಲ ಪಾಲುದಾರರಾಗಿದ್ದಾರೆ. ಈ ಮುಕ್ತ ಪ್ರವೇಶ ಹೊಲೆಯ-ಮಾದಿಗರಿಗೆ ಹಿಂದಿನಿಂದಲೂ ಇಲ್ಲ ಹಾಗೂ ಅಸ್ಪೃಶ್ಯತೆ ಆಚರಣೆ ವಿಚಾರದಲ್ಲಿ ಇವರು ಮೇಲ್ಜಾತಿಗಳೊಂದಿಗೆ ಗುರುತಿಸಿಕೊಳ್ಳುತ್ತಾರೆ. ಉನ್ನತ ಹುದ್ದೆಗಳನ್ನು ಅಲಂಕರಿಸುವಲ್ಲಿ ಹೊಲೆಯರೊಂದಿಗೆ ಸ್ಪರ್ಧೆಯಲ್ಲಿದ್ದಾರೆ. ಆದರೆ, ಈ ಕಾರಣವನ್ನು ಮುಂದುಮಾಡಿ ಸ್ಪೃಶ್ಯರನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಿಂದಲೇ ಹೊರಗಿಡುವ ಮಾತುಗಳು ಮುಂದಿನ ದಲಿತರ ಹೋರಾಟದ ಶಕ್ತಿಯನ್ನು ಕುಗ್ಗಿಸುತ್ತವೆ. ಇವರು ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರ್ಪಡೆಯಾಗಿದ್ದು ನಿನ್ನೆಮೊನ್ನೆಯಲ್ಲ. 1920ರಲ್ಲಿಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸೇರ್ಪಡೆ ಮಾಡಿದರು ಎಂಬುದನ್ನು ನಾವೆಲ್ಲರೂ ನೆನಪಿಡಬೇಕಾಗುತ್ತದೆ.

ಒಟ್ಟಾರೆ, ಈ ಮೇಲೆ ತಿಳಿಸಿದ ಕಾರಣಗಳಿಂದಾಗಿ ದಲಿತ ಅಲೆಮಾರಿ ಜಾತಿಗಳ ಜನ ಅತ್ಯಂತ ಶೋಷಿತರು ಎಂಬುದು ಸಾಬೀತಾಗುತ್ತದೆ. ನಂತರ ಮಾದಿಗ ಸಂಬಂಧಿತ ಜಾತಿಗಳು ಹೊಲೆಯ ಸಂಬಂಧಿತ ಜಾತಿಗಳಿಗಿಂತ ಕಡಿಮೆ ಅವಕಾಶಗಳನ್ನು, ಹೊಲೆಯ ಸಂಬಂಧಿತ ಜಾತಿಗಳು ಸ್ಪೃಶ್ಯ ಜಾತಿಗಳಿಗಿಂತ, ಸ್ಪೃಶ್ಯ ಜಾತಿಗಳು ದಲಿತೇತರರಿಗಿಂತ ಕಡಿಮೆ ಅವಕಾಶಗಳನ್ನು ಪಡೆದಿರುವುದು ಕಂಡುಬರುತ್ತದೆ. ಇದೇ ಸಮಯದಲ್ಲಿ ಊರಿನ ಮೇಲ್ಜಾತಿಗಳ ಕೈಗೆ ಸುಲಭವಾಗಿ ಸಿಗುವ ಹೊಲೆಯ-ಮಾದಿಗರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತವೆ ಎಂಬುದನ್ನೂ ಮರೆಯಬಾರದು.

ಒಳ ಮೀಸಲಾತಿಯು ಮೂರು ದಶಕಗಳ ಹಿಂದೆಯೇ ಜಾರಿಗೊಂಡಿದ್ದರೆ, ಮಲದ ಗುಂಡಿಯಲ್ಲಿ ಬಿದ್ದು ಸಾಯುವ, ಪರಂಪರಾಗತವಾಗಿ ಶೌಚಾಲಯಗಳನ್ನು ಸ್ವಚ್ಛಗೊಳಿಸುವ, ಮುತ್ತು ಕಟ್ಟಿಸಿಕೊಳ್ಳುವ, ಭಿಕ್ಷೆ ಬೇಡಿ ಬದುಕು ಸಾಗಿಸುವ, ಕುಲಕಸುಬಿಗೆ ಕಟ್ಟುಬಿದ್ದು ಊರೂರು ಅಲೆಯುತ್ತ ದೇಹ-ಪಾದವನ್ನು ಸವೆಸುವ, ಶಾಲೆ ಬಿಡುವ, ಬಾಲ ಕಾರ್ಮಿಕರಾಗುವ... ಮುಂತಾದ ದಲಿತರ ಸಂಖ್ಯೆ ಕಡಿಮೆಯಾಗುತ್ತಿತ್ತು. ಪಿತ್ರಾರ್ಜಿತ ಆಸ್ತಿಯಂತೆ ಸಫಾಯಿ ಕರ್ಮಚಾರಿಗಳಾಗುವವರ ಸಂಖ್ಯೆಯಲ್ಲಿ ಇಳಿಕೆ ಕಾಣುತ್ತಿತ್ತು. ದಲಿತರ ಸಾಕ್ಷರತೆ ಮಟ್ಟ ಹೆಚ್ಚಾಗುತ್ತಿತ್ತು. ಒಳ ಮೀಸಲಾತಿಯೇತರ ಹೋರಾಟಗಳಿಗೆ ಹೆಚ್ಚು ಬಲ ಬರುತ್ತಿತ್ತು.

ಒಳ ಮೀಸಲಾತಿ ಜಾರಿಯಿಂದ ದಲಿತರ ಬಲ ಹೆಚ್ಚುತ್ತದೆ. ಸಮಸ್ತ ದಲಿತ ಜಾತಿಗಳ ಮುಂದಿರುವ ಹೋರಾಟಗಳಾದ ಉಚಿತ ಶಿಕ್ಷಣ, ಮೀಸಲಾತಿ ಮಿತಿ ಶೇ 50 ರದ್ದತಿ, ಸರ್ಕಾರದ ಉದ್ದಿಮೆಗಳ ಮರುಸ್ಥಾಪನೆ, ಖಾಸಗಿ ಕ್ಷೇತ್ರ ಇರುವವರೆಗೂ ಅಲ್ಲಿಯೂ ಮೀಸಲಾತಿ, ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟ, ಪೌರಕಾರ್ಮಿಕರಿಗೆ ಪ್ರತ್ಯೇಕ ವೇತನ, ಜಾತಿವಿನಾಶ ಚಳವಳಿ, ಸಂಪತ್ತಿನ ಸಮಾನ ಹಂಚಿಕೆ ಮುಂತಾದ ಹೋರಾಟಕ್ಕೆ ಬಲ ಬರುತ್ತದೆ. ಅಂಬೇಡ್ಕರ್ ಕನಸಿದ 'ಪ್ರಭುತ್ವ ಸಮಾಜವಾದ' ಮತ್ತು 'ಪ್ರಬುದ್ಧ ಭಾರತ' ಸ್ಥಾಪನೆಗೆ ಬೃಹತ್ ಶಕ್ತಿಯನ್ನು ಒಟ್ಟುಗೂಡಿಸುತ್ತದೆ. ❖

'ಎಲ್ಲ ಪಕ್ಷಗಳಿಂದ ಮಾದಿಗರಿಗೆ ವಂಚನೆ'

ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳು ಬಹುಸಂಖ್ಯಾತ ಮಾದಿಗ ಸಮುದಾಯವನ್ನು ಮತಬ್ಯಾಂಕ್ ಆಗಿ ಉಪಯೋಗಿಸಿಕೊಂಡವೇ ವಿನಾ, ಈ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಸಿಗಲು ಅನುಕೂಲ ಕಲ್ಪಿಸಲೇ ಇಲ್ಲ. ಸದಾಶಿವ ಆಯೋಗದ ವರದಿಯನ್ನು ಇಟ್ಟುಕೊಂಡು ಎಲ್ಲಾ ರಾಜಕೀಯ ಪಕ್ಷಗಳು ಮಾದಿಗರನ್ನು ವಂಚಿಸಿವೆ.

2013ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಒಳಮೀಸಲಾತಿಗೆ ಒಂದು ತಾರ್ಕಿಕ ಅಂತ್ಯ ಸಿಗಲಿದೆ ಎಂಬ ಭರವಸೆ ಇತ್ತು. ಆದರೆ, ಸರ್ಕಾರದ ಸಂಪುಟದಲ್ಲಿ ಈ ಕುರಿತು ಒಮ್ಮತದ ತೀರ್ಮಾನಕ್ಕೆ ಸಹೋದರ ಸಮುದಾಯಗಳು ಬರಲೇ ಇಲ್ಲ. ಪರಿಶಿಷ್ಟರ ಇತರೆ ಸಮುದಾಯದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿಯೂ ಸರ್ಕಾರ ಸೋತಿತು.

ಇದೀಗ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿರುವ ಸಿದ್ದರಾಮಯ್ಯ ಅವರು ಚುನಾವಣಾ ಸಮಯದಲ್ಲಿ ಒಳಮೀಸಲಾತಿ ಕುರಿತು ನೀಡಿದ ಭರವಸೆಯನ್ನು ಈಗಲಾದರೂ ಈಡೇರಿಸಲಿ. ಸುಪ್ರೀಂ ಕೋರ್ಟ್ ತೀರ್ಪು ಬಂದು ಎರಡು ತಿಂಗಳಾಗುತ್ತಾ ಬಂದರೂ ಸರ್ಕಾರ ಒಳಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಪ್ರಕ್ರಿಯೆಗಳಿಗೆ ಚಾಲನೆ ಕೊಟ್ಟಿಲ್ಲ. ಚುನಾವಣೆ ಸಂದರ್ಭದಲ್ಲಿ ಮಾತನಾಡುವ ಮಾತುಗಳು ಕ್ರಿಯೆಗಳಿಗೆ ಇಳಿದಾಗ ಮಾತ್ರ ಆ ಮಾತುಗಳಿಗೆ ಒಂದು ಕಿಮ್ಮತ್ತು ಇರಲಿದೆ.

ಜಡೇಕುಂಟೆ ಮಂಜುನಾಥ್, ಸಾಮಾಜಿಕ ಕಾರ್ಯಕರ್ತ

'ಸಾಮಾಜಿಕ ನ್ಯಾಯದ ನಿಜ ಅರ್ಥ...'

ಡಾ.ಬಿ.ಆರ್.ಅಂಬೇಡ್ಕರ್ ಅವರು ತಳಸಮುದಾಯಗಳಿಗೆ ಹೇಳಿದ ಶಿಕ್ಷಣ, ಸಂಘಟನೆ, ಹೋರಾಟ ಎಲ್ಲಾ ಕಾಲದ ತುರ್ತು. ಆದರೆ, ಈ ಸಂಘಟನಾತ್ಮಕ ಹೋರಾಟಕ್ಕೆ ಅರ್ಥ ಸಿಗಬೇಕಿದ್ದರೆ ದಲಿತ ಸಮುದಾಯದೊಳಗಿನ ನೂರೊಂದು ಜಾತಿಗಳು ಈಗ ಒಳಮೀಸಲಾತಿ ಜಾರಿಗಾಗಿ ಆಗ್ರಹಿಸಬೇಕಿದೆ. 32 ವರ್ಷ ತಾವು ಪಡೆಯಲೇಬೇಕಾದ ನ್ಯಾಯಯುತ ಹಕ್ಕಿಗಾಗಿ ಮಾದಿಗ ಸಮುದಾಯ ಬೀದಿಯಲ್ಲಿ ಹೋರಾಡುತ್ತಿದೆ. ಇದೀಗ ಒಳಮೀಸಲಾತಿ ಜಾರಿ ಅಧಿಕಾರವನ್ನು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ನೀಡಿರುವುದು ಈ ಹೋರಾಟಕ್ಕೆ ಸಿಕ್ಕ ಜಯವಾಗಿದ್ದರೂ ದಲಿತ ಸಮುದಾಯಗಳ ನಡುವೆ ಬಿರುಕು ಸೃಷ್ಟಿಸುತ್ತಲೇ ಒಂದು ನ್ಯಾಯಯುತ ಬೇಡಿಕೆಯನ್ನು ಈವರೆಗೆ ತಳ್ಳುತ್ತಾ ಬಂದ ಜಾತಿ ರಾಜಕಾರಣದ ವಿರುದ್ಧ ಸಮುದಾಯ ಒಗ್ಗೂಡಬೇಕಿದೆ.

ಒಳ ಮೀಸಲಾತಿ ಜಾರಿ ಹೋರಾಟವೇ ದಲಿತರ ಮುಂದಿನ ಹೋರಾಟಗಳ ಅಸ್ಮಿತೆಯಾಗಿ ರೂಪುಗೊಳ್ಳಲಿದೆ. ಸಾಮಾಜಿಕ ನ್ಯಾಯದ ಪರವಾಗಿ ಮಾತನಾಡುವ ಎಲ್ಲರೂ ಒಳ ಮೀಸಲಾತಿ ಜಾರಿಗಾಗಿ ಒಗ್ಗೂಡಲೇಬೇಕಿದೆ. ಯಾಕೆಂದರೆ, ಒಳ ಮೀಸಲಾತಿ ಜಾರಿಯಾಗುವುದೇ ಸಾಮಾಜಿಕ ನ್ಯಾಯದ ನಿಜ ಅರ್ಥವಾಗಿದೆ. ಈಗ ದಲಿತ ಸಂಘಟನೆಗಳು ಹೇಗೆ ವರ್ತಿಸುತ್ತವೆ, ಹೇಗೆ ಒಗ್ಗೂಡುತ್ತವೆ ಎಂಬುದರ ಮೇಲೆ ಈ ಸಮುದಾಯಗಳ ಮುಂದಿನ ಬದುಕು ಮತ್ತು ಹೋರಾಟ ನಿರ್ಧಾರವಾಗುತ್ತದೆ.

ಮಂಜುಳಾ ಹುಲಿಕುಂಟೆ, ಪತ್ರಕರ್ತೆ



'ಇಚ್ಛಾಶಕ್ತಿಯ ಕೊರತೆ'

ಒಳಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸಿಕಂದರಾಬಾದಿನ 'ಮಾದಿಗ ವಿಶ್ವರೂಪಂ ಮಹಾ ಸಮ್ಮೇಳನ'ದಲ್ಲಿ ಕೊಟ್ಟ ಮಾತಿನಂತೆ ಕೇಂದ್ರ ಸರ್ಕಾರ ಒಳಮೀಸಲಾತಿ ಬೆಂಬಲಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಸಂವಿಧಾನ ಪೀಠದ ತೀರ್ಪು ಬಂದಿದೆ.

ತೀರ್ಪನ್ನು ಸ್ವಾಗತಿಸಿರುವ ಸಿ.ಎಂ ಸಿದ್ದರಾಮಯ್ಯನವರು ಹೈಕಮಾಂಡ್ ಜತೆ ಚರ್ಚಿಸಿ ಒಳ ಮೀಸಲಾತಿ ಜಾರಿ ಮಾಡುವುದಾಗಿ ಹೇಳಿದ್ದಾರೆ. ಇಂದಿನ ಕಾಂಗ್ರೆಸ್ ಹೈಕಮಾಂಡ್ ಆದ ಮಲ್ಲಿಕಾರ್ಜುನ ಖರ್ಗೆ ಅವರು ಒಳ ಮೀಸಲಾತಿಯನ್ನು ಪ್ರಾರಂಭದಿಂದಲೂ ವಿರೋಧಿಸಿಕೊಂಡು ಬಂದ ನಾಯಕರು ಎನ್ನುವುದು ಮಾದಿಗ ಸಮುದಾಯದ ನಾಯಕರ ಆರೋಪ. ಒಳಮೀಸಲಾತಿ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ರಚಿಸಿದ ಸಮಿತಿಯ ಸಭೆಗೆ ಮಾದಿಗ ಸಮುದಾಯದ ಪ್ರಮುಖ ನಾಯಕರಾದ ಕೆ.ಎಚ್.ಮುನಿಯಪ್ಪನವರಿಗೆ ಆಹ್ವಾನವಿರಲಿಲ್ಲ. ಇದು ಒಳಮೀಸಲಾತಿಯ ಜಾರಿ ವಿಚಾರದಲ್ಲಿ ಕಾಂಗ್ರೆಸ್ ಮನಃಸ್ಥಿತಿಯನ್ನು ತೋರಿಸುತ್ತದೆ.

ಮಾದಿಗ ಸಮುದಾಯವು ಪರಿಶಿಷ್ಟ ಜಾತಿಯ ಸಮುದಾಯಗಳಲ್ಲಿ ಅತಿ ಹೆಚ್ಚು ತುಳಿತಕ್ಕೊಳಗಾಗಿದೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಬೊಬ್ಬೆ ಹೊಡೆಯುವ ಕಾಂಗ್ರೆಸ್ ಸರ್ಕಾರ, ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳಿಗೂ ಅವರವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯ ಸಾಮಾಜಿಕ ನ್ಯಾಯ ಒದಗಿಸುವ ಸುವರ್ಣಾವಕಾಶವನ್ನು ಕಳೆದುಕೊಳ್ಳದಿರಲಿ.

ಎಚ್.ವೆಂಕಟೇಶ ದೊಡ್ಡೇರಿ, ಹೈಕೋರ್ಟ್ ವಕೀಲ

ಒಳ ಮೀಸಲಿನ ಒಡಲಾಳ


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹೂವು ಮಾರಾಟ ಮಾಡುತ್ತಿರುವ ಮುಸ್ಲಿಂ ಬಾಲಕನೊಬ್ಬ ಹೂವು ಗುಚ್ಛದ ಮೇಲೆ ಉಗುಳುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾರತದ ದೇವಾಲಯವೊಂದರ ಹೊರಗಡೆ ಪೂಜೆಗಾಗಿ ಹೂವುಗಳನ್ನು ಮಾರುತ್ತಿರುವ ಮುಸ್ಲಿಂ ಬಾಲಕ ಬಾಯಲ್ಲಿ ನೀರು ತುಂಬಿ ನಂತರ ಹೂವಿನ ಮೇಲೆ ಉಗುಳುತ್ತಿದ್ದಾನೆ ಎಂಬರ್ಥದಲ್ಲಿ ಈ ವಿಡಿಯೊವನ್ನು ವಿಶ್ಲೇಷಿಸಿ 'ಎಕ್ಸ್', ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಲಾಗುತ್ತಿದೆ. ಇದಕ್ಕೆ ಫ್ಲವರ್ ಜಿಹಾದ್ ಎಂಬಂತಹ ಒಕ್ಕಣೆಗಳನ್ನೂ ನೀಡಲಾಗುತ್ತಿದೆ. ಆದರೆ, ಇದು ಸುಳ್ಳು.

ಇದು ಭಾರತದಲ್ಲಿ ನಡೆದಿರುವ ಘಟನೆಯ ವಿಡಿಯೊ ಅಲ್ಲ, ಪಾಕಿಸ್ತಾನದಲ್ಲಿ ನಡೆದಿರುವುದು. ವಿಡಿಯೊದ ಕೀ-ಫ್ರೇಮ್‌ಗಳನ್ನು ವಿಭಜಿಸಿ ರಿವರ್ಸ್ ಇಮೇಜ್ ಶೋಧ ಮಾಡಿದಾಗ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಪಾಕಿಸ್ತಾನದ್ದು ಎಂಬುದು ತಿಳಿದು ಬಂತು. ಸೆ.1ರಂದು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಕೂಡ ಮಾಡಲಾಗಿದೆ. ಜೊತೆಗೆ ವಿಡಿಯೊದಲ್ಲಿ ಕಾಣಿಸುವ ಕಾರಿನ ನಂಬರ್ ಪ್ಲೇಟ್‌ನಲ್ಲಿ ನೋಂದಣಿ ಸಂಖ್ಯೆ ಕೂಡ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ್ದು ಎಂದು ಬೂಮ್‌ಲೈವ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಪವಿತ್ರ ಪ್ರೇಮ

ನುಡಿ ಬೆಳಗು 32



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಸಂಬಂಧಗಳು ಯಾಕೆ ಕೆಡತಾವ? ಈ ಪ್ರಶ್ನೆಗೆ ಉತ್ತರ ಬೇಕು ಅಂದರ ಸಂಬಂಧಗಳು ಯಾಕೆ ಕೂಡ್ತೈತಿ ಅನ್ನೋದನ್ನ ಮೊದಲು ತಿಳಕೋಬೇಕು. ಉದ್ದೇಶ ಇಟಕೊಂಡು ಕೂಡ್ತೈತಿ, ಉದ್ದೇಶ ಈಡೇರಿಲ್ಲ ಅಂದರ ದೂರವಾಗತೈತಿ ಅಷ್ಟೆ. ವಸಂತ ಮಾಸ ಬಂದಾಗ ಕೋಗಿಲೆ ಹಾಡತೈತಿ. ಕೋಗಿಲೆಯ ಹಾಡನ್ನು ಕೇಳಿ ಮಾವಿನ ಗಿಡ ತನ್ನ ಚಿಗುರನ್ನೇ ನೀಡತೈತಿ. ಚಿಗುರನ್ನು ನೀಡಿದ ಮರ, 'ಎಲ್ಲಿ ಎರಡು ರೂಪಾಯಿ ತಾ' ಎಂದು ಕೇಳಿಲ್ಲ. ನಾವು ಮನೆ ಕಟ್ಟಿಸಿದರೆ ಇದಕ್ಕಿಷ್ಟು ಬಾಡಿಗೆ ಕೊಡಿ ಅಂತೀವಿ. ಆದರೆ ನಿಸರ್ಗದಲ್ಲಿ ಹಾಂಗಿಲ್ಲ. ಎಷ್ಟು ಪಕ್ಷಿಗಳು ಗಿಡಗಳ ಮೇಲೆ ಗೂಡು ಕಟ್ಟ್ಯಾವ, ಯಾವುದಾದರೂ ಗಿಡ ಬಾಡಿಗೆ ಕೇಳ್ಯೆತೇನು? ಅದು ಪವಿತ್ರ ಪ್ರೇಮ.

ಏಳನೇ ಶತಮಾನದಲ್ಲಿ ಅರಬ್ ದೇಶದಲ್ಲಿ ಲೈಲಾ ಮಜ್ನು ಅಂತ ಪ್ರೇಮಿಗಳಿದ್ದರು. ಲೈಲಾನ್ನ ಮಜ್ನು ಬಹಳ ಪ್ರೀತಿ ಮಾಡ್ತಿದ್ದ. ಆಕಿ ಮೇಲೆ ಕವನ ಬರೀತಿದ್ದ. ಕವನ ಬರೆದರೆ ಹೊಟ್ಟೆ ತುಂಬೋದಿಲ್ಲ ಅಂತ ಲೈಲಾನ ಅಪ್ಪ ಆಕಿಯನ್ನು ಬೇರೆ ಹುಡುಗನೊಂದಿಗೆ ಮದುವೆ ಮಾಡಿದ. ಮಜ್ನುಗೆ ಹುಚ್ಚುಹಿಡದಂಗೆ ಆತು. ಆ ದೇಶದ ದೊರೆ ಇವನ ಸ್ನೇಹಿತ. ಅವ ಮಜ್ನು ಕರೆದು 'ನಾನು ನಿನ್ನ ಲೈಲಾನ್ನ ನೋಡೇನಿ, ಆಕಿ ಏನು ಅಷ್ಟು ಚಲೋ ಇಲ್ಲ. ಈ ದೇಶದ ಹತ್ತು ಸುಂದರಿಯರನ್ನು ಕರೆಸ್ತೀನಿ, ಅವರಲ್ಲಿ ಯಾರಿಗಾದರೂ ಮದುವ್ಯಾಗು' ಎಂದ. ಅದಕ್ಕೆ ಮಜ್ನು 'ನೋಡು, ಲೈಲಾ ಸುಂದರವಾಗಿ ಕಾಣಬೇಕಾದರೆ ಮಹಾರಾಜರ ಕಣ್ಣಿಂದ ನೋಡಬಾರದು, ಮಜ್ನು ಕಣ್ಣಿಂದಲೇ ನೋಡಬೇಕು' ಎಂದು ಹೇಳಿದ.

ಪ್ರೇಮ ಕುರುಡು ಅಂತಾರ. ಮೊದಲು ಮುಖಾಮುಖಿ, ನಂತರ ಚಂದ್ರಮುಖಿ, ಆ ಮೇಲೆ ಕಮಲಮುಖಿ, ಆ ನಂತರ ಸೂರ್ಯಮುಖಿ, ಕೊನೆಗೆ ಜ್ವಾಲಾಮುಖಿ ಇಷ್ಟ. ಪ್ರೇಮ ಕುರುಡು ಅಂತ ಯಾಕಂತಾರ ಅಂದರ ನಮ್ಮ ಕನಸುಗಳನ್ನು ಅದು ಮರೆಸುತ್ತದೆ. ತಂದೆ ತಾಯಿ ತಾವು ತಂಗಳು ಉಂಡು ನಮ್ಮನ್ನು ಓದಿಸ್ತಿದ್ದಾರೆ ಎನ್ನುವುದನ್ನು ಮರೆಸಿಬಿಡುತ್ತದೆ.

ಒಂದು ಸರೋವರ ಇತ್ತು. ಅದರಲ್ಲಿ ಒಂದು ಕಮಲ ಅರಳಿತ್ತು. ದುಂಬಿಯೊಂದು ಬಂದು ಕಮಲದ ಮಕರಂದ ಹೀರುತ್ತಿತ್ತು. ಮಕರಂದ ಹೀರುವಲ್ಲಿ ಅದು ಎಷ್ಟು ಮಗ್ನ ಆಗಿತ್ತೆಂದರೆ ಅದಕ್ಕೆ ಸೂರ್ಯಾಸ್ತವಾಗಿದ್ದೇ ಗೊತ್ತಾಗಲಿಲ್ಲ. ಸೂರ್ಯ ಮುಳುಗಿದಾಗ ಕಮಲ ಮುದುಡಿತು. ಅವಾಗ ದುಂಬಿಗೆ ಎಚ್ಚರವಾಯಿತು. 'ಅಯ್ಯೋ ಸಿಕ್ಕಿಬಿದ್ದೆನಲ್ಲ' ಎಂದುಕೊಂಡಿತು. ತಕ್ಷಣವೇ ಸಾವರಿಸಿಕೊಂಡು 'ಪರವಾಗಿಲ್ಲ ಒಂದು ರಾತ್ರಿ ತಾನೆ, ನಾಳೆ ಸೂರ್ಯೋದಯವಾದಾಗ ಕಮಲ ಮತ್ತೆ ಅರಳುತ್ತದೆ. ಆಗ ಹೋದರಾಯಿತು' ಎಂದು ಸಮಾಧಾನಪಟ್ಟುಕೊಂಡಿತು. ಆದರ, ರಾತ್ರಿ ಚಂದ್ರನ ಬೆಳಕಲ್ಲಿ ಆನೆಗಳು ಸರೋವರಕ್ಕೆ ಬಂದು ನೀರಾಟವಾಡಿದವು. ಆನೆಯ ಕಾಲಿಗೆ ಸಿಲುಕಿದ ಕಮಲ ಚೂರಾಯಿತು. ಅದರೊಂದಿಗೆ ದುಂಬಿ ಕೂಡ ಕಾಲನ ಹೊಡೆತಕ್ಕೆ ಸಿಲುಕಿ ನಾಶವಾಯಿತು. ನಾವೂ ಕೂಡ ಹಾಂಗೆ, 'ನಾಳೆ ನೋಡೋಣ, ನಾಳೆ ಮಾಡೋಣ' ಎಂದುಕೊಳ್ತೀವಿ. ಆದರೆ ಕಾಲನೆಂಬ ಆನೆ ಬಹಳ ಸಮೀಪ ಐತಿ ಎನ್ನೋದನ್ನು ಮರೆತುಬಿಡುತ್ತೇವೆ.

ತುಂಬಾ ಜನ ಪ್ರೇಮದಲ್ಲಿ ಬಿದ್ದಿದ್ದೇನೆ ಎನ್ನುತ್ತಾರೆ. ಬಿದ್ದರೆ ಅದು ಪ್ರೇಮ ಅಲ್ಲ. ಪ್ರೇಮದೊಳಗೆ ಬೀಳಬಾರದು, ಏಳಬೇಕು. ಅದು ಪ್ರೇಮ. ಯಾವುದರಲ್ಲಿ ವ್ಯಾವಹಾರಿಕ ಲಾಭದ ದೃಷ್ಟಿ ಇಲ್ಲವೋ, ವಿಷಯಗಳ ಆಕರ್ಷಣೆ ಇಲ್ಲವೋ ಅದು ಪವಿತ್ರ ಪ್ರೇಮ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದಶಮಿ ಗಂ. 13-21 **ನಕ್ಷತ್ರ:** ಪುಷ್ಯ ಗಂ. 25-21 **ಯೋಗ:** ಶಿವ ಗಂ. 23-34 **ಕರಣ:** ವಿಷ್ಟಿ ಗಂ. 13-21, ಕನ್ಯಾ ಮಾಸದ 10 ನೇ ದಿನ, **ಮಳೆನಕ್ಷತ್ರ:** ಹಸ್ತ 1.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-23 **ಸೂರ್ಯಾಸ್ತ:** 06-19
ಮುಸ್ಲಿಂ ದಿನಾಂಕ: 23 ರಬೀಉಲ್ಲಾವಲ್
ಅದೃಷ್ಟ ಸಂಖ್ಯೆ: 3, 9

ಮೇಷ: ಸಿನಿಮಾ ರಂಗದವರು ಮತ್ತು ಜವಳಿ ವ್ಯಾಪಾರಿಗಳು ನೂತನ ಯೋಜನೆಗೆ ಹೂಡಿಕೆ ಮಾಡುವುದು ಉತ್ತಮವಲ್ಲ. ಉದ್ಯೋಗಾಕಾಂಕ್ಷಿಗಳಿಗೆ ಖಾಸಗಿ ಸಂಸ್ಥೆಯಲ್ಲಿ ನೌಕರಿ ಸಿಗಲಿದೆ. ತಾಯಿಯ ಆರೋಗ್ಯ ಸುಧಾರಿಸಲಿದೆ.

ವೃಷಭ: ಕುಟುಂಬದಲ್ಲಿ ಸಂತಸದ ವಾತಾವರಣ ಇರಲಿದೆ. ಇಂದು ನಡೆಯುವ ಘಟನೆಯಿಂದಾಗಿ ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂಬುದು ನಿಮ್ಮ ಅರಿವಿಗೆ ಬರಲಿದೆ. ಆಸ್ತಿ ಸಂಬಂಧಿತ ಕೆಲಸಗಳು ಸರಾಗವಾಗಿ ನಡೆಯಲಿವೆ.

ಮಿಥುನ: ಚಿತ್ರರಂಗದವರಿಗೆ ಖ್ಯಾತಿ, ನೂತನ ಅವಕಾಶಗಳು ದೊರೆಯಲಿವೆ. ಬದಲಾಗುವ ಬದುಕಿನ ಗತಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿ ಆಗುವಿರಿ. ಚರ್ಮದ ವಸ್ತುಗಳ ಮಾರಾಟದಿಂದ ಲಾಭವಾಗುತ್ತದೆ.

ಕರ್ಕಾಟಕ: ಸಂಗೀತ, ಸಾಹಿತ್ಯ, ಚಿತ್ರರಂಗದ ಕಲಾವಿದರಿಗೆ ಕೈತುಂಬಾ ಕೆಲಸವಿದ್ದರೂ ಶ್ರಮಕ್ಕೆ ತಕ್ಕ ಆರ್ಥಿಕ ಪ್ರತಿಫಲ ಸಿಗಲಾರದು. ಮಸಾಲೆ ಪದಾರ್ಥಗಳ ಮಾರಾಟಗಾರರಿಗೆ ಹೆಚ್ಚಿನ ಬೇಡಿಕೆ ಬರಲಿದೆ.

ಸಿಂಹ: ನಿಮ್ಮ ಗೋಪ್ಯ ವಿಚಾರವೊಂದು ಕುಟುಂಬದವರ ಗಮನಕ್ಕೆ ಬರಲಿದೆ. ಸಹಚರರಿಂದ ಅಥವಾ ಅಧಿಕಾರಿಗಳಿಂದ ಅಸಹಕಾರದ ಪರಿಸ್ಥಿತಿ ಎದುರಾಗಬಹುದು. ಶ್ರಮಕ್ಕೆ ತಕ್ಕ ಪ್ರತಿಫಲ ಶೀಘ್ರ ದೊರೆಯಲಿದೆ.

ಕನ್ಯಾ: ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಎಲ್ಲ ಕಾರ್ಯಗಳು ಸರಾಗವಾಗಿ ನಡೆಯಲಿವೆ. ಸ್ತ್ರೀಯರಿಗೆ ಗೌರವ, ಮನ್ನಣೆ ದೊರೆಯಲಿದೆ. ರೈತಾಪಿ ವರ್ಗದವರಿಗೆ ಈ ದಿನದ ವಾತಾವರಣ ಉಪಕಾರಿಯಾಗುವುದು.

ತುಲಾ: ಷೇರು ಮಾರುಕಟ್ಟೆಯಲ್ಲಿನ ಬದಲಾವಣೆಗಳನ್ನು ಗಮನಿಸಿ ನೀವು ತೆಗೆದುಕೊಂಡಂತಹ ತೀರ್ಮಾನ ಸರಿಯಾದದ್ದಾಗಲಿದೆ. ಕೊಟ್ಟ ಮಾತಿನಂತೆ ಕೆಲಸ ನೆರವೇರಿಸಿ ಕೊಡುವುದರಿಂದ ಹೆಸರು ಗಳಿಸಬಹುದು.

ವೃಶ್ಚಿಕ: ಏಕಾಗ್ರತೆಯಿಂದ ಎಲ್ಲ ಕೆಲಸಗಳನ್ನು ಸಾಧಿಸಲು ಯತ್ನಿಸುವುದರಿಂದ ಯಶಸ್ಸು ಸಿಗುವುದು. ಪರೀಕ್ಷಾ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಬಹುದು.

ಧನು: ಇಂದಿನ ದಿನಚರಿಯನ್ನು ಹೊರತು ಪಡಿಸಿದ ಕೆಲಸಗಳತ್ತ ನಿಮ್ಮ ಮನಸ್ಸು ಹರಿಯಲಿದೆ. ಆಡಳಿತಾತ್ಮಕ ಕ್ಷೇತ್ರದಲ್ಲಿ ಇರುವವರಿಗೆ ಉತ್ತಮ ದಿನವಾಗಿದ್ದು, ಸಂತಸ ಮೂಡಲಿದೆ.

ಮಕರ: ವೃತ್ತಿರಂಗದಲ್ಲಿ ಅಕಸ್ಮಿಕವಾಗಿ ಘಟಿಸುವ ಕೆಲವು ಬದಲಾವಣೆಗಳಿಂದ ಹೆಚ್ಚಿನ ಅನುಕೂಲಗಳು ಸೃಷ್ಟಿಯಾಗಲಿವೆ. ನಿಮ್ಮ ಆಶಾವಾದಕ್ಕೆ ಪುಷ್ಟಿ ದೊರಕುವ ಘಟನೆಗಳು ನಡೆಯಲಿವೆ.

ಕುಂಭ: ಗಿಡ ಮೂಲಿಕೆ ಔಷಧದ ಬಳಕೆಯಿಂದ ಪತ್ನಿಯ ಆರೋಗ್ಯ ಸಾಕಷ್ಟು ಸುಧಾರಿಸಲಿದೆ. ವೃತ್ತಿ ರಂಗದಲ್ಲಿ ನಿಮ್ಮ ಕಾರ್ಯ ವೈಖರಿಗೆ ಎಲ್ಲರಿಂದ ಮೆಚ್ಚುಗೆ ಸಿಗಲಿದೆ. ಹಣಕಾಸು ವಿಚಾರದಲ್ಲಿ ಬಿಗಿ ನಿಲುವು ಉತ್ತಮ.


ಮೀನ: ಹಠದ ಸ್ವಭಾವದಿಂದ ಸವಾಲಿನ ಪರಿಸ್ಥಿತಿ ನಿರ್ಮಾಣವಾಗಬಹುದು. ಹಣಕಾಸಿನ ವಿಷಯದಲ್ಲಿ ಯಾವುದೇ ರೀತಿಯ ತೊಂದರೆ ಕಾಣಿಸದು. ಗುರಿ ಸಾಧನೆಗೆ ತಂದೆಯ ಆಶೀರ್ವಾದ ಸಿಗಲಿದೆ.

ಪದಬಂಧ 5815

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಡಿಲವಾದುದನ್ನು ಹೀಗೆನ್ನಿ (3)
3.ಎತ್ತರದಲ್ಲಿ ಜಾಗರೂಕ ನಾಗಿರುವುದು (3)
5.ನೆರಮನೆಯವನು ತೋರಿಸಿದ ಮಹಾಪೂರ (2)
6.ನಂಟರ ಸಮೂಹ (3)
7.ನೆನಪಲ್ಲೇ ಇರುವ ಕಾರಣ ಗೊತ್ತಾಯಿತೇ? (2)
11.ಹಲಗೆಗಾಗಿ ಬೆಳೆದ ವೈರತ್ವ ಉಲ್ಟಾ ಪಲ್ಟಾ ಕಾಣುತ್ತಿದೆ (2)
13.ಕಡ ತಂದು ಖರೀದಿಸಿದ ಬಟ್ಟೆ (3)
15.ಧಾನ್ಯದ ಹೊಡೆಯಿದು (2)
16.ಪರಾಜಿತ ಹಿಡಿದಿರುವ ಅಗಲವಾದ ಹರಿವಾಣ (3)
17.ಮಳೆಗಾಲದಲ್ಲಿ ಆಕಾಶದಿಂದ ಭೂಮಿಗೆ ಬಡಿಯುವ ವಿದ್ಯುತ್ ಪ್ರವಾಹ (3)

ಮೇಲಿಂದ ಕೆಳಕ್ಕೆ
1.ಅಕ್ಕ ತೋರಿದ ಪ್ರೀತಿ (3)
2.ಔಷಧಿ ಅರೆಯಲು ಬಳಸುವ ಸಣ್ಣ ಒರಳು (4)
3.ದಿವಾಳಿಯಾದ ಅಂಗಡಿ (4)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ನೆಲದ ಅಡಿಯಲ್ಲಿರುವ ಮನೆ (5)
8.ಕೂಲಂಕಷವಾಗಿ ಯೋಚಿಸುವಿಕೆ (5)
9.ಗಣೇಶನ ಇನ್ನೊಂದು ಹೆಸರು (4)
10.ಕೆಲಸಕ್ಕೆ ಬಾರದುದು (4)
12.ಎಲೆ ಅಡಕೆಯ ಸಣ್ಣ ಚೀಲ (3)
15.ಅತಿಯಾದ ಬಯಕೆಯಿದು (3)



5814ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸ್ಥಾಪಕ 4.ಗಮನ
5.ಗುಣಾಕಾರ 6.ಬಡಗಣ
8.ತೆರ 10.ತಮ
13.ದಾಮೋದರ 14.ದಿನಚರಿ
15.ದಾಕ್ಷಿಣ್ಯ 16.ಅವನಿ

ಮೇಲಿಂದ ಕೆಳಕ್ಕೆ:
1.ನಗದಿಪುಸ್ತಕ 2.ಸ್ಥಾನಬದ್ಧತೆ
3.ನಕಾಶೆ 5.ಗುಣವಂತ
7.ಸಿಂಹಾವಲೋಕನ 9.ರಹದಾರಿ
11.ಮಚ್ಚರದಾನಿ 12.ವಾನರಿ

ಸುಡೊಕು 6200

	4		2			6		1
				8		2	7	
5			1		4			8
		4				1		
2	8		6	9	1		4	3
		7					6	5
	5			1				7
		6	8		2	5	3	
4	2			5			1	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6199 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	26,004
ಇಂದಿನ ಅಂತ್ಯ	26,216
▲	211
ದಿನದ ಗರಿಷ್ಠ	26,250


ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹225
ಆರ್‌ಎಸ್‌ಎಸ್-5	₹221
ಗುಡ್ ಲಾಟ್	₹206

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹367-555
ದ್ವಿತಳಿ (ಬಿ.ವಿ)	₹351-689

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹15500-17000
ತಿಪಟೂರು	₹16300-17000
ತುರುವೇಕೆರೆ	₹16200-16200

ಸಕ್ಕರೆ, ಎಥೆನಾಲ್ ಬೆಲೆ ಹೆಚ್ಚಳಕ್ಕೆ ಚಿಂತನೆ: ಕೇಂದ್ರ

ನವದೆಹಲಿ (ಪಿಟಿಐ): 2024-25ರ ಸಕ್ಕರೆ ಮಾರುಕಟ್ಟೆ ಋತುವಿನಲ್ಲಿ ಸಕ್ಕರೆಯ ಕನಿಷ್ಠ ಮಾರಾಟ ದರ ಮತ್ತು ಎಥೆನಾಲ್ ಬೆಲೆ ಏರಿಕೆ ಮಾಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ತಿಳಿಸಿದ್ದಾರೆ.

ಸಕ್ಕರೆ ಬೆಲೆ ಹೆಚ್ಚಳಕ್ಕೂ ಚಿಂತನೆ ನಡೆಸಿದೆ. 2019ರ ಫೆಬ್ರುವರಿಯಿಂದ ಸಕ್ಕರೆ ಕೆ.ಜಿ ಗೆ ₹31 ಇದೆ. ಮುಂಗಾರು ಉತ್ತಮವಾಗಿದೆ. ಹಾಗಾಗಿ, ಈ ಸಕ್ಕರೆ ಋತುವಿನಲ್ಲಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಕೆ.ಜಿಗೆ ₹15ರಿಂದ ₹20 ದರ ಹೆಚ್ಚಳ: ಹೋಟೆಲ್ ತಿಂಡಿ, ಊಟ ದುಬಾರಿ ಸಾಧ್ಯತೆ

ಖಾದ್ಯ ತೈಲ ಬೆಲೆ ದಿಢೀರ್ ಏರಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಬ್ಬದ ಋತುವಿನಲ್ಲಿ ಅಡುಗೆ ಎಣ್ಣೆಯ ಚಿಲ್ಲರೆ ದರವು ಪ್ರತಿ ಕೆ.ಜಿಗೆ ₹15ರಿಂದ ₹20 ಏರಿಕೆಯಾಗಿದೆ.

ಮನೆ ಹಾಗೂ ಹೋಟೆಲ್‌ಗಳಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಸೂರ್ಯಕಾಂತಿ ಹಾಗೂ ತಾಳೆ ಎಣ್ಣೆ ಬಳಸಲಾಗುತ್ತದೆ. ಸೂರ್ಯಕಾಂತಿ ಎಣ್ಣೆ ದರವು ಪ್ರತಿ ಕೆ.ಜಿಗೆ ₹110ರಿಂದ ₹130ಕ್ಕೆ ಹೆಚ್ಚಳವಾಗಿದೆ. ಶೇಂಗಾ ಎಣ್ಣೆ ಕೆ.ಜಿಗೆ ₹145ರಿಂದ ₹160ಕ್ಕೆ ಏರಿಕೆಯಾಗಿದೆ. ಸೋಯಾಬಿನ್ ಮತ್ತು ತಾಳೆ ಎಣ್ಣೆಯ ದರವು ಕೆ.ಜಿಗೆ ₹15 ಹೆಚ್ಚಳವಾಗಿದೆ.

ಹಬ್ಬದ ಋತುವಿನಲ್ಲಿ ಖಾದ್ಯ ತೈಲದ ಬಳಕೆ ಪ್ರಮಾಣ ಹೆಚ್ಚಿರುತ್ತದೆ. ಸರ್ಕಾರವು ಖಾದ್ಯ ತೈಲದ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಏರಿಕೆ ಮಾಡಿರುವುದರಿಂದ ಚಿಲ್ಲರೆ ದರದಲ್ಲಿ ಹೆಚ್ಚಳವಾಗಿದೆ. ಮುಂಬರುವ ವಾರಗಳಲ್ಲಿ ಧಾರಣೆಯು ಮತ್ತಷ್ಟು ಏರಿಕೆಯಾಗಲಿದೆ ಎಂದು ಚಿಲ್ಲರೆ ವ್ಯಾಪಾರಿಗಳು ಹೇಳುತ್ತಾರೆ.

ಸರ್ಕಾರ ಹೇಳಿದ್ದೇನು?: ಎರಡು ವಾರದ ಹಿಂದೆ ಕೇಂದ್ರ ಸರ್ಕಾರವು ಕಚ್ಚಾ ಮತ್ತು ಸಂಸ್ಕರಿಸಿದ ತಾಳೆ, ಸೋಯಾಬಿನ್ ಹಾಗೂ ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಹೆಚ್ಚಿಸಿತ್ತು. ದೇಶೀಯ ರೈತರಿಗೆ ಅನುಕೂಲ ಕಲ್ಪಿಸಲು ಈ ನಿರ್ಧಾರ ಕೈಗೊಂಡಿತ್ತು.

ಕಡಿಮೆ ಕಸ್ಟಮ್ಸ್ ಸುಂಕ ಜಾರಿಯಲ್ಲಿದ್ದ ವೇಳೆ ಆಮದು ಮಾಡಿಕೊಂಡಿರುವ 30 ಲಕ್ಷ ಟನ್ ಅಡುಗೆ ಎಣ್ಣೆ ದಾಸ್ತಾನಿದೆ. ಇದು 40ರಿಂದ 45 ದಿನದವರೆಗೆ ದೇಶೀಯ ಬೇಡಿಕೆಗೆ ಸಾಕಾಗಲಿದೆ. ಹಾಗಾಗಿ, ಕಂಪನಿಗಳು ದರ ಏರಿಕೆ ಮಾಡಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಿತ್ತು.

ಈ ನಿಟ್ಟಿನಲ್ಲಿ ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ), ಭಾರತೀಯ ಸಸ್ಯಜನ್ಯ ತೈಲ ಉತ್ಪಾದಕರ ಸಂಘ ಮತ್ತು ಸೋಯಾಬಿನ್ ಎಣ್ಣೆ ಉತ್ಪಾದಕರ ಸಂಘದ ಪ್ರತಿನಿಧಿಗಳ ಕೂಡ ಸಭೆ ನಡೆಸಿತ್ತು. ಕೇಂದ್ರದ ಸೂಚನೆ ಬೆನ್ನಲ್ಲೇ ಕಂಪನಿಗಳು ದಿಢೀರ್ ಆಗಿ ದರ ಏರಿಕೆ ಮಾಡಿವೆ.

ಭಾರತಕ್ಕೆ ಮಲೇಷ್ಯಾ ಮತ್ತು ಇಂಡೋನೇಷ್ಯಾದಿಂದ ತಾಳೆ ಎಣ್ಣೆ ಆಮದಾಗುತ್ತದೆ. ಬ್ರೆಜಿಲ್ ಮತ್ತು ಅರ್ಜೆಂಟೀನಾದಿಂದ ಸೋಯಾಬಿನ್ ಪೂರೈಕೆಯಾಗುತ್ತದೆ. ರಷ್ಯಾ ಮತ್ತು ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ಸಿಹಿ ಪದಾರ್ಥ ಧಾರಣೆ ಹೆಚ್ಚಳ?

ಹಬ್ಬದ ಋತುವಿನಲ್ಲಿ ಬೇಕರಿ, ಹೋಟೆಲ್‌ಗಳಲ್ಲಿ ಹೆಚ್ಚಾಗಿ ಸಿಹಿ ಪದಾರ್ಥಗಳನ್ನು ತಯಾರಿಸಲಾಗುತ್ತದೆ. ಇದಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಖಾದ್ಯ ತೈಲ ಬಳಕೆಯಾಗುತ್ತದೆ. ಬೆಲೆ ಏರಿಕೆಯನ್ನು ಸರಿದೂಗಿಸಲು ಅಂಗಡಿ ಮಾಲೀಕರು ಸಿಹಿ ತಿನಿಸುಗಳ ಬೆಲೆ ಹೆಚ್ಚಿಸುವ ಸಾಧ್ಯತೆಯಿದೆ.

ಚಿಪ್ಸ್ ತಯಾರಿಕೆಯಲ್ಲಿಯೂ ಹೆಚ್ಚಾಗಿ ಎಣ್ಣೆ ಬಳಲಾಗುತ್ತದೆ. ಹಾಗಾಗಿ, ಚಿಪ್ಸ್ ದರದಲ್ಲಿ ಹೆಚ್ಚಳವಾಗುವ ನಿರೀಕ್ಷೆಯಿದೆ.

ಸಹಜವಾಗಿ ಅಡುಗೆ ಎಣ್ಣೆ ಬೆಲೆಯು ಕೆ.ಜಿ ₹1ರಿಂದ ₹2 ಏರಿಕೆಯಾಗುತ್ತಿತ್ತು. ಏಕಾಏಕಿ ಕೆ.ಜಿಗೆ ₹20 ಹೆಚ್ಚಳವಾಗಿದೆ. ಇದರಿಂದ ಹೋಟೆಲ್‌ಗಳು ಕೂಡ ತಿಂಡಿ, ಊಟದ ದರ ಏರಿಕೆ ಮಾಡುವ ಸಾಧ್ಯತೆಯಿದೆ.

ತಕ್ಷಣದಲ್ಲಿ ದೊಡ್ಡ ಹೋಟೆಲ್‌ಗಳು ದರ ಏರಿಕೆಗೆ ಮುಂದಾಗದಿದ್ದರೂ ಸಣ್ಣ ಹೋಟೆಲ್‌ಗಳು ಆರ್ಥಿಕ ಹೊರೆಯನ್ನು ಸರಿದೂಗಿಸಿಕೊಳ್ಳಲು ದರ ಹೆಚ್ಚಳ ಮಾಡುವ ನಿರೀಕ್ಷೆಯಿದೆ.

‘ಅಡುಗೆ ಎಣ್ಣೆ ದರ ಏರಿಕೆಯು ತಾತ್ಕಾಲಿಕವಷ್ಟೇ. ಒಂದೆರಡು ಪದಾರ್ಥಗಳ ಬೆಲೆ ಏರಿಕೆಯಾದ ತಕ್ಷಣ ಯಾವುದೇ ತಿಂಡಿ ಮತ್ತು ಊಟದ ಬೆಲೆ ಏರಿಕೆ ಮಾಡುವ ಉದ್ದೇಶ ಹೊಂದಿಲ್ಲ. ಜನಸಾಮಾನ್ಯರ ಮೇಲೆ ಹೊರೆ ಹೇರುವುದಿಲ್ಲ’ ಎಂದು ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಗೌರವಾಧ್ಯಕ್ಷ ಕೆ.ಸಿ. ರಾವ್ ಅವರು, ‘ಪ್ರಜಾವಾಣಿ’ಗೆ ತಿಳಿಸಿದರು.

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1270 (1260)
ಪಾಮೋಲಿನ್	₹1260 (1250)

ವಿನಿಮಯ ದರ

$ ಡಾಲರ್	83.65
£ ಪೌಂಡ್	111.70
€ ಯುರೊ	93.20
¥ ಯೆನ್ (100ಕ್ಕೆ)	58

100ಕ್ಕೂ ಹೆಚ್ಚು ವಸ್ತುಗಳ ತೆರಿಗೆ ಪರಿಷ್ಕರಣೆ: ಸಚಿವರ ಸಮಿತಿ ಒಲವು

ಜಿಎಸ್‌ಟಿ ಭಾರ ಇಳಿಸಲು ಚರ್ಚೆ

ನವದೆಹಲಿ (ಪಿಟಿಐ): ಜವಳಿ, ಕೈಮಗ್ಗ, ಕೃಷಿ ಉತ್ಪನ್ನ, ರಸಗೊಬ್ಬರ ಮತ್ತು ಶೈಕ್ಷಣಿಕ ಸಾಮಗ್ರಿಗಳು ಸೇರಿ 100ಕ್ಕೂ ಹೆಚ್ಚು ವಸ್ತುಗಳ ಮೇಲಿನ ಜಿಎಸ್‌ಟಿ ಪರಿಷ್ಕರಿಸಲು ಗೋವಾದಲ್ಲಿ ನಡೆದ ಆರು ಸಚಿವರ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದೆ.



ಜನಸಾಮಾನ್ಯರ ಮೇಲಿನ ತೆರಿಗೆ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಕೆಲವು ಸರಕುಗಳ ಮೇಲೆ ವಿಧಿಸುತ್ತಿರುವ ಶೇ 12ರಷ್ಟು ಜಿಎಸ್‌ಟಿ ಅನ್ನು ಶೇ 5ಕ್ಕೆ ಇಳಿಸುವ ಬಗ್ಗೆಯೂ ಸಮಾಲೋಚನೆ ನಡೆದಿದೆ. ಆದರೆ, ಯಾವುದೇ ಒಮ್ಮತದ ನಿರ್ಧಾರ ಕೈಗೊಂಡಿಲ್ಲ.

ಅಕ್ಟೋಬರ್ 20ರಂದು ನಿಗದಿಯಾಗಿರುವ ಸಮಿತಿಯ ಸಭೆಯಲ್ಲಿ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ. ಬಳಿಕ ನವೆಂಬರ್‌ನಲ್ಲಿ ನಡೆಯಲಿರುವ ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ವರದಿ ಸಲ್ಲಿಸಲಾಗುತ್ತದೆ ಎಂದು ಹೇಳಲಾಗಿದೆ.

ಯಾವ ವಸ್ತುಗಳಿಗೆ ತೆರಿಗೆ ಇಳಿಕೆ?

ಬೈಸಿಕಲ್



ದೇಶದಲ್ಲಿ ಸಾಕಷ್ಟು ಜನರು ಬೈಸಿಕಲ್ ಬಳಸುತ್ತಾರೆ. ಇದರ ಮೇಲಿನ ತೆರಿಗೆ ಕಡಿಮೆ ಮಾಡುವ ಬಗ್ಗೆ ಸಮಿತಿ ಚರ್ಚಿಸಿದೆ. ಪ್ರಸ್ತುತ ಬೈಸಿಕಲ್ ಹಾಗೂ ಅದರ ಬಿಡಿಭಾಗಗಳ ಮೇಲೆ ಶೇ 12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ. ಇ-ಬೈಸಿಕಲ್ ಮೇಲೆ ಶೇ 5ರಷ್ಟು ತೆರಿಗೆ ಇದೆ.

ವೈದ್ಯಕೀಯ ಸಾಮಗ್ರಿ



ಪ್ರಸ್ತುತ ವೈದ್ಯಕೀಯ ಮತ್ತು ಔಷಧೀಯ ಸಾಮಗ್ರಿಗಳಿಗೆ ಶೇ 12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದರಿಂದ ರೋಗಿಗಳಿಗೆ ತೊಂದರೆಯಾಗಿದೆ. ತೆರಿಗೆ ಕಡಿಮೆಗೊಳಿಸುವ ವಿಷಯವು ಸಭೆಯ ಮುಂದೆ ಪ್ರಸ್ತಾಪವಾಗಿದೆ. ಆದರೆ, ಮುಂದಿನ ಸಭೆಯಲ್ಲಿ ಈ ಕುರಿತು ಚರ್ಚಿಸಲು ಸಭೆ ನಿರ್ಧರಿಸಿದೆ.

ಆಹಾರ ಪದಾರ್ಥ



ಜನಸಾಮಾನ್ಯರು ಹೆಚ್ಚು ಬಳಕೆ ಮಾಡುವ ವಸ್ತುಗಳನ್ನು ಕಡಿಮೆ ಸ್ಲ್ಯಾಬ್‌ನಡಿ ತರಬೇಕು. ಆಹಾರ ಪದಾರ್ಥಗಳ ಮೇಲಿನ ತೆರಿಗೆಯನ್ನು ಶೇ 12ರಿಂದ ಶೇ 5ಕ್ಕೆ ಇಳಿಸಬೇಕು. ಬೆಲೆ ಇಳಿಕೆಯಾಗುವುದರಿಂದ ಜನರಿಗೆ ಪರಿಹಾರ ಸಿಗಲಿದೆ. ಆ ಮೂಲಕ ವರಮಾನ ಹೆಚ್ಚಲಿದೆ ಎಂದು ಸಮಿತಿ ಚರ್ಚಿಸಿದೆ.

‘ಜಿಎಸ್‌ಟಿ ದರ ಸರಳೀಕರಣಕ್ಕೆ ರಚಿಸಿರುವ ಸಚಿವರ ಸಮಿತಿ ಸಭೆ ಬುಧವಾರ ನಡೆಯಿತು. ಬಾಟಲಿ ನೀರಿನ ಮೇಲಿನ ತೆರಿಗೆ ಪರಿಷ್ಕರಣೆ ಬಗ್ಗೆಯೂ ಚರ್ಚಿಸಲಾಯಿತು’ ಎಂದು ಸಮಿತಿಯ ಸದಸ್ಯೆಯಾದ ಪಶ್ಚಿಮ ಬಂಗಾಳದ ಹಣಕಾಸು ಸಚಿವೆ ಚಂದ್ರಿಮಾ ಭಟ್ಟಾಚಾರ್ಯ ಗುರುವಾರ ಪಿಟಿಐಗೆ ತಿಳಿಸಿದ್ದಾರೆ.

ಪ್ರಸ್ತುತ ಶೇ 5, ಶೇ 12, ಶೇ 18 ಹಾಗೂ ಶೇ 28ರ ತೆರಿಗೆ ಸ್ಲ್ಯಾಬ್‌ಗಳಿವೆ. ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಅನ್ವಯ ಶೇ 40ರಷ್ಟು ಜಿಎಸ್‌ಟಿ ವಿಧಿಸಲು ಅವಕಾಶವಿದೆ.

ಶೇ 11.56ರಷ್ಟು ತೆರಿಗೆ ಕುಸಿತ: ಪ್ರಸಕ್ತ ವರ್ಷ ಜಿಎಸ್‌ಟಿ ಅಡಿಯಲ್ಲಿ ಸರಾಸರಿ ತೆರಿಗೆಯು ಶೇ 11.56ರಷ್ಟು ಕುಸಿದಿದೆ. ತೆರಿಗೆ ಸ್ಲ್ಯಾಬ್‌ಗಳನ್ನು ಬದಲಾವಣೆ ಮಾಡುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಎಂದು ಚಂದ್ರಿಮಾ ಹೇಳಿದ್ದಾರೆ.

ಪ್ರಸಾಧನ ಪರಿಕರ: ಹೇರ್ ಡ್ರೈಯರ್, ಪ್ರಸಾಧನ ಪರಿಕರಗಳು ಶೇ 18ರ ಸ್ಲ್ಯಾಬ್‌ನಲ್ಲಿವೆ. ಇಂತಹ ವಸ್ತುಗಳನ್ನು ಶೇ 28ರ ತೆರಿಗೆ ಸ್ಲ್ಯಾಬ್‌ಗೆ ಸೇರಿಸುವ ಸಾಧ್ಯತೆಯಿದೆ.

ವಿಮೆ ಕಂತಿನ ಮೇಲೆ ಜಿಎಸ್‌ಟಿ: ಅ. 19ಕ್ಕೆ ಸಭೆ

ನವದೆಹಲಿ (ಪಿಟಿಐ): ಆರೋಗ್ಯ ಮತ್ತು ಜೀವ ವಿಮೆ ಕಂತಿನ ಮೇಲೆ ವಿಧಿಸಿರುವ ಜಿಎಸ್‌ಟಿ ಕಡಿಮೆಗೊಳಿಸುವುದಕ್ಕೆ ಸಂಬಂಧಿಸಿದಂತೆ ರಚಿಸಿರುವ 13 ಸಚಿವರ ಸಮಿತಿ ಸಭೆಯು, ಅಕ್ಟೋಬರ್ 19ರಂದು ದೆಹಲಿಯಲ್ಲಿ ನಡೆಯಲಿದೆ.

ಪ್ರಸ್ತುತ ವಿಮೆ ಕಂತಿನ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದನ್ನು ರದ್ದು-ಪಡಿಸಬೇಕು ಅಥವಾ ಕಡಿಮೆಗೊಳಿಸಲು ಕ್ರಮಕೈಗೊಳ್ಳಬೇಕು ಎಂಬ ಒತ್ತಾಯ ಹೆಚ್ಚಿದೆ. ಇತ್ತೀಚೆಗೆ ನಡೆದ ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ವರದಿ ಸಲ್ಲಿಸಲು ಸಮಿತಿ ರಚಿಸಲಾಗಿತ್ತು. ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಇದರ ಅಧ್ಯಕ್ಷರಾಗಿದ್ದಾರೆ. ಉತ್ತರ ಪ್ರದೇಶ, ರಾಜಸ್ಥಾನ, ಪಶ್ಚಿಮ ಬಂಗಾಳ, ಕರ್ನಾಟಕ, ಕೇರಳ, ಆಂಧ್ರಪ್ರದೇಶ, ಗೋವಾ, ಗುಜರಾತ್, ಮೇಘಾಲಯ, ಪಂಜಾಬ್, ತಮಿಳುನಾಡು ಮತ್ತು ತೆಲಂಗಾಣದ ಸಚಿವರು ಸಮಿತಿಯಲ್ಲಿದ್ದಾರೆ. ಅಕ್ಟೋಬರ್ ಅಂತ್ಯಕ್ಕೆ ವರದಿ ಸಲ್ಲಿಸಲು ಮಂಡಳಿಯು ಸೂಚಿಸಿದೆ. ಈ ವರದಿ ಆಧಾರದ ಮೇಲೆ ನವೆಂಬರ್‌ನಲ್ಲಿ ನಡೆಯುವ ಸಭೆಯಲ್ಲಿ ಮಂಡಳಿಯು ಅಂತಿಮ ನಿರ್ಧಾರ ಕೈಗೊಳ್ಳಲಿದೆ.

2023-24ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಮತ್ತು ರಾಜ್ಯಗಳು ಆರೋಗ್ಯ ವಿಮೆ ಕಂತಿನ ಮೇಲೆ ₹8,262 ಕೋಟಿ ಹಾಗೂ ಮರುವಿಮೆ ಕಂತಿನ ರೂಪದಲ್ಲಿ ₹1,484 ಕೋಟಿ ಜಿಎಸ್‌ಟಿ ಸಂಗ್ರಹಿಸಿವೆ.

ಚಿನ್ನದ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ 10 ಗ್ರಾಂ ಚಿನ್ನದ ದರವು ₹400 ಏರಿಕೆಯಾಗಿದ್ದು, ₹78,250ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ದರವು ಪ್ರತಿ ಕೆ.ಜಿಗೆ ₹1 ಸಾವಿರ ಏರಿಕೆಯಾಗಿದ್ದು, ₹94 ಸಾವಿರಕ್ಕೆ ಮುಟ್ಟಿದೆ. ದೇಶೀಯ ಆಭರಣ ತಯಾರಕರಿಂದ ಖರೀದಿ ಹೆಚ್ಚಳದಿಂದಾಗಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗುತ್ತಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ		ಕೋಕ	8000-26900	ರಾಶಿ	30009-49258
ಅಪಿ	47629-48059	ಕೆಂಪುಗೋಟು	20899-31599	ಸರಕು	50129-86410
ಬೆಟ್ಟೆ	33019-33499	ರಾಶಿ	29899-49009	**ಸಿದ್ದಾಪುರ**	
ಕೆಂಪುಗೋಟು	27609-28010	ಸಿಪ್ಪೆಗೋಟು	8099-16719	ಬಿಳಿಗೋಟು	24609-27799
ರಾಶಿ	47139-47569	**ಶಿವಮೊಗ್ಗ**		ಚಾಲಿ	31309-34099
ಸಾಗರ		ಬೆಟ್ಟೆ	42000-55572	ಕೋಕ	19219-23899
ಬಿಳಿಗೋಟು	10122-26488	ಗೊರಬಲು	17560-38009	ಕೆಂಪುಗೋಟು	21109-21819
ಚಾಲಿ	16519-32901	ಹೊಸತು	31009-44299	ರಾಶಿ	42289-46299

ಮುಂಬೈ ಧಾರಣೆ

ಶೇಂಗಾ
26-09-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪೂರ್ವ ಲಡಾಖ್: ಅನಿಶ್ಚಿತತೆಗೆ ತೆರೆ ಎಳೆಯಲು ಶೀಘ್ರ ನಿರ್ಣಯ– ಚೀನಾ

ಬೀಜಿಂಗ್ (ಪಿಟಿಐ): ‘ಪೂರ್ವ ಲಡಾಖ್‌ನಲ್ಲಿ ಮೂಡಿರುವ ಅನಿಶ್ಚಿತ ಪರಿಸ್ಥಿತಿ ತಿಳಿಗೊಳಿಸಲು ಹಾಗೂ ಅಲ್ಲಿ ನಿಯೋಜಿಸಿರುವ ಸೇನೆಯ ವಾಪಸಾತಿ ಕುರಿತಂತೆ ಉಭಯ ರಾಷ್ಟ್ರಗಳಿಗೆ ಸಮ್ಮತವಾಗುವ ನಿರ್ಣಯವನ್ನು ಆದಷ್ಟು ಶೀಘ್ರ ಕೈಗೊಳ್ಳಲಾಗುವುದು’ ಎಂದು ಚೀನಾದ ರಕ್ಷಣಾ ಸಚಿವಾಲಯ ಗುರುವಾರ ತಿಳಿಸಿದೆ.

ಗಡಿ ವಿಷಯ ಕುರಿತ ಭಿನ್ನಾಭಿಪ್ರಾಯಗಳನ್ನು ತಗ್ಗಿಸಲು ಹಾಗೂ ಸೇನೆ ವಾಪಸಾತಿ ಕುರಿತಂತೆ ಸಹಮತಕ್ಕೆ ಬರಲು ಚೀನಾ ಮತ್ತು ಭಾರತವು ಬದ್ಧವಾಗಿವೆ ಎಂದೂ ಹೇಳಿದೆ.

‘ಉಭಯ ನಾಯಕರ ಮಾರ್ಗದರ್ಶನದಲ್ಲಿ ಚೀನಾ – ಭಾರತ, ರಾಜತಾಂತ್ರಿಕ ಮತ್ತು ಸೇನಾ ಹಂತದಲ್ಲಿ ಮಾತುಕತೆ ನಡೆಸಿವೆ. ಉಭಯ ದೇಶಗಳ ವಿದೇಶಾಂಗ ಸಚಿವರ ನಡುವೆ ಹಾಗೂ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರ ಜೊತೆಗೂ ಚರ್ಚೆ ನಡೆದಿದೆ’ ಎಂದು ವಕ್ತಾರ ಝೂಂಗ್ ಕ್ಸಿಯೊಗಾಂಗ್ ಹೇಳಿದರು.

‘ಅನಿಶ್ಚಿತತೆ ನಿವಾರಿಸಲು ಉಭಯ ರಾಷ್ಟ್ರಗಳಿಗೂ ಒಪ್ಪಿಗೆಯಾಗುವಂತೆ, ಆದಷ್ಟು ಶೀಘ್ರವೇ ತೀರ್ಮಾನಕ್ಕೆ ಬರಲು ಪರಸ್ಪರ ನಿರ್ಧರಿಸಲಾಗಿದೆ’ ಎಂದು ತಿಳಿಸಿದರು.

ಪೂರ್ವ ಲಡಾಖ್‌ನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಇರುವ ಅನಿಶ್ಚಿತತೆ ಅಂತ್ಯಗೊಳಿಸಲು, ಗಡಿಯಲ್ಲಿ ನಿಯೋಜಿಸಿರುವ, ಬಾಕಿ ಉಳಿದಿರುವ ಸೇನೆಯ ವಾಪಸಾತಿ ಕುರಿತ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯೀ ನಡುವೆ ನಡೆದ ಚರ್ಚೆ ಹಾಗೂ ಇತ್ತೀಚೆಗೆ ಬ್ರಿಕ್ಸ್ ಶೃಂಗಸಭೆಯ ವೇಳೆ ರಷ್ಯಾದಲ್ಲಿ ವಾಂಗ್ ಮತ್ತು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್ ನಡುವೆ ಮಾತುಕತೆಯನ್ನು ಅವರು ಉಲ್ಲೇಖಿಸಿದರು.

ಸೆಪ್ಟೆಂಬರ್ 3ರಂದು ಈ ವಿಷಯ ಕುರಿತು ಪ್ರತಿಕ್ರಿಯಿಸಿದ್ದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೊ ನಿಂಗ್ ಅವರು, ‘ಎರಡೂ ದೇಶಗಳ ಸೇನೆಯ ಮುಂಚೂಣಿ ತುಕಡಿಗಳು, ಗಡಿಭಾಗದಲ್ಲಿ ಗಾಲ್ವಾನ್ ಕಣಿವೆ ಸೇರಿ 4 ಕಡೆ ನಿಯೋಜಿಸಿರುವ ಸೇನೆಯ ವಾಪಸಾತಿಯ ಅಗತ್ಯವನ್ನು ಮನಗಂಡಿವೆ’ ಎಂದಿದ್ದರು.

21 ದಿನಗಳ ಕದನವಿರಾಮ ಘೋಷಿಸುವಂತೆ ಆಗ್ರಹಿಸಿದ ಅಮೆರಿಕ-ಫ್ರಾನ್ಸ್‌ಗೆ ಇಸ್ರೇಲ್ ಪ್ರತಿಕ್ರಿಯೆ

‘ಲೆಬನಾನ್ ಮೇಲಿನ ಯುದ್ಧ ನಿಲ್ಲುವುದಿಲ್ಲ’





ಇಸ್ರೇಲ್‌ನ ಬಂಕರ್‌ಗಳಲ್ಲಿ ಶಾಲೆಗಳನ್ನು ನಡೆಸಲಾಗುತ್ತಿದೆ. ಇಂಥ ಬಂಕರ್‌ವೊಂದರಲ್ಲಿ ಮಕ್ಕಳು ಫುಟ್‌ಬಾಲ್ ಆಡಿದರು –ಎಎಫ್‌ಪಿ ಚಿತ್ರ

ಜೆರುಸಲೇಂ/ಲಂಡನ್/ಬೈರೂತ್ (ಪಿಟಿಐ/ರಾಯಿಟರ್ಸ್/ಎಪಿ): ‘ಹಿಜ್ಬುಲ್ಲಾದವರು ಶರಣಾಗಬೇಕು, ಇಲ್ಲದಿದ್ದರೆ ಯುದ್ಧ ಮುಂದುವರಿಯಲಿದೆ’ ಎಂದು ಇಸ್ರೇಲ್‌ನ ವಿದೇಶಾಂಗ ಸಚಿವ ಇಸ್ರೇಲ್ ಕ್ಯಾಟ್ಸ್ ಹೇಳುವ ಮೂಲಕ ಲೆಬನಾನ್ ಮೇಲಿನ ದಾಳಿಯನ್ನು ನಿಲ್ಲಿಸುವುದಿಲ್ಲ ಎಂಬ ಸಂದೇಶವನ್ನು ಜಗತ್ತಿಗೆ ರವಾನಿಸಿದ್ದಾರೆ.

ಹಣಕಾಸು ಸಚಿವ ಬೆಜಲಲ್ ಸ್ಮೊತ್‌ರಿಚ್ ಕೂಡ ಇದೇ ರೀತಿಯ ಪ್ರತಿಕ್ರಿಯೆ ನೀಡಿದ್ದು, ‘ತೀವ್ರ ದಾಳಿಗಳಿಂದ ನಲುಗಿರುವ ಶತ್ರುವು-ಚೇತರಿಸಿಕೊಳ್ಳುವುದಕ್ಕೆ ಅವಕಾಶ ಸಿಗಬಾರದು’ ಎಂದಿದ್ದಾರೆ.

‘ಉಗ್ರ ಸಂಘಟನೆ ಹಿಜ್ಬುಲ್ಲಾ ವಿರುದ್ಧ ಯುದ್ಧ ಮುಂದುವರಿಸಲು ಸಜ್ಜಾಗಿ’ ಎಂದು ಬುಧವಾರ ಇಸ್ರೇಲ್‌ನ ಸೇನಾ ಮುಖ್ಯಸ್ಥರು ಸೇನೆಗೆ ಸೂಚಿಸಿದ್ದರು. ಈ ಮಧ್ಯೆ ಲೆಬನಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ಯುದ್ಧಕ್ಕೆ 21 ದಿನಗಳ ಕದನವಿರಾಮ ಘೋಷಿಸಬೇಕು ಎಂದು ಅಮೆರಿಕ, ಫ್ರಾನ್ಸ್, ಅರಬ್ ರಾಷ್ಟ್ರಗಳು ಸೇರಿದಂತೆ ಹಲವು ದೇಶಗಳು ಇಸ್ರೇಲ್ ಅನ್ನು ಆಗ್ರಹಿಸಿದ್ದವು. ಆದರೆ, ಇಸ್ರೇಲ್ ಈ ಆಗ್ರಹಕ್ಕೆ ಮಣಿದಿಲ್ಲ.

‘ವಿಶ್ವಸಂಸ್ಥೆಯಲ್ಲಿ ಮಾತನಾಡುವುದಕ್ಕಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಗುರುವಾರ ಅಮೆರಿಕಕ್ಕೆ ತೆರಳುವ ಮುನ್ನ, ಸೇನೆಗೆ ಕೆಲವು ಆದೇಶಗಳನ್ನು ನೀಡಿದ್ದಾರೆ. ಈಗಾಗಲೇ ಯೋಜಿಸಿರುವಂತೆ ನಮ್ಮ ಕಾರ್ಯಾಚರಣೆಯನ್ನು ಮುಂದುವರಿಸಿ ಎಂದಿದ್ದಾರೆ. ಜೊತೆಗೆ, ಅಮೆರಿಕ-ಫ್ರಾನ್ಸ್ ಮುಂದಿಟ್ಟಿರುವ ಈ ಪ್ರಸ್ತಾವಕ್ಕೆ ಪ್ರಧಾನಿ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ’ ಎಂದು ನೆತನ್ಯಾಹು ಅವರ ಕಾರ್ಯಾಲಯ ತಿಳಿಸಿದೆ. ಈ ಮಧ್ಯೆ, ಲೆಬನಾನ್ ಮೇಲೆ ಹೊಸದೊಂದು ಸರಣಿ ವಾಯುದಾಳಿಯನ್ನು ನಡೆಸುವುದಾಗಿ ಸೇನೆ ಹೇಳಿದೆ.



ಲೆಬನಾನ್ ಮೇಲೆ ಇಸ್ರೇಲ್ ಬುಧವಾರ ನಡೆಸಿದ ವಾಯುದಾಳಿಗೆ ಹಾನಿಗೆ ಒಳಗಾದ ಪ್ರದೇಶ –ಎಎಫ್‌ಪಿ ಚಿತ್ರ

‘ಇಸ್ರೇಲ್‌ನ ವಾಯುದಾಳಿಗೆ ಸಿರಿಯಾದ 23 ಕಾರ್ಮಿಕರು ಮೃತಪಟ್ಟಿದ್ದಾರೆ. ಕಟ್ಟಡದ ಅವಶೇಷಗಳ ಅಡಿ ಯಿಂದ ಮೃತದೇಹಗಳನ್ನು ಹೊರತೆಗೆಯಲಾಯಿತು. ಈ ದಾಳಿಯಲ್ಲಿ ಸಿರಿಯಾದ ನಾಲ್ವರು ಹಾಗೂ ಲೆಬನಾನ್‌ನ ನಾಲ್ವರಿಗೆ ಗಾಯಗಳಾಗಿವೆ’ ಎಂದು ಲೆಬನಾನ್‌ನ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

ಕಮಾಂಡರ್ ಸಾವು: ಇಸ್ರೇಲ್ ನಡೆಸಿದ ದಾಳಿಗೆ ಹಿಜ್ಬುಲ್ಲಾದ ಡ್ರೋನ್ ವಿಭಾಗದ ಮುಖ್ಯಸ್ಥ ಮೊಹಮ್ಮದ್ ಸ್ರೂರ್ ಮೃತಪಟ್ಟಿದ್ದಾರೆ. ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಇಸ್ರೇಲ್ ಸೇನೆ, ‘ವಾಯು ಸೇನೆಯ ಹಾಗೂ ಗುಪ್ತಚರ ಮಾಹಿತಿ ಮೇರೆಗೆ ದಾಳಿ ನಡೆಸಿದೆವು. ಹಿಜ್ಬುಲ್ಲಾ ವಾಯುಪಡೆ ವಿಭಾಗದ ಕಮಾಂಡರ್‌ನನ್ನು ಹೊಡೆದುರುಳಿಸಿದ್ದೇವೆ’ ಎಂದಿದೆ.

> **ಉತ್ತರ ಇಸ್ರೇಲ್‌ನ ನಮ್ಮ ಜನರು ತಮ್ಮ ಮನೆಗಳಿಗೆ ಮರಳುವವರೆಗೂ ನಾವು ಲೆಬನಾನ್‌ನ ಹಿಜ್ಬುಲ್ಲಾ ಮೇಲೆ ಪೂರ್ಣ ಬಲದೊಂದಿಗೆ ಯುದ್ಧ ಮಾಡುತ್ತೇವೆ**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ (ಅಮೆರಿಕಕ್ಕೆ ಬಂದಿಳಿದ ನೆತನ್ಯಾಹು ಅವರು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು)

ಲೆಬನಾನ್ ತೊರೆಯಲು ಭಾರತೀಯರಿಗೆ ಮನವಿ

‘ಪರಿಸ್ಥಿತಿ ಬಿಗಡಾಯಿಸುತ್ತಿರುವ ಕಾರಣ ಲೆಬನಾನ್‌ನಲ್ಲಿರುವ ಭಾರತೀಯರು ತಕ್ಷಣವೇ ದೇಶವನ್ನು ತೊರೆಯಬೇಕು’ ಎಂದು ಭಾರತವು ಗುರುವಾರ ಸೂಚಿಸಿದೆ. ‘ಲೆಬನಾನ್‌ನಲ್ಲಿ ಈಗಾಗಲೇ ಇರುವ ಭಾರತೀಯರು ತಕ್ಷಣವೇ ಅಲ್ಲಿಂದ ಹೊರಬನ್ನಿ. ಒಂದು ವೇಳೆ ಅಲ್ಲಿಯೇ ಇರಬೇಕಾದ ಪರಿಸ್ಥಿತಿ ಇದ್ದರೆ, ಮನೆ ಒಳಗೆ ಇರಿ, ಅನಗತ್ಯವಾಗಿ ಹೊರಗಡೆ ತಿರುಗಾಡಬೇಡಿ. ಜೊತೆಗೆ, ಬೈರೂತ್‌ನಲ್ಲಿರುವ ರಾಯಭಾರ ಕಚೇರಿಯ ಸಂಪರ್ಕ-ದಲ್ಲಿರಿ’ ಎಂದು ಹೇಳಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 666 ಅಂಶ ಏರಿಕೆ

ಮುಂಬೈ (ಪಿಟಿಐ): ಆಟೊ ಷೇರುಗಳ ಖರೀದಿ ಹೆಚ್ಚಳದಿಂದಾಗಿ ದೇಶದ ಷೇರುಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಹೊಸ ಎತ್ತರಕ್ಕೆ ಜಿಗಿದಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 666 ಅಂಶ ಏರಿಕೆ ಕಂಡು 85,836 ಅಂಶಗಳಲ್ಲಿ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 211 ಅಂಶ ಹೆಚ್ಚಳ ಕಂಡು 26,216 ಅಂಶಗಳಲ್ಲಿ ಸ್ಥಿರಗೊಂಡಿತು.



ಸೆನ್ಸೆಕ್ಸ್ ಗುಚ್ಛದಲ್ಲಿ ಮಾರುತಿ ಸುಜುಕಿ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಏರಿಕೆಯಾಗಿದೆ. ಟಾಟಾ ಮೋಟರ್ಸ್, ಬಜಾಜ್ ಫಿನ್‌ಸರ್ವ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಅಲ್ಟ್ರಾ ಟೆಕ್ ಸಿಮೆಂಟ್, ಬಜಾಜ್ ಫೈನಾನ್ಸ್ ಮತ್ತು ನೆಸ್ಲೆ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಎಲ್ ಆ್ಯಂಡ್ ಟಿ ಮತ್ತು ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ.

ಬೆಂಗಳೂರಲ್ಲಿ 29 ಯುವ ಉದ್ಯಮಿಗಳು: ಹುರುನ್

ಬೆಂಗಳೂರು: ಹುರುನ್ ಇಂಡಿಯಾ 35 ವರ್ಷದೊಳಗಿನ 150 ಯುವ ಉದ್ಯಮಿಗಳ 2024ರ ಪಟ್ಟಿಯನ್ನು ಗುರುವಾರ ಬಿಡುಗಡೆಗೊಳಿಸಿದ್ದು, ಈ ಪಟ್ಟಿಯಲ್ಲಿ ಬೆಂಗಳೂರಿನ 29 ಯುವ ಉದ್ಯಮಿಗಳು ಸ್ಥಾನ ಪಡೆದಿದ್ದಾರೆ.

ದೇಶದ 41 ನಗರಗಳ ಪೈಕಿ ಅತಿಹೆಚ್ಚು ಯುವ ಉದ್ಯಮಿಗಳನ್ನು ಹೊಂದಿರುವ ಪಟ್ಟಿಯಲ್ಲಿ ಬೆಂಗಳೂರು ಪ್ರಥಮ ಸ್ಥಾನದಲ್ಲಿದೆ. ಮುಂಬೈನಲ್ಲಿ 26 ಉದ್ಯಮಿಗಳಿದ್ದು, ಎರಡನೇ ಸ್ಥಾನ ಪಡೆದಿದೆ.

ಶೇರ್‌ಚಾಟ್‌ನ ಅಂಕುಶ್ ಸಚ್‌ದೇವ್ (31) ಪಟ್ಟಿಯಲ್ಲಿ ಇರುವವರಲ್ಲಿ ಅತಿ ಕಿರಿಯ ವಯಸ್ಸಿನ ಉದ್ಯಮಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. ಟಾಡಲ್‌ನ ಪರಿತಾ ಪರೇಖ್ ಮತ್ತು ಉದ್ಯಮಿ ಮುಕೇಶ್ ಅಂಬಾನಿ ಅವರ ಪುತ್ರಿ ಇಶಾ ಅಂಬಾನಿ (32) ಮಹಿಳಾ ಉದ್ಯಮಿಗಳ ಪಟ್ಟಿಯಲ್ಲಿ ಅತಿ ಕಿರಿಯರಾಗಿದ್ದಾರೆ.

ಕನಿಷ್ಠ 50 ಮಿಲಿಯನ್ ಡಾಲರ್ (₹418 ಕೋಟಿ) ವ್ಯವಹಾರ ಹೊಂದಿರುವ ಕಂಪನಿಯನ್ನು ಆಧರಿಸಿ ಈ ಪಟ್ಟಿ ಸಿದ್ಧಪಡಿಸಲಾಗಿದೆ.

ಈ ಪಟ್ಟಿಯಲ್ಲಿ ಐಐಟಿ ಮದ್ರಾಸ್‌ನಲ್ಲಿ ಪದವಿ ಪಡೆದ 13 ಉದ್ಯಮಿಗಳು ಸ್ಥಾನ ಪಡೆದಿದ್ದಾರೆ. ನಂತರ ಐಐಟಿ ಬಾಂಬೆ (11), ಐಐಟಿ ದೆಹಲಿ ಮತ್ತು ಐಐಟಿ ಖರಗ್‌ಪುರದಲ್ಲಿ ವ್ಯಾಸಂಗ ಮಾಡಿದ ತಲಾ 10 ವಿದ್ಯಾರ್ಥಿಗಳು ಇದ್ದಾರೆ.

ಐಐಟಿ ಮದ್ರಾಸ್‌ನಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ 7 ವಿದ್ಯಾರ್ಥಿಗಳು, ಐಐಟಿ ಖರಗ್‌ಪುರದ 6 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ ಎಂದು ಹುರುನ್ ಇಂಡಿಯಾ ತಿಳಿಸಿದೆ.

ಕನಿಷ್ಠ ಕೂಲಿ ದರ ₹1,035ಕ್ಕೆ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಾರ್ಮಿಕರ ಕನಿಷ್ಠ ಕೂಲಿ ದರವನ್ನು ದಿನವೊಂದಕ್ಕೆ ₹1,035ಕ್ಕೆ ಹೆಚ್ಚಿಸಿದೆ.

ಕಾರ್ಮಿಕರ ಜೀವನ ವೆಚ್ಚ ಆಧಾರದ ಮೇಲೆ ಕೂಲಿ ದರದಲ್ಲಿ ಏರಿಕೆ ಮಾಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ಗುರುವಾರ ತಿಳಿಸಿದೆ.

ಈ ದರ ಪರಿಷ್ಕರಣೆ ಆದೇಶವು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ. ಕಾರ್ಮಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಈ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಕಟ್ಟಡ, ಸ್ವಚ್ಛತೆ ಕೆಲಸಗಾರರು ಸೇರಿ ಕುಶಲರಹಿತ ಕಾರ್ಮಿಕರಿಗೆ ₹783 ನಿಗದಿಪಡಿಸಿದೆ (ತಿಂಗಳಿಗೆ ₹20,358). ಅರೆ ಕುಶಲ ಕಾರ್ಮಿಕರಿಗೆ ₹868 (ತಿಂಗಳಿಗೆ ₹22,568) ಹಾಗೂ ಕುಶಲ ಹೊಂದಿರುವ ಕಾರ್ಮಿಕರಿಗೆ ₹954 ಕನಿಷ್ಠ ಕೂಲಿ ದರ ನಿಗದಿಪಡಿಸಿದೆ (ತಿಂಗಳಿಗೆ ₹24,804).ಅತಿಹೆಚ್ಚು ಕುಶಲ ಹೊಂದಿರುವ ಕಾರ್ಮಿಕರಿಗೆ ₹1,035 ನಿಗದಿಪಡಿಸಿದೆ (ತಿಂಗಳಿಗೆ ₹26,910).

ಜಲವಿದ್ಯುತ್ ಯೋಜನೆಗೆ ಎಂಇಐಎಲ್ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಘಾ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಮಹಾರಾಷ್ಟ್ರ ರಾಜ್ಯ ಸರ್ಕಾರದ ಜಲ ಸಂಪನ್ಮೂಲ ಇಲಾಖೆ ಜೊತೆಗೆ 4 ಸಾವಿರ ಮೆಗಾವಾಟ್ ಸಾಮರ್ಥ್ಯದ ಎರಡು ಪ್ರಮುಖ ಜಲ ವಿದ್ಯುತ್ ಉತ್ಪಾದನಾ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಂಡಿದೆ.

ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದೀಪಕ್ ಕಪೂರ್ ಈ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದರು. ಕಂಪನಿಯ ಅಧ್ಯಕ್ಷ ಆರ್.ವಿ.ಆರ್. ಕಿಶೋರ್ ಉಪಸ್ಥಿತರಿದ್ದರು.

ಮಹಾರಾಷ್ಟ್ರದ ನಂದುರ್ಬಾರ್ ಜಿಲ್ಲೆ ಮತ್ತು ಛತ್ರಪತಿ ಸಂಭಾಜಿನಗರ ಜಿಲ್ಲೆಯಲ್ಲಿ ಈ ಯೋಜನೆಗಳು ಅನುಷ್ಠಾನಗೊಳ್ಳಲಿವೆ. ಈ ಎರಡೂ ಯೋಜನೆಗಳ ವೆಚ್ಚ ₹21,100 ಕೋಟಿ ಆಗಿದೆ. ಸುಮಾರು 2,500 ಉದ್ಯೋಗ ಸೃಷ್ಟಿಯಾಗಲಿವೆ ಎಂದು ಕಂಪನಿ ತಿಳಿಸಿದೆ.

ಪರಿಶಿಷ್ಟರ ನಿಧಿಯಲ್ಲೂ ಹಗರಣ: ಮೋದಿ

ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ಮುಂದುವರಿದ ವಾಗ್ದಾಳಿ • ಹರಿಯಾಣ ಬಿಜೆಪಿ ಕಾರ್ಯಕರ್ತರ ಜತೆ ಸಂವಾದ

ಚಂಡೀಗಢ (ಪಿಟಿಐ): ಹರಿಯಾಣದ ಚುನಾವಣಾ ಪ್ರಚಾರದಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, 'ಕರ್ನಾಟಕದಲ್ಲಿ ಆಡಳಿತ ನಡೆಸುವವರು ಪರಿಶಿಷ್ಟ ಸಮುದಾಯದವರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಹಣದಲ್ಲೂ ಹಗರಣ ನಡೆಸಿದ್ದಾರೆ' ಎಂದು ದೂರಿದರು.

'ಕರ್ನಾಟಕ ಅಥವಾ ತೆಲಂಗಾಣದಲ್ಲಿ ಅಧಿಕಾರದಲ್ಲಿ ಇರುವ ಸರ್ಕಾರಗಳು ಒಂದೇ ಒಂದು ಭರವಸೆಯನ್ನು ಈಡೇರಿಸಿಲ್ಲ' ಎಂದು ಆರೋಪಿಸಿದರು.

ಹರಿಯಾಣದಲ್ಲಿ 'ಮೇರಾ ಬೂತ್, ಸಬ್‌ಸೆ ಮಜಬೂತ್' ಕಾರ್ಯಕ್ರಮದಲ್ಲಿ 'ನಮೋ ಆ್ಯಪ್' ಮೂಲಕ ಬಿಜೆಪಿ ಕಾರ್ಯಕರ್ತರ ಜತೆ ಅವರು ಗುರುವಾರ ಸಂವಾದ ನಡೆಸಿದರು.

'ಕಾಂಗ್ರೆಸ್‌ನವರು ಬಹುತೇಕ ಸಮಯ ಆಂತರಿಕ ಕಚ್ಚಾಟದಲ್ಲಿಯೇ ಕಳೆಯುತ್ತಾರೆ. ಅಧಿಕಾರಕ್ಕಾಗಿ ಸುಳ್ಳುಗಳನ್ನು ಹೇಳಿ, ಜನರ ಸಮಸ್ಯೆಗಳಿಂದ ಅಂತರ ಕಾಯ್ದುಕೊಳ್ಳುತ್ತಾರೆ' ಎಂದು ಆರೋಪಿಸಿದ ಅವರು, ಹರಿಯಾಣದ ಜನರು ಬಿಜೆಪಿಗೆ ಇನ್ನೊಮ್ಮೆ ಅಧಿಕಾರ ನೀಡಲು ನಿರ್ಧರಿಸಿದ್ದಾರೆ ಎಂದರು.

10 ವರ್ಷಗಳಿಂದ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ಪೂರ್ಣವಾಗಿ ವಿಫಲವಾಗಿರುವ ಕಾಂಗ್ರೆಸ್, ಗರಿಷ್ಠ ಸಮಯವನ್ನು ಆಂತರಿಕ ಕಲಹದಲ್ಲಿಯೇ ಕಳೆದಿದೆ ಎಂದು ಹೇಳಿದರು.



ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆಯ ಎರಡನೇ ಹಂತದ ಮತದಾನ ಮುಗಿದಿದ್ದು, ಪೂಂಛ್ ಜಿಲ್ಲೆ ಮೆಂಧರ್‌ನಲ್ಲಿ ಇವಿಎಂ ಹಾಗೂ ಇತರ ಸಾಮಗ್ರಿಗಳನ್ನು ಚುನಾವಣಾ ಸಿಬ್ಬಂದಿ ಸ್ಟ್ರಾಂಗ್ ರೂಮ್‌ನಿಂದ ಮತ ಎಣಿಕೆ ಕೇಂದ್ರಕ್ಕೆ ಗುರುವಾರ ಸ್ಥಳಾಂತರಿಸಿದರು ಪಿಟಿಐ ಚಿತ್ರ

'ಹರಿಯಾಣದಲ್ಲಿ ಯುವಕರಿಗೆ ಭವಿಷ್ಯವಿಲ್ಲ'

ನವದೆಹಲಿ: ಬಿಜೆಪಿ ಆಡಳಿತವಿರುವ ಹರಿಯಾಣದಲ್ಲಿ ಯುವ ಜನರಿಗೆ ಉದ್ಯೋಗ ಮತ್ತು ಅವಕಾಶಗಳೇ ಇಲ್ಲವಾಗಿವೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಹರಿಯಾಣದ ಅಸೆಂಧ್‌ನಲ್ಲಿ ಅವರು ಗುರುವಾರ ಚುನಾವಣಾ ಪ್ರಚಾರ ನಡೆಸಿದರು. ಈ ವೇಳೆ ಹಿರಿಯ ನಾಯಕರಾದ ಕುಮಾರಿ ಸೆಲ್ಜಾ, ಮಾಜಿ ಮುಖ್ಯಮಂತ್ರಿ ಭೂಪಿಂದರ್ ಹೂಡಾ ಪಾಲ್ಗೊಂಡಿದ್ದರು.

'ಯುವ ಜನರು ಹರಿಯಾಣದಲ್ಲಿ ತಮಗೆ ಭವಿಷ್ಯವಿಲ್ಲ ಎಂದು ನಂಬುತ್ತಿದ್ದಾರೆ. ಲಕ್ಷಾಂತರ ರೂಪಾಯಿ ವಿನಿಯೋಗಿಸಿ ವಿದೇಶಗಳಿಗೆ ತೆರಳುತ್ತಿದ್ದಾರೆ' ಎಂದು ಅವರು ಹೇಳಿದರು.

ಜಮ್ಮು–ಕಾಶ್ಮೀರ: ಎರಡನೇ ಹಂತ ಮತದಾನ ಕುಸಿತ

ಪ್ರಜಾ ಮತ
ಜನತಂತ್ರದ ಹಬ್ಬ

ಶ್ರೀನಗರ: ಕಾಶ್ಮೀರದ ಶ್ರೀನಗರ, ಬುದ್ಗಾಮ್ ಮತ್ತು ಗಂದರ್‌ಬಾಲ್ ಜಿಲ್ಲೆಗಳ 15 ವಿಧಾನಸಭಾ ಕ್ಷೇತ್ರಗಳು ಮತ್ತು ಜಮ್ಮುವಿನ 11 ವಿಧಾನಸಭಾ ಕ್ಷೇತ್ರಗಳಲ್ಲಿ ಬುಧವಾರ ನಡೆದ ಎರಡನೇ ಹಂತದ ಮತದಾನವು 2014ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಶೇ 10ರಷ್ಟು ಕುಸಿತವಾಗಿದೆ.

ಕಳೆದ ಏಪ್ರಿಲ್, ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆ, ಸ್ಥಳೀಯ ರಾಜಕೀಯ ಚಟುವಟಿಕೆಗಳಿಂದ ಮತದಾರರಲ್ಲಿ ಉತ್ಸಾಹ ಹೆಚ್ಚಾಗಿದ್ದರಿಂದ ಉತ್ತಮ ಮತದಾನವನ್ನು ನಿರೀಕ್ಷಿಸಲಾಗಿತ್ತು. ಆದರೆ ಅಚ್ಚರಿ ಎಂಬಂತೆ ಕಳೆದ ಬಾರಿಗಿಂತ ಮತದಾನ ಕಡಿಮೆಯಾಗಿದೆ.

ಚುನಾವಣಾ ಆಯೋಗದ ಅಂಕಿ ಅಂಶಗಳ ಪ್ರಕಾರ ಶ್ರೀನಗರ, ಬುದ್ಗಾಮ್ ಮತ್ತು ಗಂದರ್‌ಬಾಲ್‌ನಲ್ಲಿ ಶೇ 48.27ರಷ್ಟು ಮತದಾನವಾಗಿದ್ದರೆ, 2014ರಲ್ಲಿ ಶೇ 57.01ರಷ್ಟು ಮತದಾನವಾಗಿತ್ತು. ಶ್ರೀನಗರ ಜಿಲ್ಲೆಯ ಎಂಟು ಕ್ಷೇತ್ರಗಳಲ್ಲಿ ಈ ಬಾರಿ ಶೇ 27.03ರಷ್ಟು ಮತದಾನವಾಗಿದ್ದರೆ, 2014ರಲ್ಲಿ ಶೇ 27.9ರಷ್ಟು ಮತದಾನವಾಗಿತ್ತು. ಅಂತೆಯೇ 2014ರಲ್ಲಿ ಬುದ್ಗಾಮ್ ಜಿಲ್ಲೆಯ ಐದು ಕ್ಷೇತ್ರಗಳಲ್ಲಿ ಶೇ 74.2ರಷ್ಟು ಮತದಾನವಾಗಿತ್ತು. ಅದು ಈ ಬಾರಿ ಶೇ 58.97ಕ್ಕೆ ಕುಸಿದಿದೆ. ಅಂದರೆ ಶೇ 16ರಷ್ಟು ಪ್ರಮಾಣ ಕುಸಿತವಾಗಿದೆ. ಗಂದರ್‌ಬಾಲ್ ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ 2014ರಲ್ಲಿ ಶೇ 68.95ರಷ್ಟು ಮತದಾನವಾಗಿತ್ತು. ಇಲ್ಲಿ ಈ ಬಾರಿ ಮತದಾನದ ಪ್ರಮಾಣ ಶೇ 58.81ಕ್ಕೆ ಇಳಿಕೆಯಾಗಿದೆ.

ಜಮ್ಮುವಿನ 11 ಕ್ಷೇತ್ರಗಳಲ್ಲಿ ಶೇ 68ರಿಂದ 80ರಷ್ಟು ಮತದಾನವಾಗಿದೆ. ಆದರೂ 2014ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಶೇ 10ರಷ್ಟು ಕಡಿಮೆಯಾಗಿದೆ. ಆದಾಗ್ಯೂ, ಉಗ್ರರ ಪೀಡಿತ ಜಿಲ್ಲೆಗಳಾದ ರಜೌರಿ, ಪೂಂಛ್ ಮತ್ತು ರಿಯಾಸಿಯಲ್ಲಿ ಮತದಾನ ಪ್ರಕ್ರಿಯೆಯು ಶಾಂತಿಯುತವಾಗಿ ನಡೆದಿದೆ.

'ಕೇಂದ್ರ ಸರ್ಕಾರವು ವಿದೇಶಿ ಪ್ರತಿನಿಧಿಗಳನ್ನು ಕರೆತರುವ ಮೂಲಕ ಶ್ರೀನಗರದಲ್ಲಿ ಸಾಮಾನ್ಯ ಸ್ಥಿತಿ ನೆಲೆಸಿದೆ ಎಂಬುದನ್ನು ಬಿಂಬಿಸುವ ಯತ್ನ ನಡೆಸಿತ್ತು. ಅಲ್ಲದೆ ಹೆಚ್ಚು ಮತದಾನ ನಡೆಯುವುದನ್ನು ತೋರಿಸಬಯಸಿತ್ತು. ಆದರೆ ಇಲ್ಲಿನ ಜನರು ಕಡಿಮೆ ಮತ ಚಲಾಯಿಸಿದ್ದಾರೆ. ಈ ಮೂಲಕ ಅವರು ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ್ದನ್ನು ವಿರೋಧಿಸಿದ್ದಾರೆ' ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ತಿಳಿಸಿದರು.

'ಭಯೋತ್ಪಾದನೆ ಉತ್ತೇಜಿಸಿದರೆ ಅಫ್ಜಲ್ ಗುರುಗಾದ ಗತಿ'

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ಉತ್ತೇಜಿಸುವವರಿಗೆ ಅಫ್ಜಲ್ ಗುರುವಿಗಾದ ಗತಿಯೇ ಎದುರಾಗಲಿದೆ ಎಂದು ಗೃಹ ಸಚಿವ ಅಮಿತ್ ಶಾ ಗುರುವಾರ ಎಚ್ಚರಿಸಿದರು. ಸಂಸತ್ತಿನ ಮೇಲೆ ದಾಳಿ ನಡೆಸಿದ ಅಪರಾಧಿ ಅಫ್ಜಲ್ ಗುರುವನ್ನು 2013ರ ಫೆಬ್ರುವರಿಯಲ್ಲಿ ತಿಹಾರ್ ಜೈಲಿನಲ್ಲಿ ಗಲ್ಲಿಗೇರಿಸಲಾಗಿತ್ತು.

'ಅಫ್ಜಲ್ ಗುರು ಅನ್ನು ಗಲ್ಲಿಗೇರಿಸಿದ್ದು ಸರಿಯೋ ಅಥವಾ ತಪ್ಪೋ ಎಂದು ಕೇಳಲು ಬಯಸುತ್ತೇನೆ' ಎಂದ ಅವರು, 'ಎನ್‌ಸಿ, ಕಾಂಗ್ರೆಸ್ ಪಕ್ಷಗಳು ಆತನನ್ನು ಗಲ್ಲಿಗೇರಿಸಬಾರದಿತ್ತು ಎಂದು ಈಗ ಹೇಳುತ್ತಿವೆ' ಎಂದರು.



'ಜೀವಿತಪುತ್ರಿಕಾ' ಉತ್ಸವ ಅಂಗವಾಗಿ ಬಿಹಾರದ ಔರಂಗಾಬಾದ್ ಜಿಲ್ಲೆಯಲ್ಲಿ ನದಿಯಲ್ಲಿ ಸ್ನಾನ ಮಾಡುವ ವೇಳೆ ಮುಳುಗಿ ಮೃತಪಟ್ಟವರ ಕುಟುಂಬದ ಸದಸ್ಯರು ರೋದಿಸಿದರು ಪಿಟಿಐ ಚಿತ್ರ

ನದಿಯಲ್ಲಿ ಮುಳುಗಿ 46 ಸಾವು

ಪಟ್ನಾ (ಎಎಫ್‌ಪಿ): 'ಜಿತಿಯಾ ವ್ರತ' ಅಂಗವಾಗಿ ಬಿಹಾರದಲ್ಲಿ ನದಿಗಳಲ್ಲಿ ಸ್ನಾನ ಮಾಡುವ ವೇಳೆ ಸಂಭವಿಸಿದ ಪ್ರತ್ಯೇಕ ಅವಘಡಗಳಲ್ಲಿ 37 ಮಕ್ಕಳು ಸೇರಿದಂತೆ 46 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಮೂವರು ಮೃತದೇಹಗಳು ಪತ್ತೆಯಾಗಿಲ್ಲ, ಉಳಿದವರ ಶವಗಳಿಗಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೆಲ ದಿನಗಳ ಹಿಂದೆ ಸುರಿದ ಭಾರಿ ಮಳೆಯಿಂದ ಅನೇಕ ನದಿಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಅಪಾಯದ ಮಟ್ಟ ಮೀರಿ ನೀರು ಹರಿಯುತ್ತಿರುವುದನ್ನು ನಿರ್ಲಕ್ಷಿಸಿದ ಜನರು ಹಬ್ಬದ ಅಂಗವಾಗಿ ಸ್ನಾನಕ್ಕೆ ಮುಂದಾಗಿದ್ದೇ ಅವಘಡಕ್ಕೆ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿ 'ಜಿತಿಯಾ ವ್ರತ' ಅಥವಾ 'ಜೀವಿತಪುತ್ರಿಕಾ' ಉತ್ಸವವನ್ನು ಆಚರಿಸಲಾಗುತ್ತದೆ.

ನೆರೆ ರಾಜ್ಯಗಳಾದ ಉತ್ತರ ಪ್ರದೇಶ, ಜಾರ್ಖಂಡ್ ಹಾಗೂ ನೇಪಾಳದಲ್ಲಿಯೂ ಈ ವ್ರತವನ್ನು ಆಚರಿಸಲಾಗುತ್ತದೆ.



ಸಿಯಾಚಿನ್ ಸೇನಾ ಶಿಬಿರಕ್ಕೆ ಗುರುವಾರ ಭೇಟಿ ನೀಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಯೋಧರಿಗೆ ಸಿಹಿ ತಿನ್ನಿಸಿದರು ಪಿಟಿಐ ಚಿತ್ರ

'ಬಿಜೆಪಿ ಹಿನ್ನಡೆಗೆ ಎನ್‌ಸಿಪಿ ಕಳಪೆ ಸಾಧನೆ ಕಾರಣ'

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಅಜಿತ್ ಪವಾರ್ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದಿಂದ (ಎನ್‌ಸಿಪಿ) ಅತ್ಯಂತ ಕಡಿಮೆ ಮತಗಳು ವರ್ಗವಾದ ಕಾರಣ ಬಿಜೆಪಿಗೆ ಹಿನ್ನಡೆಯಾಯಿತು ಎಂದು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಗುರುವಾರ ತಿಳಿಸಿದರು.

ಬಿಜೆಪಿ ಮೂಲ ಮತದಾರರು ಎನ್‌ಸಿಪಿ ಜತೆಗಿನ ಮೈತ್ರಿಯನ್ನು ಇಷ್ಟಪಟ್ಟಿರಲಿಲ್ಲ. ಅದರ ನಡುವೆಯೂ ಶೇ 80ರಷ್ಟು ಜನರಿಗೆ ಈ ರಾಜಕೀಯ ಹೊಂದಾಣಿಕೆಯ ಅಗತ್ಯಗಳ ಬಗ್ಗೆ ಮನವರಿಕೆಯಾಗಿದೆ ಎಂದು ಹೇಳಿದರು.

ಬಿಜೆಪಿ 9 ಕ್ಷೇತ್ರಗಳಲ್ಲಿ, ಶಿಂಧೆ ನೇತೃತ್ವದ ಶಿವಸೇನಾ 7 ಕ್ಷೇತ್ರಗಳಲ್ಲಿ ಮತ್ತು ಅಜಿತ್ ಪವಾರ್ ಅವರ ಎನ್‌ಸಿಪಿ 1 ಕ್ಷೇತ್ರದಲ್ಲಿ ಜಯಗಳಿಸಿತು ಎಂದು ಅವರು ಹೇಳಿದರು. 2019ರ ಚುನಾವಣೆಯಲ್ಲಿ ಬಿಜೆಪಿಯು 23 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು ಎಂದರು.

ಮುಂಬೈನ ಆಸ್ಪತ್ರೆಯಲ್ಲಿ ಸತತ 12 ತಾಸು ಶಸ್ತ್ರಚಿಕಿತ್ಸೆ

ಕೈ ಕಳೆದುಕೊಂಡಿದ್ದ ಬಾಲಕಿಗೆ ಯಶಸ್ವಿ ಕಸಿ

ಪ್ರಜಾವಾಣಿ ವಾರ್ತೆ

ಮುಂಬೈ: ವಿದ್ಯುತ್ ತಂತಿಯ ಸ್ಪರ್ಶದಿಂದ ಬಲಗೈ ಕಳೆದುಕೊಂಡಿದ್ದ ಇಲ್ಲಿನ ಗೋರೆಗಾಂವ್‌ನ 15 ವರ್ಷದ ಬಾಲಕಿ ಈಗ ಹೊಸ ಕೈ ಪಡೆದಿದ್ದಾರೆ. ಜಾಗತಿಕವಾಗಿ ಇದೇ ಮೊದಲ ಬಾರಿಗೆ ಭುಜ ಮಟ್ಟದವರೆಗಿನ ಅಂಗ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಬಾಲಕಿಯ ಪೋಷಕರಲ್ಲಿ ಸಂತಸ ಮೂಡಿಸಿದೆ.

ಅನಮ್ತಾ ಅಹ್ಮದ್ ಶಸ್ತ್ರಚಿಕಿತ್ಸೆಗೆ ಒಳಗಾದ ಬಾಲಕಿ. ಇಲ್ಲಿನ ಪರೇಲ್‌ನಲ್ಲಿರುವ ಗ್ಲೆನೆಗಲ್ಸ್ ಆಸ್ಪತ್ರೆಯಲ್ಲಿ ಪ್ಲಾಸ್ಟಿಕ್ ಸರ್ಜರಿ, ಕೈ ಮತ್ತು ಪುನರ್ ಜೋಡಣಾ ಮೈಕ್ರೋ ಸರ್ಜರಿ ವಿಭಾಗದ ಮುಖ್ಯಸ್ಥ ಡಾ. ನಿಲೇಶ್ ಸತ್ಬಾಯ್ ಅವರ ತಂಡ ಸುಮಾರು 12 ಗಂಟೆಗಳವರೆಗೆ ಈ ಶಸ್ತ್ರಚಿಕಿತ್ಸೆ ನಡೆಸಿದೆ.

ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದ ಮತ್ತು 'ಬ್ರೈನ್ ಡೆಡ್' ಎಂದು ಘೋಷಿಸಲಾಗಿದ್ದ ಸೂರತ್‌ನ 9 ವರ್ಷದ ಬಾಲಕಿಯು ಅನಮ್ತಾಗೆ ತನ್ನ ಅಂಗವನ್ನು ದಾನ ಮಾಡಿದ್ದಾರೆ.



ಅನಮ್ತಾ ಅಹ್ಮದ್

ಏನಾಗಿತ್ತು: ಅನಮ್ತಾ 13 ವರ್ಷದವರಿದ್ದಾಗ (2022) ತಮ್ಮ ಊರಾದ ಉತ್ತರ ಪ್ರದೇಶದ ಅಲಿಘಡಕ್ಕೆ ತೆರಳಿದ್ದರು. ಅಲ್ಲಿ ಸೋದರ ಸಂಬಂಧಿಗಳ ಜತೆ ಆಟ ಆಡುತ್ತಿದ್ದಾಗ, ಮಹಡಿ ಮೇಲಿನ 11 ಕೆ.ವಿ ತಂತಿಯ ಸ್ಪರ್ಶವಾಗಿ, ಬಲಗೈಗೆ ಗಂಭೀರ ಸುಟ್ಟು ಗಾಯಗಳಾಗಿದ್ದವು. ಅದು ಗ್ಯಾಂಗ್ರೀನ್ ಆಗಿ ಪರಿವರ್ತನೆಯಾಗಿದ್ದರಿಂದ ಮೂರು ಬಾರಿ ಕೈಯನ್ನು ಶಸ್ತ್ರಚಿಕಿತ್ಸೆ ಮೂಲಕ ತುಂಡರಿಸಬೇಕಾಯಿತು. ವಿದ್ಯುತ್ ಸ್ಪರ್ಶದ ವೇಳೆ ಬಾಲಕಿಯ ಎಡಗೈಗೂ ಗಂಭೀರ ಗಾಯಗಳಾಗಿದ್ದವು.

ಪೋಷಕರ ಅಲೆದಾಟ: ಬಾಲಕಿಯ ಈ ಸಂಕೀರ್ಣ ಸಮಸ್ಯೆಗೆ ಕೈ ಕಸಿಯಷ್ಟೇ ಸೂಕ್ತ ಪರಿಹಾರ ಎಂಬುದನ್ನು ಕಂಡುಕೊಂಡ ಪೋಷಕರು, ದೇಶದ ವಿವಿಧ ಆಸ್ಪತ್ರೆಗಳಿಗೆ, ಸಿಂಗಪುರ ಮತ್ತು ಥಾಯ್ಲೆಂಡ್‌ನ ಕೆಲ ಆಸ್ಪತ್ರೆಗಳಿಗೆ ಭೇಟಿ ನಿಡಿ ಚಿಕಿತ್ಸೆಗಾಗಿ ಪ್ರಯತ್ನಿಸಿದ್ದರು. ಅದರೆ ಬಾಲಕಿಯ ಬಲಗೈ ಭುಜದವರೆಗೆ ಕತ್ತರಿಸಿದ್ದರಿಂದ ಬಹುತೇಕ ಆಸ್ಪತ್ರೆಯವರು ಕೈ ಕಸಿ ಮಾಡಲು ನಿರಾಕರಿಸಿದ್ದರು. ಅಂತಿಮವಾಗಿ ಮುಂಬೈನ ಗ್ಲೆನೆಗಲ್ಸ್ ಆಸ್ಪತ್ರೆಗೆ ಭೇಟಿ ನೀಡಿದ ಪೋಷಕರು ಡಾ. ಸತ್ಭಾಯ್ ಅವರನ್ನು ಸಂಪರ್ಕಿಸಿದರು.

'ಎರಡು ವರ್ಷಗಳವರೆಗೆ ಕಾದ ಬಳಿಕ ನಮ್ಮ ಪ್ರಾರ್ಥನೆಗೆ ಉತ್ತರ ದೊರೆತಿರುವುದು ಪವಾಡವೇ ಸರಿ. ಇದರಿಂದ ನಮಗೆ ಸಂತಸವಾಗಿದೆ. ತನಗೆ ಕೈ ಮರಳಿ ಬರುತ್ತದೆ ಎಂಬ ವಿಷಯ ತಿಳಿದಾಗ, ಮಗಳೂ ಅಳು ತಡೆದುಕೊಳ್ಳಲಿಲ್ಲ. ಬಳಿಕ ಸಮಾಧಾನದ ನಿಟ್ಟುಸಿರು ಬಿಟ್ಟಳು' ಎಂದು ಚಲನಚಿತ್ರ ನಿರ್ಮಾಪಕರೂ ಆದ ಬಾಲಕಿಯ ತಂದೆ ಅಕೀಲ್ ಅಹ್ಮದ್ ಪ್ರತಿಕ್ರಿಯಿಸಿದರು.

ಇದೀಗ, ಶಸ್ತ್ರಚಿಕಿತ್ಸೆಯ ಬಳಿಕ ಬಾಲಕಿ ಚೇತರಿಸಿಕೊಳ್ಳುತ್ತಿದ್ದಾರೆ. ಇನ್ನೂ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರು ಶಾಲೆಗೆ ಮರಳುವುದನ್ನೂ ಕುತೂಹಲದಿಂದ ನಿರೀಕ್ಷಿಸುತ್ತಿದ್ದಾರೆ.

ಸಂಕೀರ್ಣ ಕಸಿ ಕಾರ್ಯಕ್ಕೆ ಸಮ್ಮತಿ ಸೂಚಿಸಿದ ಗ್ಲೆನೆಗಲ್ಸ್ ವೈದ್ಯರ ತಂಡ, ಹಲವು ಸವಾಲುಗಳನ್ನು ಮೆಟ್ಟಿ ಯಶಸ್ವಿಯಾಗಿ ಈ ಕಾರ್ಯ ಪೂರ್ಣಗೊಳಿಸಿತು. 'ಬಾಲಕಿ ಚೇತರಿಸಿಕೊಳ್ಳುತ್ತಿದ್ದು, ಐಸಿಯುನಲ್ಲಿ ನಿಗಾದಲ್ಲಿರಿಸಲಾಗಿದೆ. ಸದ್ಯದಲ್ಲಿಯೇ ಅವರಿಗೆ ಫಿಸಿಯೋಥೆರಪಿ ಮತ್ತು ಪುನಶ್ಚೇತನ ಚಿಕಿತ್ಸೆ ಆರಂಭಿಸಲಾಗುವುದು. ಕಸಿ ಬಳಿಕ ಸಮರ್ಪಕ ಕಾರ್ಯನಿರ್ವಹಣೆಗೆ 9ರಿಂದ 12 ತಿಂಗಳು ಬೇಕಾಗುತ್ತದೆ' ಎಂದು ವೈದ್ಯ ಡಾ. ಸತ್ಭಾಯ್ ತಿಳಿಸಿದರು.

ಐಐಟಿ ಪ್ರವೇಶ: ಹೋರಾಟ ಯಶ

ಮುಜಫ್ಫರ ನಗರ (ಪಿಟಿಐ): ಉತ್ತರ ಪ್ರದೇಶದ ಮುಜಫ್ಫರ ನಗರ ಜಿಲ್ಲೆಯ ಟಿಟೋರಾ ಗ್ರಾಮದ ಅಷ್ಟೂ ನಿವಾಸಿಗಳಿಗೆ ಕೆಲ ತಿಂಗಳಿಂದ ಒಂದು ಅಂಶ ಬಾಧಿಸುತ್ತಿತ್ತು. ಅದು, ಗ್ರಾಮದ ದಲಿತ ಯುವಕ ಅತುಲ್‌ಗೆ ಪ್ರತಿಷ್ಠಿತ ಐಐಟಿ –ಧನಬಾದ್‌ಗೆ ಪ್ರವೇಶ ಒದಗಿಸುವುದು. ಇಡೀ ಗ್ರಾಮ ಯುವಕನ ಬೆನ್ನಿಗೇ ನಿಂತಿತ್ತು.

ಐಐಟಿ –ಧನಬಾದ್‌ಗೆ ಯುವಕನಿಗೆ ಪ್ರವೇಶ ಸಿಗಬೇಕು ಎಂದು ನಿಶ್ಚಯಿಸಿದ್ದ ಗ್ರಾಮಸ್ಥರು ಇದಕ್ಕಾಗಿ ಹಣ ಸಂಗ್ರಹಿಸಿ, ಸುಪ್ರೀಂ ಕೋರ್ಟ್‌ವರೆಗೂ ತಮ್ಮ ಹೋರಾಟವನ್ನು ಕೊಂಡೊಯ್ದಿದ್ದರು.

ತೀವ್ರ ಸ್ಪರ್ಧೆಯಿದ್ದ ಜೆಇಇ ಅಡ್ವಾನ್ಸಡ್ ಪರೀಕ್ಷೆಯಲ್ಲಿ ಗ್ರಾಮದ ದಲಿತ ಯುವಕ, 18 ವರ್ಷದ ಅತುಲ್ ಕುಮಾರ್ ಯಶಸ್ಸು ಸಾಧಿಸಿದ್ದ. ಆದರೆ, ತಾಂತ್ರಿಕ ಕಾರಣದಿಂದ ನಿಗದಿತ ಅವಧಿಯಲ್ಲಿ ಶುಲ್ಕ ₹17,500 ಪಾವತಿಸಲಿಲ್ಲ ಎಂಬ ಕಾರಣಕ್ಕೆ ಆತನಿಗೆ ಐಐಟಿ–ಧನ್‌ಬಾದ್‌ಗೆ ಪ್ರವೇಶ ಗಗನಕುಸುಮವಾಗಿತ್ತು.

ಈಗ ಅತುಲ್ ಕುಮಾರ್ ಮತ್ತು ಕುಟುಂಬ ಹಾಗೂ ಇಡೀ ಗ್ರಾಮ ನಿರಾಳ ಭಾವದಲ್ಲಿದೆ. ಅತುಲ್ ಐಐಟಿಗೆ ಪ್ರವೇಶ ಪಡೆಯಲು ನೆರವಾಗುವುದಾಗಿ ಸುಪ್ರೀಂ ಕೋರ್ಟ್‌ನ ಮಾತು, ಹೊಸ ಭರವಸೆ ಮೂಡಿಸಿದೆ.

'ನನ್ನ ಮಗ ತನ್ನ ಕೈಮೀರಿದ್ದ ಸಮಸ್ಯೆಗಳನ್ನು ಎದುರಿಸುತ್ತಿದ್ದ. ಜೆಇಇ ಅಡ್ವಾನ್ಸಡ್ ಪರೀಕ್ಷೆಯಲ್ಲಿ ಯಶ ಸಾಧಿಸಲು ಕಠಿಣವಾಗಿ ಶ್ರಮಪಟ್ಟಿದ್ದ' ಎಂದು ಅತುಲ್ ತಂದೆ ರಾಜೇಂದ್ರ ಕುಮಾರ್ ಪ್ರತಿಕ್ರಿಯಿಸಿದರು.

ರಾಜೇಂದ್ರ ಕುಮಾರ್ ಅವರು ಜವಳಿ ಸಂಸ್ಥೆಯೊಂದರ ಕಾರ್ಮಿಕ. ನಾನು ಶುಲ್ಕ ಹೊಂದಿಸಲು ಪರಿಚಿತರಿಂದ, ಗ್ರಾಮಸ್ಥರಿಂದ ನೆರವು ಕೋರಿದ್ದೆ. ಆದರೆ, ನಿಗದಿತ ಗಡುವಿನಲ್ಲಿ ಶುಲ್ಕ ಭರಿಸಲು ಆಗಿರಲಿಲ್ಲ. ಆನ್‌ಲೈನ್‌ನಲ್ಲಿ ಕಂಡುಬಂದಿದ್ದ ತಾಂತ್ರಿಕ ಸಮಸ್ಯೆ ಮೂರು ತಿಂಗಳು ತಲೆಬೇನೆಗೆ ಕಾರಣವಾಗಿತ್ತು ಎಂದರು.

'ಹೇಗೋ, ಗಡುವಿನೊಳಗೆ ಶುಲ್ಕ ಪಾವತಿಸಲು ಹಣ ಹೊಂದಿಸಿದ್ದೆವು. ದುರದೃಷ್ಟವಶಾತ್ ತಾಂತ್ರಿಕ ಸಮಸ್ಯೆ ಎದುರಾಗಿತ್ತು. ಪುತ್ರನಿಗೆ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಸೀಟು ಲಭ್ಯವಾಗಿದ್ದ ಐಐಟಿ– ಧನಬಾದ್ ಆಡಳಿತವನ್ನು ಸಂಪರ್ಕಿಸಿದ್ದೆವು. ಶುಲ್ಕ ಪಾವತಿಸಲು ಗಡುವು ಮುಗಿದಿದೆ' ಎಂದಿದ್ದರು.

ತದನಂತರ, ಸುಪ್ರೀಂ ಮೆಟ್ಟಿಲೇರಲು ಕುಟುಂಬ ತೀರ್ಮಾನಿಸಿತ್ತು.

'ಐಐಟಿಗೆ ಪ್ರವೇಶ ಪಡೆಯುವುದು, 10ನೇ ತರಗತಿಯಲ್ಲಿ ತೇರ್ಗಡೆ ಆದಂದಿನಿಂದ ನನ್ನ ಕನಸಾಗಿತ್ತು. ಶಿಕ್ಷಣಕ್ಕೆ ನನ್ನ ಪೋಷಕರು ನೆರವಾಗಿದ್ದರು. ಆದರೆ, ಈ ತಾಂತ್ರಿಕ ಸಮಸ್ಯೆ ಈಗ ತೊಡಕಾಗಿತ್ತು. ಆದರೆ, ಇದೆಲ್ಲವೂ ತಾತ್ಕಾಲಿಕ, ನನಗೆ ಪ್ರವೇಶ ಸಿಗಲಿದೆ ಎಂಬ ವಿಶ್ವಾಸ ಇತ್ತು' ಅತುಲ್ ಪ್ರತಿಕ್ರಿಯಿಸಿದರು.

'ಅತುಲ್ ಪ್ರತಿಭಾವಂತ ವಿದ್ಯಾರ್ಥಿ. ಸಕಾರಾತ್ಮಕ ಪ್ರತಿಕ್ರಿಯೆ ಸಿಗುವ ವಿಶ್ವಾಸವಿತ್ತು' ಎಂದು ಅತುಲ್‌ಗೆ ₹10 ಸಾವಿರ ನೆರವು ನೀಡಿದ್ದ, ಸ್ಥಳೀಯ ಶಿಕ್ಷಕ ರಾಜಕುಮಾರ್ ಪ್ರತಿಕ್ರಿಯಿಸಿದರು.

ಮೂರು ಸೂಪರ್‌ಕಂಪ್ಯೂಟರ್‌ಗಳಿಗೆ ಚಾಲನೆ ನೀಡಿದ ಪ್ರಧಾನಿ ಮೋದಿ

ಪುಣೆ (ಪಿಟಿಐ): 'ತಂತ್ರಜ್ಞಾನದ ಉನ್ನತೀಕರಣದಿಂದ ಬಡವರಿಗೆ ಶಕ್ತಿ ತುಂಬಿದರೆ ಮಾತ್ರ ದೇಶದ ಉನ್ನತ ಸಾಧನೆಗೆ ಅರ್ಥ ಬರುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

'ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್' ಅಡಿಯಲ್ಲಿ ನಿರ್ಮಿಸಿದ ಸ್ವದೇಶಿ ನಿರ್ಮಿತ ಮೂರು 'ಪರಂ ರುದ್ರ ಸೂಪರ್ ಕಂಪ್ಯೂಟರ್ಸ್'ಗೆ ವಿಡಿಯೊ ಲಿಂಕ್ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

'ತಂತ್ರಜ್ಞಾನದ ಅಭಿವೃದ್ಧಿಯ ಲಾಭವು ಬಡವರಿಗೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ. 2015ರಲ್ಲಿ ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್ ಜಾರಿಗೆ ತಂದಿದ್ದೆವು. ಕ್ವಾಂಟಂ ಕಂಪ್ಯೂಟಿಂಗ್ ತಂತ್ರಜ್ಞಾನದ ಅಭಿವೃದ್ಧಿಯಿಂದ ಐ.ಟಿ, ಉತ್ಪಾದನಾ ಕ್ಷೇತ್ರ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (ಎಂಎಸ್‌ಎಂಇ) ಹಾಗೂ ಸ್ಟಾರ್ಟ್‌ಅಪ್ ಕ್ಷೇತ್ರಗಳಲ್ಲಿ ಉನ್ನತೀಕರಣಕ್ಕೆ ನೆರವಾಗಿದೆ' ಎಂದು ಅವರು ತಿಳಿಸಿದರು.

'ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಶೋಧನಾ ಕ್ಷೇತ್ರಗಳಿಗೆ ಸರ್ಕಾರವು ಗರಿಷ್ಠ ಆದ್ಯತೆ ನೀಡಿದೆ. 'ಮಿಷನ್ ಗಗನ್‌ಯಾನ್' ಈಗಾಗಲೇ ಆರಂಭಗೊಂಡಿದ್ದು, 2035ರ ವೇಳೆಗೆ ನಾವು ಸ್ವಂತ ಬಾಹ್ಯಾಕಾಶ ನಿಲ್ದಾಣ ಹೊಂದಿರಲಿದ್ದೇವೆ. ಮೊದಲ ಹಂತದ ಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದೆ' ಎಂದು ಹೇಳಿದರು.

ಪ್ರತಿಭಟನೆ: ಅರುಣಾಚಲದಿಂದ ವಾಪಸಾದ ಶಂಕರಾಚಾರ್ಯ

ಪ್ರಜಾವಾಣಿ ವಾರ್ತೆ

ಗುವಾಹಟಿ: ಗೋ ಹತ್ಯೆ ವಿರುದ್ಧ ಆಂದೋಲನ ನಡೆಸುತ್ತಿರುವ ಆಧ್ಯಾತ್ಮಿಕ ಗುರು ಶಂಕರಾಚಾರ್ಯ ಅವರು, ಅಖಿಲ ಅರುಣಾಚಲ ಪ್ರದೇಶ ವಿದ್ಯಾರ್ಥಿಗಳ ಸಂಘಟನೆ (ಎಎಪಿಎಸ್‌ಯು) ಕಾರ್ಯಕರ್ತರ ಪ್ರತಿಭಟನೆಯಿಂದಾಗಿ ಅರುಣಾಚಲ ಪ್ರದೇಶ ರಾಜಧಾನಿ ಇಟಾನಗರ ವಿಮಾನನಿಲ್ದಾಣದಿಂದ ಗುರುವಾರ ವಾಪಸಾಗಿದ್ದಾರೆ.

ಶಂಕರಾಚಾರ್ಯ ಅವರು 'ಗೋ ಧ್ವಜ ಸ್ಥಾಪನಾ ಭಾರತ ಯಾತ್ರಾ' ಕೈಗೊಂಡಿದ್ದು, ಅರುಣಾಚಲ ಪ್ರದೇಶದಲ್ಲಿ ಶುಕ್ರವಾರ ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದರು ಈಶಾನ್ಯ ರಾಜ್ಯಗಳಲ್ಲಿ ಗೋವುಗಳ ಹತ್ಯೆಯನ್ನು ತಡೆಯುವ ಉದ್ದೇಶದಿಂದ ಈ ಯಾತ್ರೆಯನ್ನು ಹಮ್ಮಿಕೊಂಡಿದ್ದಾರೆ.

ಶಂಕರಾಚಾರ್ಯ ಹಾಗೂ ಅವರ ತಂಡವಿದ್ದ ಖಾಸಗಿ ವಿಮಾನ, ಇಟಾನಗರದ ಡಾನ್‌ಯಿ ಪೋಲೊ ವಿಮಾನನಿಲ್ದಾಣದಲ್ಲಿ ಗುರುವಾರ ಬೆಳಿಗ್ಗೆ 9.30ಕ್ಕೆ ಇಳಿದಾಗ, ಎಎಪಿಎಸ್‌ಯು ಕಾರ್ಯಕರ್ತರು ನಿರ್ಗಮನ ದ್ವಾರಗಳನ್ನು ಬಂದ್ ಮಾಡಿ ಪ್ರತಿಭಟಿಸಿದರು.

ಎರಡು ಗಂಟೆ ನಂತರವೂ ಪ್ರತಿಭಟನೆ ನಿಲ್ಲದಿದ್ದಾಗ, ವಾಪಸು ತೆರಳುವಂತೆ ಪಾಪುಮ್ ಪಾರೆ ಜಿಲ್ಲಾಡಳಿತ ಶಂಕರಾಚಾರ್ಯ ಅವರಿಗೆ ಮನವಿ ಮಾಡಿತು. ನಂತರ, 11.30ರ ಸುಮಾರಿಗೆ ವಿಮಾನ ನಿರ್ಗಮಿಸಿತು ಎಂದು ಮೂಲಗಳು ಹೇಳಿವೆ.

'ನಾವು ಹಿಂದೂಗಳು ಅಥವಾ ಶಂಕರಾಚಾರ್ಯ ಅವರ ವಿರೋಧಿಗಳಲ್ಲ. ಗೋ ಹತ್ಯೆ ವಿರುದ್ಧ ಅವರು ನಡೆಸುತ್ತಿರುವ ಅಭಿಯಾನಕ್ಕೆ ನಮ್ಮ ವಿರೋಧವಿದೆ. ನಾವು ಬಯಸಿದ ಆಹಾರ ಸೇವಿಸುವುದು ನಮ್ಮ ಸಾಂವಿಧಾನಿಕ ಹಕ್ಕು' ಎಂದು ಎಎಪಿಎಸ್‌ಯು ಪ್ರಧಾನ ಕಾರ್ಯದರ್ಶಿ ರಿತುಮ್ ತಾಲಿ ಹೇಳಿದ್ದಾರೆ.

'ದೇಶದಲ್ಲಿ ಮಹಿಳೆಯರ ಚೆಸ್ ಸಾಕಷ್ಟು ಪ್ರಗತಿ ಕಾಣಬೇಕಿದೆ'

ಮುಂಬೈ (ಪಿಟಿಐ): ಒಲಿಂಪಿಯಾಡ್‌ನಲ್ಲಿ ಭಾರತದ ಅಸಾಧಾರಣ ಸಾಧನೆಯಿಂದ ಸಂಭ್ರಮದಲ್ಲಿರುವ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು, 'ಇದು ಭರವಸೆಯನ್ನು ಮೂಡಿಸುವಂಥ ಆರಂಭ. ಆದರೆ ದೇಶದಲ್ಲಿ ಮಹಿಳೆಯರ ವಿಭಾಗದ ಚೆಸ್ ಸಾಕಷ್ಟು ಪ್ರಗತಿ ಕಾಣಬೇಕಾಗಿದೆ' ಎಂದೂ ಹೇಳಿದ್ದಾರೆ.



ವಿಶ್ವನಾಥನ್ ಆನಂದ್

ಬುಡಾಪೆಸ್ಟ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ಒಲಿಂಪಿಯಾಡ್‌ನಲ್ಲಿ ಭಾರತ ತಂಡಗಳು ಓಪನ್ ಮತ್ತು ಮಹಿಳೆಯರ ವಿಭಾಗದಲ್ಲಿ ಮೊದಲ ಬಾರಿ ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದವು. ಯುವ ಪ್ರತಿಭೆಗಳಾದ ಆರ್.ಪ್ರಜ್ಞಾನಂದ, ಡಿ.ಗುಕೇಶ್ ಅವರು ವಿಶ್ವ ಮಟ್ಟದಲ್ಲಿ ಯಶಸ್ಸಿನ ಅಲೆಗಳನ್ನು ಎಬ್ಬಿಸುತ್ತಿರುವ ಕಾರಣ ದೇಶದಲ್ಲಿ ಪುರುಷರ ವಿಭಾಗದಲ್ಲಿ ಚೆಸ್ ಜನಪ್ರಿಯತೆ ಪಡೆದಿದೆ. ಆದರೆ ಮಹಿಳೆಯ ವಿಭಾಗದಲ್ಲಿ ಇದೇ ಸ್ಥಿತಿಯಿಲ್ಲ.

'ಇದು ಉತ್ತಮ ಆರಂಭ. ಆದರೆ ನಾವು ನಿರಂತರವಾಗಿ ಪ್ರಗತಿ ಸಾಧಿಸಬೇಕಾದ ಕಾರಣ ಕ್ರಮಿಸಬೇಕಾದ ಹಾದಿ ಬಹಳಷ್ಟು ಇದೆ' ಎಂದು ಅವರು ಟೆಕ್ ಮಹೀಂದ್ರ ಗ್ಲೋಬಲ್ ಚೆಸ್ ಲೀಗ್ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಸಂದರ್ಭದಲ್ಲಿ ಪಿಟಿಐಗೆ ತಿಳಿಸಿದರು.

'ಇನ್ನೂ ಹೆಚ್ಚಿನ ಬಾಲಕಿಯರು ಚೆಸ್‌ನತ್ತ ಆಕರ್ಷಿತರಾಗಬೇಕಾಗಿದೆ. ಈ ಫಲಿತಾಂಶ ಆ ನಿಟ್ಟಿನಲ್ಲಿ ಪ್ರೇರಣೆ ಮೂಡಿಸಬಹುದು' ಎಂದು 54 ವರ್ಷದ ಚೆಸ್ ತಾರೆ ವಿಶ್ವಾಸ ವ್ಯಕ್ತಪಡಿಸಿದರು.

'ಇಂಥ ಒಂದು ಸಾಧನೆಯಾಗಿದ್ದು ಹೆಮ್ಮೆಯ ವಿಷಯ. ಇದು ನನಗೆ ಅಚ್ಚರಿಗೊಳಿಸಿದ ಫಲಿತಾಂಶವೇನಲ್ಲ. ಆದರೆ ಎರಡು ಚಿನ್ನ ಬಂದು ಡಬಲ್ ಒಲಿಂಪಿಯಾಡ್ ಚಾಂಪಿಯನ್ ಆಗಿದ್ದು ಸಂತಸ ಮೂಡಿಸಿತು' ಎಂದರು.

'ನಾನು ವೈಯಕ್ತಿಕವಾಗಿ ಸ್ಥಳದಲ್ಲಿದ್ದುದ್ದು ಆ ಸಂಸತ ಅನುಭವಿಸಿದೆ. ಎರಡು ಬಾರಿ ರಾಷ್ಟ್ರಗೀತೆ ನುಡಿಸಿದಾಗ ಆನಂದಿಸಿದೆ. ಭಾರತದ ಪ್ರದರ್ಶನ ಇಡೀ ವಿಶ್ವ ಒಮ್ಮೆ ನಮ್ಮ ದೇಶದ ಕಡೆ ನೋಡುವಂತೆ ಮಾಡಿತು' ಎಂದು ಆನಂದ್ ಸಂತಸ ಹಂಚಿಕೊಂಡರು.

'ಭಾರತದ ಪ್ರದರ್ಶನ ಮೆಚ್ಚುವಂಥದ್ದೇ. ಆದರೆ ಇತರ ತಂಡಗಳು ತಮ್ಮ ಫಲಿತಾಂಶಗಳ ಮೌಲ್ಯಮಾಪನ, ವಿಶ್ಲೇಷಣೆ ನಡೆಸಿ ಮತ್ತಷ್ಟು ಪ್ರಬಲವಾಗಿ ಹಿಂತಿರುಗಬಹುದು' ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು.

ಈ ಬಾರಿಯ ಗ್ಲೋಬಲ್ ಚೆಸ್ ಲೀಗ್ (ಜಿಸಿಎಲ್) ಲಂಡನ್‌ನಲ್ಲಿ ಅಕ್ಟೋಬರ್ 3 ರಿಂದ 12ರವರೆಗೆ ನಡೆಯಲಿದ್ದು, ಆನಂದ್ ಅವರೂ (ಗ್ಯಾಂಜೆಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡ) ಇದರಲ್ಲಿ ಆಡಲಿದ್ದಾರೆ.

ಚೆಸ್‌ಗೆ ಬಂದಿದ್ದೇ ಆಕಸ್ಮಿಕ: ವಿದಿತ್ ಗುಜರಾತಿ

ನವದೆಹಲಿ (ಪಿಟಿಐ): ಗ್ರ್ಯಾಂಡ್ ಮಾಸ್ಟರ್ ವಿದಿತ್ ಗುಜರಾತಿ ಅವರು ಬಾಲ್ಯದಲ್ಲಿ ಕ್ರಿಕೆಟಿನಾಗುವ ಕನಸು ಕಂಡವರು. ಚೆಸ್ ಆಟಕ್ಕೆ ಬಂದಿದ್ದು ಆಕಸ್ಮಿಕವಾಗಿ. ಆದರೆ ಈ ಆಕಸ್ಮಿಕ ತಮ್ಮ ಪಾಲಿಗೆ ಒಳಿತೇ ಉಂಟುಮಾಡಿತು ಎಂದು ಅವರು ಹೇಳಿದ್ದಾರೆ.



ಬುಡಾಪೆಸ್ಟ್ ಚೆಸ್ ಒಲಿಂಪಿಯಾಡ್‌ನಲ್ಲಿ ಐತಿಹಾಸಿಕ ಚಿನ್ನಗೆದ್ದ ಭಾರತದ ಪುರುಷರ ತಂಡದಲ್ಲಿ ಗುಜರಾತಿ ಒಬ್ಬರು. ಅವರು ಆಡಿದ 9ರಲ್ಲಿ ಒಂದೂ ಪಂದ್ಯ ಸೋತಿರಲಿಲ್ಲ. 29 ವರ್ಷ ವಯಸ್ಸಿನ ವಿದಿತ್ ಮಹಾರಾಷ್ಟ್ರದ ನಾಸಿಕ್‌ನವರು.

'ಚೆಸ್ ನನ್ನ ಪಾಲಿಗೆ ಆಕಸ್ಮಿಕ. ನನಗೆ ಆಗ ಆರು ವರ್ಷ. ತುಂಟನಾಗಿದ್ದೆ. ನನ್ನನ್ನು ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿಸಿದರೆ ಸುಮ್ಮನಿರುತ್ತಾನೆ ಎಂದು ತಂದೆ–ತಾಯಿ ಭಾವಿಸಿದರು. ಆಗ ಭಾರತದ ಎಲ್ಲ ಹುಡುಗರಂತೆ ನನಗೂ ಕ್ರಿಕೆಟ್ ಇಷ್ಟವಿತ್ತು. ಕ್ರಿಕೆಟ್ ಆಡುತ್ತಿದ್ದೆ' ಎಂದರು.

'ನಾವು ಬುಡಾಪೆಸ್ಟ್‌ನಲ್ಲಿ 22ರಲ್ಲಿ 21 ಅಂಕ ಗಳಿಸಿದೆವು. ಈ ದಾಖಲೆ ಮುರಿಯುವುದು ಕಷ್ಟ.ಮಹಿಳಾ ತಂಡವೂ ಚಿನ್ನ ಗೆದ್ದುದು ಸಂಭ್ರಮವನ್ನು ಹೆಚ್ಚಿಸಿತು' ಎಂದರು.



ಕ್ಯಾಪ್ಟನ್ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ಗೆದ್ದುಕೊಂಡ ಬರೋಡಾ ತಂಡ

ಬರೋಡಾ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಡಗೈ ವೇಗದ ಬೌಲರ್ ಲುಕ್ಮಾನ್ ಮೇರಿವಾಲಾ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಬರೋಡಾ ತಂಡ, ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮಹಾರಾಷ್ಟ್ರ ತಂಡವನ್ನು ಇನಿಂಗ್ಸ್ ಹಾಗೂ 96 ರನ್‌ಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಎರಡನೇ ದಿನವೇ ಬರೋಡಾ ಗೆಲುವಿನತ್ತ ಹೆಜ್ಜೆಯಿಟ್ಟಿತು. 271 ರನ್ ಹಿನ್ನಡೆಯೊಡನೆ ಎರಡನೇ ಇನಿಂಗ್ಸ್ ಆರಂಭಿಸಿದ್ದ ಮಹಾರಾಷ್ಟ್ರ ಎರಡನೇ ದಿನದಾಟ ಮುಗಿದಾಗ 5 ವಿಕೆಟ್‌ಗೆ 121 ರನ್ ಗಳಿಸಿತ್ತು. ಮೂರನೇ ದಿನವಾದ ಗುರುವಾರ ಮಹಾರಾಷ್ಟ್ರ ತಂಡದ ಇನಿಂಗ್ಸ್ 16 ಓವರುಗಳ ಆಟದ ನಂತರ 175 ರನ್‌ಗಳಿಗೆ ಕೊನೆಗೊಂಡಿತು. ಲುಕ್ಮಾನ್ 53 ರನ್‌ಗಳಿಗೆ 5 ವಿಕೆಟ್ ಪಡೆದರು. ಮೊದಲ ಇನಿಂಗ್ಸ್‌ನಲ್ಲಿ ಅವರು 4 ವಿಕೆಟ್ ಪಡೆದಿದ್ದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ: 127; ಬರೋಡಾ ಕ್ರಿಕೆಟ್ ಸಂಸ್ಥೆ: 74.2 ಓವರುಗಳಲ್ಲಿ 398; ಎರಡನೇ ಇನಿಂಗ್ಸ್: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ: 50.2 ಓವರುಗಳಲ್ಲಿ 175 (ಅಂಕಿತ್ ಭಾವ್ನೆ 47, ಲುಕ್ಮಾನ್ ಮೇರಿವಾಲಾ 53ಕ್ಕೆ5, ಬಾಬಾಸಫಿ ಪಠಾಣ್ 59ಕ್ಕೆ2, ರಾಜ್ ಲಿಂಬಾನಿ 18ಕ್ಕೆ2)

ಡಾಜ್‌ಬಾಲ್: ರಾಜ್ಯ ತಂಡಕ್ಕೆ ಭರತ್, ದೀಪ್ಸಿಖಾ ನೇತೃತ್ವ

ಬೆಂಗಳೂರು: ಭರತ್ ವಿ.ಬಿ. ಮತ್ತು ದೀಪ್ಸಿಖಾ ಗದ್ದಮ್ ಅವರು ಇದೇ 27ರಿಂದ 29ರವರೆಗೆ ಪಾಂಡಿಚೇರಿಯಲ್ಲಿ ನಡೆಯುವ 3ನೇ ಸಬ್ ಜೂನಿಯರ್ ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡವನ್ನು ಮುನ್ನಡೆಸಲಿದ್ದಾರೆ.

ಎಚ್‌ಎಎಲ್ ಪಬ್ಲಿಕ್ ಶಾಲೆಯ ದೀಪ್ಸಿಖಾ ಮತ್ತು ಸುರಾನ ಸ್ವತಂತ್ರ ಪಿಯು ಕಾಲೇಜಿನ ಭರತ್ ಅವರ ನಾಯಕತ್ವದಲ್ಲಿ ತಲಾ 12 ಸದಸ್ಯರನ್ನು ಒಳಗೊಂಡ ರಾಜ್ಯ ತಂಡವನ್ನು ಕರ್ನಾಟಕ ರಾಜ್ಯ ಡಾಜ್‌ಬಾಲ್ ಸಂಸ್ಥೆ ಪ್ರಕಟಿಸಿದೆ.

ಟೂರ್ನಿಯಲ್ಲಿ 20ಕ್ಕೂ ಅಧಿಕ ರಾಜ್ಯಗಳ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ.

ಬಾಲಕಿಯರ ತಂಡ: ದೀಪ್ಸಿಖಾ ಗದ್ದಮ್, ಲೀಶಾ ಡಿ. ಚೌಹಾಣ್, ವರ್ಷಿತಾ ಎನ್, ವರ್ಷರಾಜ್, ಆಧ್ಯಾಶ್ರೀ, ಪಾವನಿ ಸಿ.ಎಚ್, ಧ್ರುವಿ ಎಸ್, ಪೂರ್ವಿ ಶೆಣೈ, ಆಶ್ರಿತಾ, ತನುಶ್ರೀ ಕೆ, ಲೌಕ್ಯಾ ಆರ್. ಮತ್ತು ಅಮೃತಾ ಆರ್; ರಾಘವೇಂದ್ರ (ಕೋಚ್). ಗೀತಾ (ಮ್ಯಾನೇಜರ್).

ಬಾಲಕರ ತಂಡ: ಭರತ್ ವಿ.ಬಿ, ವಿಶ್ವ ಐ.ಎಂ, ರಣವೀರ್ ರಾಣಾ, ಗೋಕುಲ್ ಟಿ. ರಾಜ್, ಸಂಜಯ್ ಆರ್, ದೇವಾಂಶ್ ಜೆ.ಎಸ್. ಭಂಡಾರಿ, ರಣವಿಜಯ್ ಸಿಂಗ್, ಶುಭ್ ಮಿತ್ತಲ್, ಮೇಘರಾಜ್ ಹೆಚ್, ಗಣೇಶ್ ಬಿ.ಆರ್, ವರುಣ್ ಬಿ. ಮತ್ತು ಧನ್ವಿತ್ ಯಾದವ್ ಎಚ್; ಸಂಪತ್ ಕುಮಾರ್ (ಕೋಚ್) ಮತ್ತು ರಾಘವೇಂದ್ರ (ಮ್ಯಾನೇಜರ್).



ಎಫ್‌ಸಿ ಅಗ್ನಿಪುತ್ರ ತಂಡದ ಮೊಹಮ್ಮದ್ ಶಫೀಕ್ ಅಹ್ಮದ್ (ಹಳದಿ) ಪರಿಕ್ರಮ ತಂಡದ ಲಾಂಚುಂಗ್ರೆ ಪಮೇಯ್ (ನೀಲಿ) ಚೆಂಡಿಗಾಗಿ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಎಫ್‌ಸಿ ಅಗ್ನಿಪುತ್ರ ತಂಡವು ಸಿ. ಪುಟ್ಟಯ್ಯ ಸ್ಮಾರಕ ಕಪ್ ಟೂರ್ನಿಯ ಪಂದ್ಯದಲ್ಲಿ 2–0 ಗೋಲುಗಳಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ಅಗ್ನಿಪುತ್ರ ಪರ ಸತೀಶ್ ಕುಮಾರ್ (45ನೇ ನಿಮಿಷ) ಮತ್ತು ಅಜ್ಫರ್ ಮೂರಾನಿ (62ನೇ) ತಲಾ ಒಂದು ಗೋಲು ಗಳಿಸಿದರು.

ಎ ಗುಂಪಿನ ಪಂದ್ಯದಲ್ಲಿ ರೆಬೆಲ್ಸ್ ಎಫ್‌ಸಿ ತಂಡವು 2–2 ಗೋಲುಗಳಿಂದ ಕೊಡಗು ಎಫ್‌ಸಿ ಜೊತೆ ಡ್ರಾ ಸಾಧಿಸಿತು. ರೆಬೆಲ್ಸ್ ಪರ ರಿನ್ರೀತಾನಾ ಶೈಜಾ (29ನೇ ಮತ್ತು 66ನೇ) ಗೋಲು ಗಳಿಸಿದರು. ಕೊಡಗು ತಂಡದ ಬಿ.ಎಸ್. ಮೃಣಾಲ್ ಮುತ್ತಣ್ಣ (19ನೇ) ಮತ್ತು ಡಿ. ಲಾಲ್ಸಂಗ್ಪುಯಾ (35ನೇ) ಚೆಂಡನ್ನು ಗುರಿ ಸೇರಿಸಿದರು.

ಇಂದಿನ ಪಂದ್ಯಗಳು

ಎಎಸ್‌ಸಿ ಅಂಡ್ ಸೆಂಟರ್– ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ (ಮಧ್ಯಾಹ್ನ 1)

ರೂಟ್ಸ್ ಎಫ್‌ಸಿ– ಕಿಕ್‌ಸ್ಟಾರ್ಟ್ ಎಫ್‌ಸಿ (ಸಂಜೆ 4)

ಗ್ರೀನ್ ಪಾರ್ಕ್: 2ನೇ ಟೆಸ್ಟ್ ಇಂದಿನಿಂದ • ರೋಹಿತ್ ಶರ್ಮಾ ಬಳಗಕ್ಕೆ ಬಾಂಗ್ಲಾದೇಶ ಸವಾಲು

ದಾಖಲೆ ಮೇಲೆ ಭಾರತ ಕಣ್ಣು

ಪ್ರಜಾವಾಣಿ ವಾರ್ತೆ

ಕಾನ್ಪುರ: ಸ್ವದೇಶದಲ್ಲಿ ಹದಿನೆಂಟನೇ ಟೆಸ್ಟ್ ಸರಣಿಯನ್ನು ಜಯಿಸಿ ದಾಖಲೆ ಬರೆಯುವತ್ತ ಆತಿಥೇಯ ಭಾರತ ತಂಡ ಕಣ್ಣಿಟ್ಟಿದೆ. ರೋಹಿತ್ ಶರ್ಮಾ ನಾಯಕತ್ವದ ತಂಡವು ಶುಕ್ರವಾರ ಇಲ್ಲಿಯ ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಬಾಂಗ್ಲಾದೇಶ ಎದುರಿನ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಎರಡು ಪಂದ್ಯಗಳ ಈ ಸರಣಿಯ ಮೊದಲ ಹಣಾಹಣಿಯಲ್ಲಿ ಭಾರತ ತಂಡವು ಜಯಿಸಿತ್ತು. ಚೆನ್ನೈನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಆಲ್‌ರೌಂಡ್ ಆಟದ ಬಲದಿಂದ 280 ರನ್‌ಗಳ ಜಯಸಾಧಿಸಿತ್ತು. ಇವರಿಬ್ಬರೂ ಮೊದಲ ಇನಿಂಗ್ಸ್‌ನಲ್ಲಿ ಏಳನೇ ವಿಕೆಟ್ ಜೊತೆಯಾಟದಲ್ಲಿ 199 ರನ್ ಸೇರಿಸಿ ತಂಡಕ್ಕೆ ಆಸರೆಯಾಗಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಇಬ್ಬರೂ ಸೇರಿ 9 ವಿಕೆಟ್ ಹಂಚಿಕೊಂಡಿದ್ದರು.

ವಿಕೆಟ್‌ಕೀಪರ್ –ಬ್ಯಾಟರ್ ರಿಷಭ್ ಪಂತ್ ಅವರೂ ಶತಕ ಬಾರಿಸಿ ತಮ್ಮ ‘ಕಮ್ ಬ್ಯಾಕ್’ ಘೋಷಿಸಿದ್ದರು. ಶುಭಮನ್ ಗಿಲ್ ಕೂಡ ಶತಕ ಗಳಿಸಿದ್ದರು. ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಮತ್ತು ಹೊಸ ಪ್ರತಿಭೆ ಆಕಾಶದೀಪ್ ಅವರ ಬೌಲಿಂಗ್ ರಂಗೇರಿತ್ತು.



ಕೆ.ಎಲ್. ರಾಹುಲ್

ಪಂದ್ಯ ಆರಂಭ: ಬೆಳಿಗ್ಗೆ 9
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಆದರೆ ಭಾರತ ತಂಡದ ಅನುಭವಿ ಬ್ಯಾಟರ್‌ಗಳು ತಮ್ಮ ಲಯಕ್ಕೆ ಮರಳುವರೇ ಎಂಬ ಕುತೂಹಲ ಈ ಪಂದ್ಯದಲ್ಲಿದೆ. ಏಕೆಂದರೆ; ಮೊದಲ ಪಂದ್ಯದಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಹೆಚ್ಚು ರನ್ ಗಳಿಸಲಿಲ್ಲ. ರೋಹಿತ್ ಮತ್ತು ವಿರಾಟ್ ಎರಡೂ ಇನಿಂಗ್ಸ್‌ಗಳಲ್ಲಿ ದೊಡ್ಡ ಇನಿಂಗ್ಸ್ ಆಡುವಲ್ಲಿ ಸಫಲರಾಗಲಿಲ್ಲ. ರಾಹುಲ್ ಎರಡನೇ ಇನಿಂಗ್ಸ್‌ನಲ್ಲಿ ಆಟಕ್ಕೆ ಕುದುರಿಕೊಂಡ ಹೊತ್ತಿನಲ್ಲಿ ಡಿಕ್ಲೇರ್ ಘೋಷಿಸಲಾಗಿತ್ತು. ಆದ್ದರಿಂದ ಅವರಿಗೆ ಇಲ್ಲಿ ಮತ್ತೊಂದು ಅವಕಾಶದ ನಿರೀಕ್ಷೆ ಇದೆ.

ಬಾಂಗ್ಲಾ ತಂಡವು ಪಾಕಿಸ್ತಾನ ತಂಡದ ಎದುರು 2–0ಯಿಂದ ಟೆಸ್ಟ್ ಸರಣಿ ಜಯಿಸಿತ್ತು. ಪಾಕ್ ತಂಡವನ್ನು ಅದರ ನೆಲದಲ್ಲಿಯೇ ಮಣಿಸಿದ್ದ ಭರ್ತಿ ಆತ್ಮವಿಶ್ವಾಸದೊಂದಿಗೆ ಭಾರತಕ್ಕೆ ಬಂದಿತ್ತು. ಆದರೆ ಚೆನ್ನೈ ಬಿಸಿಲಿನಲ್ಲಿ ಪ್ರವಾಸಿ ತಂಡದ ಆತ್ಮವಿಶ್ವಾಸ ಕರಗಿಹೋಯಿತು. ನಜ್ಮುಲ್ ಹುಸೇನ್ ಶಾಂತೊ ನಾಯಕತ್ವದ ತಂಡಕ್ಕೆ ಈಗೇನಿದ್ದರೂ ಸರಣಿ ಸಮ ಮಾಡಿಕೊಳ್ಳುವ ಅವಕಾಶವೊಂದು ಬಾಕಿ ಉಳಿದಿದೆ.

ಬಾಂಗ್ಲಾ ತಂಡದ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರು ತಮ್ಮ ದೇಶದ ಕ್ರಿಕೆಟ್‌ಗಾಗಿ ನೀಡಿರುವ ಕೊಡುಗೆ ದೊಡ್ಡದು. ಈ ವಿಷಯದಲ್ಲಿ ಅವರ ಬದ್ಧತೆಯೂ ದೊಡ್ಡದು. ಆದರೆ ಬಾಂಗ್ಲಾದಲ್ಲಿ ಅವಾಮಿ ಲೀಗ್ ಪಕ್ಷವು ಅಧಿಕಾರದಿಂದ ಪತನವಾದ ನಂತರ ಹಲವು ಕ್ರಿಮಿನಲ್ ಆರೋಪಗಳಿಗೆ ಅವರು ಈಡಾಗಿದ್ದಾರೆ. 37 ವರ್ಷದ ಆಟಗಾರ ಒತ್ತಡದಲ್ಲಿ ಆಡುತ್ತಿರುವುದು ತಂಡದ ಬಲ ಕಡಿಮೆಯಾಗಲು ಕಾರಣವಾಗಿದೆ. ಬಾಂಗ್ಲಾ ತಂಡವು ಬಲಾಢ್ಯ ಭಾರತ ಬಳಗದ ಎದುರು ಗೆಲ್ಲಬೇಕಾದರೆ ಎಲ್ಲ ಆಯಾಮಗಳಿಂದಲೂ ಸಿದ್ಧವಾಗಬೇಕಿದೆ. 2013ರಿಂದ ಇಲ್ಲಿಯವರೆಗೆ ಭಾರತ ತಂಡವು ತಾಯ್ನೆಲದಲ್ಲಿ ಕೇವಲ 4 ಟೆಸ್ಟ್ ಪಂದ್ಯಗಳನ್ನು ಮಾತ್ರ ಸೋತಿದೆ. ಗೆಲುವಿನದ್ದೇ ಸಿಂಹಪಾಲು ಇದೆ.



ಕಾನ್ಪುರದಲ್ಲಿ ಅಭ್ಯಾಸದ ಸಂದರ್ಭದಲ್ಲಿ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಆಪ್ತ ಸಂವಾದ –ಎಎಫ್‌ಪಿ ಚಿತ್ರ

ಜಪಾನ್ ಓಪನ್: ಅಗ್ರ ಶ್ರೇಯಾಂಕಿತರಿಗೆ ಆಘಾತ

ಟೋಕಿಯೊ (ಎಎಫ್‌ಪಿ): ಜಪಾನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಅಗ್ರ 10 ಶ್ರೇಯಾಂಕದ ಆಟಗಾರರ ಪೈಕಿ ನಾಲ್ವರು ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು.

ಅಮೆರಿಕ ಓಪನ್ ರನ್ನರ್ ಅಪ್, ಅಗ್ರ ಶ್ರೇಯಾಂಕದ ಟೇಲರ್ ಫ್ರಿಟ್ಜ್ (ಅಮೆರಿಕ) ಅವರು 4–6, 6–3, 3–6ರಿಂದ ಫ್ರಾನ್ಸ್‌ನ ಆರ್ಥರ್ ಫಿಲ್ಸ್ ಅವರಿಗೆ ಶರಣಾದರು. ಮೂರನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್ (ನಾರ್ವೆ) 6–7(5/7), 1–6ರಿಂದ ಆಸ್ಟ್ರೇಲಿಯಾದ ಜೋರ್ಡಾನ್ ಥಾಂಪ್ಸನ್ ಅವರ ವಿರುದ್ಧ ಪರಾಭವಗೊಂಡರು.

ನಾಲ್ಕನೇ ಶ್ರೇಯಾಂಕದ ಸ್ಟೆಫಾನೊಸ್ ಸಿಟ್ಸಿಪಾಸ್ (ಗ್ರೀಸ್) 6–4, 1–6, 2–6 ರಿಂದ ಅಮೆರಿಕದ ಅಲೆಕ್ಸ್ ಮೈಕೆಲ್ಸೆನ್ ಅವರ ವಿರುದ್ಧ ಮುಗ್ಗರಿಸಿದರು.

ಏಳನೇ ಶ್ರೇಯಾಂಕದ ಫ್ರಾನ್ಸೆಸ್ ಟಿಯಾಫೊ (ಅಮೆರಿಕ) 5–7, 3–6ರಿಂದ ಸ್ವದೇಶದ ಬ್ರಾಂಡನ್ ನಕಾಶಿಮಾ ಅವರಿಗೆ ಶರಣಾದರು.

ಸಿನ್ನರ್ ಶುಭಾರಂಭ: ವಿಶ್ವದ ಅಗ್ರಮಾನ್ಯ ಆಟಗಾರ ಇಟಲಿಯ ಯಾನಿಕ್ ಸಿನ್ನರ್ ಅವರು ಚೀನಾ ಓಪನ್‌ನಲ್ಲಿ ಶುಭಾರಂಭ ಮಾಡಿದರು. ಅವರು ಮೊದಲ ಸುತ್ತಿನಲ್ಲಿ 4-6, 6-3, 6-1ರಿಂದ ವಿಶ್ವದ 28ನೇ ಕ್ರಮಾಂಕದ ಚಿಲಿಯ ನಿಕೋಲಸ್ ಜ್ಯಾರಿ ಅವರನ್ನು ಸೋಲಿಸಿದರು.

ಟ್ರೀಸಾ– ಗಾಯತ್ರಿ ಎಂಟರ ಘಟ್ಟಕ್ಕೆ

ಕ್ವಾರ್ಟರ್‌ಗೆ ಕಿದಂಬಿ

ಮಕಾವು (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಮಕಾವು ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯೂ ಎಂಟರ ಘಟ್ಟಕ್ಕೆ ಮುನ್ನಡೆಯಿತು.

ಭಾರತದ ಆಟಗಾರರ ವ್ಯವಹಾರವಾಗಿದ್ದ 16ರ ಘಟ್ಟದ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಕಿದಂಬಿ ಅವರು 21-13, 21-18ರಿಂದ ಕನ್ನಡಿಗ ಆಯುಷ್ ಶೆಟ್ಟಿ ಅವರನ್ನು ಸೋಲಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ 31 ವರ್ಷ ವಯಸ್ಸಿನ ಕಿದಂಬಿ, ಮೇನಲ್ಲಿ ಗಾಯಗೊಂಡಿದ್ದು ಚೇತರಿಸಿಕೊಂಡ ಬಳಿಕ ಮೊದಲ ಬಾರಿ ಟೂರ್ನಿ ಆಡುತ್ತಿದ್ದಾರೆ. ಇಲ್ಲಿ ಸಿಂಗಲ್ಸ್‌ನಲ್ಲಿ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಸ್ಪರ್ಧಿ ಅವರಾಗಿದ್ದಾರೆ.

ಮುಂದಿನ ಸುತ್ತಿನಲ್ಲಿ ಅವರು ಎರಡನೇ ಶ್ರೇಯಾಂಕದ ಆಂಗಸ್ ಲಾಂಗ್ (ಹಾಂಗ್‌ಕಾಂಗ್) ಅವರನ್ನು ಎದುರಿಸಲಿದ್ದಾರೆ. ಅವರೊಂದಿಗೆ ಎಂಟು ಮುಖಾಮುಖಿಯಲ್ಲಿ ಭಾರತದ ಆಟಗಾರ 4–4 ಗೆಲುವಿನ ದಾಖಲೆ ಹೊಂದಿದ್ದಾರೆ.



ಭಾರತದ ಕಿದಂಬಿ ಶ್ರೀಕಾಂತ್

ಟ್ರೀಸಾ– ಗಾಯತ್ರಿ ಜೋಡಿಯು 22-20, 21-11ರಲ್ಲಿ ನೇರ ಗೇಮ್‌ಗಳಿಂದ ಚೀನಾ ತೈಪೆಯ ಲಿನ್ ಚಿಹ್ ಚುನ್ ಮತ್ತು ಟೆಂಗ್ ಚುನ್ ಹ್ಸುನ್ ಅವರನ್ನು ಹಿಮ್ಮೆಟ್ಟಿಸಿತು.

ಮಹಿಳೆಯರ ಸಿಂಗಲ್ಸ್‌ನಲ್ಲಿ ತಸ್ನಿಮ್ ಮಿರ್ 17-21, 21-13, 10-21ರಿಂದ ನಾಲ್ಕನೇ ಶ್ರೇಯಾಂಕದ ಜಪಾನ್‌ನ ಟೊಮೊಕಾ ಮಿಯಾಜಾಕಿ ವಿರುದ್ಧ ಮೂರು ಗೇಮ್‌ಗಳ ಹೋರಾಟ ನಡೆಸಿ ಪರಾಭವಗೊಂಡರು.

ಮಿಶ್ರ ಡಬಲ್ಸ್‌ನಲ್ಲಿ ಬಿ.ಸುಮೀತ್ ರೆಡ್ಡಿ ಮತ್ತು ಎನ್. ಸಿಕ್ಕಿ ರೆಡ್ಡಿ ಅವರೂ ನಿರಾಸೆ ಮೂಡಿಸಿದರು. ಅವರು 17-21, 14-21ರಿಂದ ಮಲೇಷ್ಯಾದ ವಾಂಗ್ ಟಿಯೆನ್ ಸಿ ಮತ್ತು ಲಿಮ್ ಚಿವ್ ಸಿಯೆನ್ ಅವರಿಗೆ ಶರಣಾದರು.

ಟಿ20ಗೆ ವಿದಾಯ ಹೇಳಿದ ಶಕೀಬ್

ಕಾನ್ಪುರ (ಪಿಟಿಐ): ಬಾಂಗ್ಲಾದೇಶದ ಅನುಭವಿ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರು ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದು, ಭಾರತ ವಿರುದ್ಧ ಶುಕ್ರವಾರ ಆರಂಭವಾಗುವ ಎರಡನೇ ಟೆಸ್ಟ್ ಪಂದ್ಯ ತಮ್ಮ ಪಾಲಿಗೆ ಕೊನೆಯದಾಗಬಹುದು ಎಂದಿದ್ದಾರೆ. ಮುಂದಿನ ವರ್ಷ ಚಾಂಪಿಯನ್ಸ್ ಟ್ರೋಫಿ ಬಳಿಕ ಏಕದಿನ ಕ್ರಿಕೆಟ್‌ಗೂ ನಿವೃತ್ತಿ ಘೋಷಿಸುವುದಾಗಿ ಅವರು ಪ್ರಕಟಿಸಿದ್ದಾರೆ.

ತಮ್ಮ ದೇಶದಲ್ಲಿ ಕೊಲೆ ಆರೋಪ ಹೊತ್ತಿರುವ, 37 ವರ್ಷ ವಯಸ್ಸಿನ ಶಕೀಬ್, ಬಾಂಗ್ಲಾದೇಶ ಕಂಡ ಶ್ರೇಷ್ಠ ಕ್ರಿಕೆಟ್ ತಾರೆಗಳಲ್ಲಿ ಒಬ್ಬರು. ‘ತವರಿನಲ್ಲಿ, ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿ ಸಾಧ್ಯವಾಗದೇ ಹೋದಲ್ಲಿ ಭಾರತ ವಿರುದ್ಧ ಸರಣಿಯ ಎರಡನೇ ಹಾಗೂ ಅಂತಿಮ ಪಂದ್ಯವೇ ತಮ್ಮ ಪಾಲಿನ ಕೊನೆಯ ಟೆಸ್ಟ್ ಆಗಲಿದೆ’ ಎಂದು ಅವರು ಮಾಧ್ಯಮಗೋಷ್ಠಿಯಲ್ಲಿ ಗುರುವಾರ ಪ್ರಕಟಿಸಿದರು.

ಮುಂದಿನ ತಿಂಗಳು ದಕ್ಷಿಣ ಆಫ್ರಿಕಾ ಸರಣಿ ನಡೆಯಲಿದ್ದು, ಎರಡನೇ ಟೆಸ್ಟ್ ಪಂದ್ಯವನ್ನು ಮೀರ್‌ಪುರದಲ್ಲಿ ಹಮ್ಮಿಕೊಳ್ಳುವ ಸಾಧ್ಯತೆಯಿದೆ. ಈ ಸರಣಿಗೆ ತಮ್ಮನ್ನು ಆಯ್ಕೆ ಮಾಡುವ ಭರವಸೆಯನ್ನು ಅವರು ಹೊಂದಿದ್ದಾರೆ.



ಶಕೀಬ್ ಅಲ್ ಹಸನ್

‘ನನ್ನ ಪಾಲಿಗೆ ಆಟ ಕಷ್ಟವಾಗುತ್ತ ಬಂದಿದೆ. ಆಟದ ಮೇಲೆ ಗಮನ ಕೇಂದ್ರೀಕರಿಸಲು ಎಷ್ಟು ಕಷ್ಟಪಟ್ಟಿದ್ದೇನೆ ಎಂಬುದು ಅಲ್ಲಾಹುಗಷ್ಟೇ ಗೊತ್ತು’ ಎಂದು ಬಾಂಗ್ಲಾದೇಶ ಕಂಡ ಶ್ರೇಷ್ಠ ಆಲ್‌ರೌಂಡರ್ ಒಪ್ಪಿಕೊಂಡರು.

ಶಕೀಬ್ 129 ಟಿ20 ಪಂದ್ಯಗಳನ್ನು ಆಡಿದ್ದು 2551 ರನ್ ಹಾಗೂ 149 ವಿಕೆಟ್‌ಗಳನ್ನು ಪಡೆದಿದ್ದಾರೆ.

‘ಟಿ20 ವಿಶ್ವಕಪ್ ವೇಳೆ ಕೊನೆಯ ಟಿ20 ಪಂದ್ಯ ಆಡಿದ್ದೆ. ಇದನ್ನು ಆಯ್ಕೆಗಾರರ ಜೊತೆ ಚರ್ಚಿಸಿದ್ದೇನೆ. 2026ರಲ್ಲಿ ಮುಂದಿನ ಟಿ20 ವಿಶ್ವಕಪ್ ಇರುವ ಕಾರಣ ಇದು ವಿದಾಯ ಹೇಳಲು ಸೂಕ್ತ ಸಮಯ’ ಎಂದರು.

70 ಟೆಸ್ಟ್ ಪಂದ್ಯಗಳಲ್ಲಿ ಅವರು 4,600 ರನ್ ಹಾಗೂ 242 ವಿಕೆಟ್ ಕಬಳಿಸಿದ್ದಾರೆ. ಕಳೆದ ತಿಂಗಳು ಬಾಂಗ್ಲಾ ದೇಶದಲ್ಲಿ ಪ್ರಧಾನಿ ಶೇಖ್ ಹಸೀನಾ ಪದಚ್ಯುತಿಗೆ ಕಾರಣವಾದ ವಿದ್ಯಾರ್ಥಿ ದಂಗೆಯ ವೇಳೆ ಶಕೀಬ್ ಅವರನ್ನು ಕೊಲೆ ಪ್ರಕರಣವೊಂದರಲ್ಲಿ ದೋಷಿಯಾಗಿ ಆರೋಪಿಸಲಾಗಿದೆ. ಶಕೀಬ್ ಕೂಡ ಅವಾಮಿ ಲೀಗ್‌ನಿಂದ ಸಂಸದರಾಗಿದ್ದರು. ಗಾರ್ಮೆಂಟ್ ಉದ್ಯೋಗಿಯಾಗಿದ್ದ ಮೊಹಮ್ಮದ್ ರುಬೆಲ್ ಕೊಲೆ ಪ್ರಕರಣದಲ್ಲಿ ಅವರ ತಂದೆ ರಫಿಕುಲ್ ಇಸ್ಲಾಂ ಅವರು ಶಕೀಬ್ ವಿರುದ್ಧ ದೂರು ಸಲ್ಲಿಸಿದ್ದಾರೆ.

ವಿನೂ ಮಂಕಡ್ ಟ್ರೋಫಿ: ಧೀರಜ್ ಗೌಡಗೆ ನಾಯಕತ್ವ

ಬೆಂಗಳೂರು: ಧೀರಜ್ ಗೌಡ ಅವರನ್ನು ವಿನೂ ಮಂಕಡ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ.



ಧೀರಜ್ ಗೌಡ

ಗುರುವಾರ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು 15 ಆಟಗಾರರ ಪಟ್ಟಿಯನ್ನು ಪ್ರಕಟಿಸಿದೆ. ಕಳೆದ ಋತುವಿನಲ್ಲಿ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಿದ್ದ ಧೀರಜ್‌ಗೆ ನಾಯಕ ಹಾಗೂ ಹಾರ್ದಿಕ್ ರಾಜ್ ಅವರಿಗೆ ಉಪನಾಯಕ ಪಟ್ಟ ನೀಡಲಾಗಿದೆ. ಮಾಜಿ ಆಟಗಾರ ಕೆ.ಬಿ. ಪವನ್ ಅವರು ತಂಡದ ಕೋಚ್ ಆಗಿದ್ದಾರೆ.

ಹೋದ ವರ್ಷ ಕೂಚ್ ಬಿಹಾರ್ ಟ್ರೋಫಿ ಜಯಿಸಿದ್ದ ಕರ್ನಾಟಕ ತಂಡಕ್ಕೆ ಆಲ್‌ರೌಂಡರ್ ಧೀರಜ್ ಗೌಡ ನಾಯಕರಾಗಿದ್ದರು.

ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅವರು ಪ್ರಕಟಿಸಿರುವ ತಂಡ ಇಂತಿದೆ: ಧೀರಜ್ ಗೌಡ (ನಾಯಕ), ರವಿಕೈರವ ರೆಡ್ಡಿ (ವಿಕೆಟ್‌ಕೀಪರ್), ಆದೇಶ್ ಡಿ ಅರಸ್, ಎಂ.ಬಿ. ಶಿವಂ, ರೋಹಿತ್ ಆರ್. ವಾರಂಬಳ್ಳಿ, ಹಾರ್ದಿಕ್ ರಾಜ್ (ಉಪನಾಯಕ), ಎ. ಸಿದ್ಧಾರ್ಥ್, ಆರ್. ಪ್ರಜ್ವಲ್ ಗೌಡ, ಗೌರವ್ ಶಾನಭಾಗ್, ವೈಭವ ಶರ್ಮಾ, ಮಹೇಶಕುಮಾರ್ ಬಂಗೇರಾ, ಪಿ. ಪ್ರತೀಕ್ (ವಿಕೆಟ್‌ಕೀಪರ್), ಎಸ್. ಲೋಹಿತ್, ಅಕ್ಷತ್ ಪ್ರಭಾಕರ್, ಮಣಿಕಾಂತ ಶಿವಾನಂದ. ಕೆ.ಬಿ. ಪವನ್ (ಕೋಚ್), ಎಸ್.ಎಲ್. ಅಕ್ಷಯ್ (ಸಹಾಯಕ ಕೋಚ್), ಎಸ್.ಎ. ಸತೀಶ್ (ಮ್ಯಾನೇಜರ್), ಸಮಿ ಉರ್ ರೆಹಮಾನ್ (ಸ್ಟ್ರೆಂಥ್–ಕಂಡಿಷನಿಂಗ್ ಕೋಚ್), ಜೊಬಿ ಮಾಥ್ಯೂ (ಫಿಸಿಯೊ), ಪಿ. ರಾಜೀವ (ವಿಡಿಯೊ ಅನಾಲಿಸ್ಟ್).

ಜೂನಿಯರ್ ಹಾಕಿ: ರಾಜ್ಯ ತಂಡಕ್ಕೆ ಯಮುನಾ ಸಾರಥ್ಯ

ಬೆಂಗಳೂರು: ಯಮುನಾ ಎಸ್. ಅವರು ಜಾರ್ಖಂಡ್‌ನ ರಾಂಚಿಯಲ್ಲಿ ಇದೇ 30ರಿಂದ ಅ.10ರವರೆಗೆ ನಡೆಯುವ ಹಾಕಿ ಇಂಡಿಯಾ ಜೂನಿಯರ್ ಮಹಿಳಾ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

18 ಆಟಗಾರ್ತಿಯರ ರಾಜ್ಯ ತಂಡವನ್ನು ಹಾಕಿ ಕರ್ನಾಟಕ ಗುರುವಾರ ಪ್ರಕಟಿಸಿದೆ.

ಕರ್ನಾಟಕ ತಂಡವು ಗುಜರಾತ್, ಹಿಮಾಚಲ ಮತ್ತು ಉತ್ತರ ಪ್ರದೇಶದೊಂದಿಗೆ ಎಚ್ ಗುಂಪಿನಲ್ಲಿದೆ.

ತಂಡ ಹೀಗಿದೆ: ಯಮುನಾ ಎಸ್. (ನಾಯಕಿ), ಶ್ರಾವ್ಯಾ ಪಿ.ಡಿ, ಹರ್ಷಿತಾ ಎಚ್.ಎಚ್, ಚತುರ್ಥಿ ಡಿ.ಎ, ದೇವಿಕಾ ಎನ್, ನಿಧಿ ನೀಲಮ್ಮ ಪಿ.ಎಸ್, ಮಾನಸಾ ಎಂ.ಎಸ್, ದೀಪಿಕಾ ಆರ್, ಬೊಳ್ಳಮ್ಮ ಪಿ.ಎಂ, ದೀಕ್ಷಿತಾ ಡಿ, ಶ್ರುತಿ ಸಿ. ಹುಗ್ಗೆನ್ನವರ, ಮೆಹರ್ ಕೌರ್ ಮೆಹ್ತಾ, ಚಂದನಾ ಟಿ.ಸಿ, ತಾಜ್ ಬೆಳ್ಳಿಯಪ್ಪ, ದಿಶಾ ಪೊನ್ನಮ್ಮ ಎಂ.ಯು, ವಿ.ಸೌಮ್ಯಾ, ನಿಸರ್ಗಾ ಎಸ್.ಬಿ, ರಕ್ಷಿತಾ ಜೆ; ವರ್ಗೀಸ್ ಜಾನ್ (ಕೋಚ್), ಸಾರಾ ಸಿ. ಶಿಂಧೆ (ಮ್ಯಾನೇಜರ್).

ಹಾರ್ದಿಕ್ ಆಲ್‌ರೌಂಡ್ ಆಟ ಯುವ ಕ್ರಿಕೆಟ್: ಭಾರತಕ್ಕೆ ಸರಣಿ

ಪುದುಚೇರಿ (ಪಿಟಿಐ): ಕನ್ನಡಿಗ ಹಾರ್ದಿಕ್ ರಾಜ್ (55ಕ್ಕೆ3 ಮತ್ತು 30 ರನ್) ಅವರ ಆಲ್‌ರೌಂಡ್ ಆಟದ ಬಲದಿಂದ ಭಾರತ 19 ವರ್ಷದೊಳಗಿನವರ ತಂಡವು ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡದ ಎದುರಿನ ಸರಣಿಯ ಮೂರನೇ ಪಂದ್ಯದಲ್ಲಿ ಜಯಿಸಿತು. ಇದರೊಂದಿಗೆ 3–0ಯಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಪುದುಚೇರಿ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಭಾರತ ಯುವ ತಂಡವು 7 ರನ್‌ಗಳಿಂದ ಗೆದ್ದಿತು. ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡವು ರುದ್ರ ಪಟೇಲ್ (77; 81ಎ) ಮತ್ತು ಮೊಹಮ್ಮದ್ ಅಮಾನ್ (71; 72ಎ) ಅರ್ಧಶತಕಗಳ ಬಲದಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 324 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಯುವ ತಂಡದ ನಾಯಕ ಒಲಿವರ್ ಪೀಕೆ (111; 115ಎ, 4X9, 6X2) ಮತ್ತು ಸ್ಟೀವನ್ ಹೊಗನ್ (104; 84ಎ, 4X10, 6X4) ಅವರು ಶತಕ ಗಳಿಸಿದರು.

ಇದರಿಂದಾಗಿ ತಂಡವು ಗೆಲುವಿನ ಸನಿಹ ಸಾಗಿತ್ತು. ಆದರೆ ಹಾರ್ದಿಕ್, ಯುಧಜಿತ್ ಗುಹಾ (40ಕ್ಕೆ2) ಹಾಗೂ ಕಿರಣ ಚೊರಮಲೆ (59ಕ್ಕೆ2) ಅವರ ಬೌಲಿಂಗ್ ಮುಂದೆ ತಂಡವು ಗೆಲುವಿನ ಗುರಿ ಮುಟ್ಟಲಿಲ್ಲ.



ಹಾರ್ದಿಕ್ ರಾಜ್

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8ಕ್ಕೆ324 (ಮೊಹಮ್ಮದ್ ಅಮಾನ್ 71, ರುದ್ರ ಪಟೇಲ್ 77, ಹಾರ್ದಿಕ್ ರಾಜ್ 30) ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 7ಕ್ಕೆ317 (ಒಲಿವರ್ ಪೀಕೆ 111, ಸ್ಟೀವನ್ ಹಾಗನ್ 104, ಹಾರ್ದಿಕ್ ರಾಜ್ 55ಕ್ಕೆ3, ಕಿರಣ ಚೊರ್‌ಮಲೆ 59ಕ್ಕೆ2, ಯುಧಜಿತ್ ಗುಹಾ 40ಕ್ಕೆ 2) **ಫಲಿತಾಂಶ:** ಭಾರತ 19 ವರ್ಷದೊಳಗಿನವರ ತಂಡಕ್ಕೆ 7 ರನ್‌ಗಳ ಜಯ.

ಚಾಂದಿಮಲ್ ಶತಕ, ಭರ್ಜರಿ ಮೊತ್ತದತ್ತ ಲಂಕಾ

ಗಾಲೆ (ಎಎಫ್‌ಪಿ): ದಿನೇಶ್ ಚಾಂದಿಮಲ್ ಅವರ ಶತಕದ ನೆರವಿನಿಂದ ಶ್ರೀಲಂಕಾ ತಂಡ ಗುರುವಾರ ನ್ಯೂಜಿಲೆಂಡ್ ವಿರುದ್ಧ ಆರಂಭವಾದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ 3 ವಿಕೆಟ್‌ಗೆ 306 ರನ್‌ಗಳೊಡನೆ ಭರ್ಜರಿಯಾಗಿ ದಿನದಾಟ ಮುಗಿಸಿತು.

ಚಹ ವಿರಾಮದ ನಂತರ ಎಡಗೈ ಆಟಗಾರ ಚಾಂದಿಮಲ್, ವೇಗಿ ಗ್ಲೆನ್ ಫಿಲಿಪ್ಸ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಅವರು 116 ರನ್ ಬಾರಿಸಿದ್ದು, ಇದರಲ್ಲಿ 15 ಬೌಂಡರಿಗಳಿದ್ದವು. ಪ್ರಕೃತಿ ಸೌಂದರ್ಯದ ಈ ಕ್ರೀಡಾಂಗಣದಲ್ಲಿ ಇದು ಅವರ ಆರನೇ ಶತಕ ಮತ್ತು ಒಟ್ಟಾರೆ ಟೆಸ್ಟ್‌ಗಳಲ್ಲಿ 16ನೇ ಶತಕವಾಗಿದೆ.



ದಿನೇಶ್ ಚಾಂದಿಮಲ್

ಅರ್ಧ ಶತಕ ಗಳಿಸಿ ಅಜೇಯರಾಗುಳಿದಿರುವ ಏಂಜೆಲೊ ಮ್ಯಾಥ್ಯೂಸ್ (78) ಮತ್ತು ಕಮಿಂದು ಮೆಂಡಿಸ್ (51) ಅವರು ಶುಕ್ರವಾರ ಆಟ ಮುಂದುವರಿಸುವರು. 25 ವರ್ಷ ವಯಸ್ಸಿನ ಕಮಿಂದು ಅವರಿಗೆ ಇದು ವಿಶ್ವ ದಾಖಲೆಯ ಎಂಟನೇ ನಿರಂತರ ಅರ್ಧ ಶತಕವಾಗಿದೆ. ಎರಡು ವರ್ಷಗಳ ಹಿಂದೆ ಇದೇ ಕ್ರೀಡಾಂಗಣದಲ್ಲಿ ಅವರು ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು.

ಮ್ಯಾಥ್ಯೂಸ್ ಅವರು ಗಾಲೆ ಕ್ರೀಡಾಂಗಣದಲ್ಲಿ ಎರಡು ಸಹಸ್ರ ರನ್ ಪೂರೈಸಿದ ಮೈಲಿಗಲ್ಲನೂ ತಲುಪಿದರು. ಜೋ ರೂಟ್ ಮತ್ತು ಗ್ರಹಾಂ ಗೂಚ್ ಮಾತ್ರ ಇಲ್ಲಿ ಆ ಸಾಧನೆ ಮಾಡಿದ್ದಾರೆ.

ದಿಮುತ್ ಕರುಣಾರತ್ನೆ (46) ಜೊತೆ ಅವರು ಎರಡನೇ ವಿಕೆಟ್‌ಗೆ 122 ರನ್ ಜೊತೆಯಾಟದಲ್ಲಿ ಭಾಗಿಯಾದರು. ಸಂವ ಹನದ ಕೊರತೆಯಿಂದ ರನ್‌ಔಟ್ ಆದ ಕರುಣಾರತ್ನೆ ಮುಖ ಸಿಂಡರಿಸಿಕೊಂಡು ಅಸಮಾಧಾನದಿಂದ ಪೆವಿಲಿಯನ್‌ಗೆ ಮರಳಿದರು. ಇತ್ತೀಚೆಗೆ ನಿಧನರಾದ ನ್ಯೂಜಿಲೆಂಡ್ ತಂಡದ ಮಾಜಿ ಮ್ಯಾನೇಜರ್ ಇಯಾನ್ ಟೇಲರ್ ಅವರ ಗೌರವಾರ್ಥ ಆ ತಂಡದ ಆಟಗಾರರು ತೋಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಕಣಕ್ಕಿಳಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 90 ಓವರುಗಳಲ್ಲಿ 3 ವಿಕೆಟ್‌ಗೆ 306 (ದಿಮುತ್ ಕರುಣಾರತ್ನೆ 46, ದಿನೇಶ್ ಚಾಂದಿಮಲ್ 116, ಏಂಜೆಲೊ ಮ್ಯಾಥ್ಯೂಸ್ ಔಟಾಗದೇ 78, ಕಮಿಂದು ಮೆಂಡಿಸ್ ಔಟಾಗದೇ 51; ಗ್ಲೆನ್ ಫಿಲಿಪ್ಸ್ 33ಕ್ಕೆ1) ವಿರುದ್ಧ ನ್ಯೂಜಿಲೆಂಡ್.